
ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 8
ಫೆಬ್ರವರಿ 23, 2003 ಬೆಲೆ ರೂ. 3.00



ಕರ್ನಾಟಕದ ವಿದ್ಯುತ್ ರಂಗ : ಸಾಗಿದೆ ಎತ್ತ ?


ಗುಲ್ಬರ್ಗಾ : ಸ್ವಾಭಿಮಾನಿ ರೈತನನ್ನು ಕೊಂದೇಬಿಟ್ಟ ಅಧಿಕಾರಿಗಳು

ವಾಜಪೇಯಿ ಹೊರಚಾಚಿದ ಎರಡೆಳೆ ನಾಲಿಗೆ

ಇರಾಕ್ ಯುದ್ಧ ತರುವ ಹಾನಿ?!

ಬಂಡಾಯ ಯಶಸ್ಸಿಗೆ ಕ್ರಾಂತಿಕಾರಿ ಪಕ್ಷ ಅತ್ಯಗತ್ಯ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 16



ಜೈಪಾಲರ ಮೇಲೆ ಹದ್ದಿನ ಕಣ್ಣು ಕಾವಲು ಮುಂದುವರಿಯಿತು. ಆದರೂ ಭೂಗತ ಸೆಲ್‌ನಲ್ಲಿ ಕುಳಿತು ಕಮ್ಯುನಿಸ್ಟ್ ಸಾಹಿತ್ಯ ಓದುವುದು ಮುಂದುವರಿಯಿತು. ಆಗಂತೂ ಕಮ್ಯುನಿಸ್ಟ್ ಪಕ್ಷದ ಸದಸ್ಯನಾಗಿರಲಿಲ್ಲ. ಆದದ್ದು ಬಹಳ ಕಾಲದ ನಂತರವೇ. ಕ್ವಿಟ್ ಇಂಡಿಯಾ ಚಳುವಳಿಗೆ ಜನತೆಯ ಅಭೂತಪೂರ್ವ ಪ್ರತಿಕ್ರಿಯೆ ಸಿಕ್ಕಿತು.ಇದರೊಂದಿಗೆ ಭಾರತೀಯ ಸೈನಿಕರ ಬಂಡಾಯವೂ ತಕ್ಷಣ ಬೆಸೆಯಬೇಕೆಂಬುದನ್ನು ವಿರೋಧಿಸಿದರು ಮೇಜರ್, ಯಾತಕ್ಕಾಗಿ?.... ಈಗ ಓದಿ

ಕನ್ನಡಕ್ಕೆ: ವಿಶ್ವ ಕುಂದಾಪುರ

ತತ್‌ಕ್ಷಣದ ಬಂಡಾಯವನ್ನು ವಿರೋಧಿಸಲು ಕಾರಣವೇನೆಂಬುದನ್ನು ನಾನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸುತ್ತೇನೆ.

1. ನಮ್ಮ ಸಂಘಟನೆ ಇನ್ನೂ ಸಮಗ್ರವಾಗಿ ಕ್ರೋಡೀಕರಣಗೊಂಡಿರಲಿಲ್ಲ. ಘಟಕಗಳಲ್ಲಿ ವ್ಯಾಪಕವಾಗಿರುವ ಸದಸ್ಯರನ್ನು ಸಂಪರ್ಕಿಸಿ ಸಂಘಟನೆಯ ವ್ಯಾಪ್ತಿಗೆ ತರಬೇಕಾಗಿತ್ತು. ಆ ಸಂದರ್ಭದಲ್ಲಿ ಚಳುವಳಿಯನ್ನು ಹತ್ತಿಕ್ಕಲು ಭಾರತೀಯ ಪಡೆಗಳು ಬ್ರಿಟೀಷರಿಗೆ ನೆರವಾಗುತ್ತಿದ್ದವು.

2. ಸೇನೆಯಲ್ಲಿ ಅತೃಪ್ತಿ ವ್ಯಾಪಕವಾಗಿದ್ದರೂ ಅದಕ್ಕೆ ಇನ್ನೂ ಕ್ರಾಂತಿಕಾರಿ ಸ್ವರೂಪ ಬಂದಿರಲಿಲ್ಲ. ಹಾಗಾಗಿದ್ದರೆ ಬಹಳಷ್ಟು ಜನರನ್ನು ಬ್ರಿಟೀಷರ ವಿರುದ್ಧ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಬಳಸಿಕೊಳ್ಳಬಹುದಾಗಿತ್ತು. ಇದಕ್ಕಾಗಿ ದೀರ್ಘಕಾಲ ಬೇಕಾಗುತ್ತದೆಂದು ನಾನು ವಾದಿಸಿದೆ. ಯುದ್ಧ ಬೆಳೆಯುತ್ತಾ ಬಹಳಷ್ಟು ವರ್ಷ ದೀರ್ಘವಾಗುತ್ತಾ ಹೋದಂತೆ ಹೆಚ್ಚೆಚ್ಚು ಭಾರತೀಯರು ಸೇನೆಗೆ ಸೇರುತ್ತಾರೆ. ಯುದ್ಧ ಹಾಗೂ ಯುದ್ಧದ ಆರ್ಥಿಕತೆಯ ಸಂಕಷ್ಟ ನಮ್ಮ ಜನರು ಹಾಗೂ ಸೈನಿಕರಿಗೆ ಹೆಚ್ಚೆಚ್ಚು ಅನುಭವವಾಗುತ್ತಾ ಹೋಗುತ್ತದೆ. ಇದರಿಂದ ನಮ್ಮ ಮತ್ತು ಶತ್ರು ನಡುವಿನ ವೈರುಧ್ಯ ಉಲ್ಬಣಗೊಳ್ಳುತ್ತದೆ. ಇಂಥ ಕ್ರಾಂತಿಕಾರಿ ಪ್ರಕ್ರಿಯೆ ಪಕ್ವಗೊಳ್ಳಲು ನಾವು ಕಾಲಾವಕಾಶ ನೀಡಬೇಕು.

3. ಗಾಂಧೀಜಿ ಆರಂಭಿಸಿದ ಚಳುವಳಿ ಕೇವಲ 15 ದಿನಗಳಷ್ಟು ಹಳೆಯದ್ದಾದರೂ ಅದು ಆಗಲೇ ದುರ್ಬಲಗೊಳ್ಳತೊಡಗಿತ್ತು. ಸಾಮಾನ್ಯವಾಗಿ ಅವರ ಕಡೆಗೆ ಭಾರತೀಯ ಜನರು ಸಮುದ್ರದ ಪ್ರವಾಹೋಪಾದಿಯಲ್ಲಿ ಪ್ರತಿಸ್ಪಂದಿಸುತ್ತಿದ್ದರು.

4. ಬ್ರಿಟೀಷ್ ಪಡೆಗಳು ಪ್ರವಾಹವನ್ನು ತಡೆದು ನಿಲ್ಲಿಸಿದವು. ಗಾಂಧೀಜಿ ಚಳುವಳಿಯು ಶಾಂತಿಯುತ ದೃಷ್ಟಿಕೋನದ ಬಗ್ಗೆ ಕಲ್ಪನಾಲೋಕದಲ್ಲಿ ಇದ್ದಿದ್ದರೇನೋ. ಇಡೀ ಯುರೋಪ್ ಫ್ಯಾಸಿಸಂನ ಪದತಲದಲ್ಲಿ ನಲುಗುತ್ತಿದ್ದಾಗ, ಬೃಹತ್ ಸೇನೆಗಳು ರಷ್ಯಾದಲ್ಲಿ ಭೀಕರ ಕದನದಲ್ಲಿ ನಿರತವಾಗಿರುವಾಗ, ಇಡೀ ದೂರ ಪ್ರಾಚ್ಯ ಕ್ರಾಂತಿಕಾರಿ ಬೆಂಕಿಯಲ್ಲಿ ಸುಟ್ಟು ಹೋಗುತ್ತಿರುವಾಗ, ಸ್ವತಃ ನಮ್ಮ ದೇಶದಲ್ಲೇ ಶಸ್ತ್ರಾಸ್ತ್ರಗಳಿಗೆ ಬೇಡಿಕೆಯಿರುವಾಗ; ಈ ರೀತಿಯಾಗಿ ಕ್ರಾಂತಿಕಾರಿ ತಿರುವಿನ ಕಾಲಘಟ್ಟದಲ್ಲಿ- ಕೇವಲ ಅಹಿಂಸಾ ಚಳುವಳಿಗೆ ಕರೆಕೊಡುವುದರಿಂದ ಮಾತ್ರವೇ ನಮ್ಮ ಜನರನ್ನು ಶಾಂತರನ್ನಾಗಿ ಇರಿಸಿಕೊಳ್ಳಬಹುದೆಂದು ಸಮಚಿತ್ತದ ಯಾವುದೇ ವ್ಯಕ್ತಿಯೂ ಕಲ್ಪಿಸಿಕೊಳ್ಳಲಾರ. ಶಾಂತಿಯುತ ಸತ್ಯಾಗ್ರಹಕ್ಕೆ ನೀಡಿದ ಕರೆಯೇ ನಮ್ಮ ಜನರನ್ನು ಕ್ರಾಂತಿಕಾರಿ ಕಾರ್ಯಾಚರಣೆಗಳಿಗೆ ಇಳಿಸಿತು. ಆದರೆ ಈ ದಿಸೆಯಲ್ಲಿ ಅವರಿಗೆ ಸರಿಯಾದ ಮಾರ್ಗದರ್ಶನ ಸಿಗಲಿಲ್ಲ. ಕೇವಲ ಬುಡಮೇಲು ಕೃತ್ಯಗಳಿಂದ ಬ್ರಿಟೀಷರನ್ನು ಸೋಲಿಸಲು ಆಗುವುದಿಲ್ಲ. ಅಧಿಕಾರವನ್ನು ಹಿಡಿಯಬೇಕಾದರೆ ನಾವು ಪ್ರಮುಖ ಗುರಿಗಳನ್ನು ಹಿಡಿದು ಅವುಗಳನ್ನು ರಕ್ಷಿಸಿಕೊಳ್ಳಬೇಕು. ಇಂಥ ಯುದ್ಧಕಲೆಯಲ್ಲಿ ತರಬೇತಿ ಪಡೆದ ಜನರ ತಂಡಗಳ ಕೊರತೆ ನಮ್ಮನ್ನು ಕಾಡುತ್ತಿತ್ತು. ಜನರು ಬೀದಿ ದೀಪಗಳು ಹಾಗೂ ಸಂಪರ್ಕ ಮಾರ್ಗಗಳನ್ನು ಹಾಳು ಮಾಡುವುದರಲ್ಲೇ ನಿರತರಾಗಿದ್ದರು. ಕೇವಲ ಅದರಿಂದ ಏನನ್ನು ಸಾಧಿಸಲು ಆಗುವುದಿಲ್ಲ.

5. ಕಾಡುತ್ತಿರುವ ಕೊರತೆಯನ್ನು ಭಾರತೀಯ ಸೇನೆ ತುಂಬಬೇಕೆಂದು ಗೆಳೆಯರೊಬ್ಬರು ಸಲಹೆ ಮಾಡಿದರು. ಸೈನಿಕರು ಅಧಿಕಾರದ ಗುರಿಗಳ ಮೇಲೆ ಆಕ್ರಮಣ ನಡೆಸಿ ವಶಪಡಿಸಿಕೊಳ್ಳಬೇಕೆಂಬುದು ಆ ಸಲಹೆಯ ಸಾರವಾಗಿತ್ತು. ಈ ವಾದವನ್ನು ನಾನು ತಳ್ಳಿ ಹಾಕಿದೆ. ಎಲ್ಲ ಬಂಡಾಯಗಳಲ್ಲಿ ಕ್ರಾಂತಿಕಾರಿ ಪಡೆಗಳು ಜನರಿಗೆ ನಾಯಕತ್ವ ನೀಡುತ್ತವೆನ್ನುವುದೇನೋ ಸತ್ಯ. ಆದರೆ ನಮ್ಮ ಉತ್ತಮ ಪಡೆಗಳು ಮಧ್ಯಪೂರ್ವ ಮತ್ತು ಬರ್ಮಾ (ಈಗ ಮ್ಯಾನ್ಮಾರ್) ಗಡಿಯಲ್ಲಿದ್ದವು. ದೇಶದ ಒಳಗಡೆ ಬ್ರಿಟೀಷ್ ಪಡೆಗಳೇ ದೊಡ್ಡ ಸಂಖ್ಯೆಯಲ್ಲಿದ್ದವು.

6. ಅಂತಿಮವಾಗಿ, ಜನತೆಗೆ ಕ್ರಾಂತಿಕಾರಿ ದೃಷ್ಟಿಕೋನ ನೀಡುವಂತಾಗಲು ನಮ್ಮೊಂದಿಗೆ ಸಹಕರಿಸಲು ಕ್ರಾಂತಿಕಾರಿ ರಾಜಕೀಯ ಪಕ್ಷವೊಂದು ನಮ್ಮಲ್ಲಿಲ್ಲ ಎಂದು ನಾನು ವಾದಿಸಿದೆ. ಇದ್ದಕ್ಕಿದ್ದಂತೆ ಕ್ರಾಂತಿಗಳನ್ನು ಸೃಷ್ಟಿಸಲಾಗುವುದಿಲ್ಲ. ಅನೇಕ ವರ್ಷಗಳ ಕಾಲ ಕ್ರಾಂತಿಕಾರಿ ವಾತಾವರಣವನ್ನು ನಿರ್ಮಿಸಬೇಕಾಗುತ್ತದೆ. ನಮ್ಮ ರಾಷ್ಟ್ರೀಯ ಆಂದೋಲನದಲ್ಲಿ ಅದು ಇರಲಿಲ್ಲ. ನಾವು ಕಮ್ಯುನಿಸ್ಟ್‌ರನ್ನು ಅವಲಂಬಿಸಬಹುದಿತ್ತು; ಆದರೆ ಅವರು ಯುದ್ಧಪ್ರಯತ್ನಗಳಿಗೆ ಸಹಕಾರ ನೀಡುತ್ತಿದ್ದರು.

7. ಏನಿದ್ದರೂ ನಾವು ನಿಷ್ಕ್ರಿಯರಾಗಿರಬಾರದು. ಕೆರಳಿದ ಚಟುವಟಿಕೆಗಳನ್ನು ನಡೆಸದಂತೆ ನಮ್ಮ ಸಂಘಟನೆಯನ್ನು ಎಚ್ಚರಿಸಬೇಕಿತ್ತು. ಚಳುವಳಿಯಿಂದ ಅನೇಕ ಕ್ರಾಂತಿಕಾರಿ ಗುಂಪುಗಳು ರಚನೆಗೊಂಡಿದ್ದವು. ಶಸ್ತ್ರಾಸ್ತ್ರಗಳು ಹಾಗೂ ಹಣವನ್ನು ಸಂರಕ್ಷಿಸಲು ಅವುಗಳ ನೆರವು ಪಡೆಯಬೇಕಿತ್ತು. ಮತ್ತು ಅವುಗಳ ಜತೆ ಸಂಪರ್ಕವನ್ನು ವಿಸ್ತರಿಸಿಕೊಳ್ಳ ಬೇಕಾಗಿತ್ತು.

8. ಯುದ್ಧ ಕೊನೆಗೊಳ್ಳುವವರೆಗೆ ನಾವು ಕಾಯೋಣ. ಸಮರ ಯಾವುದೇ ರೀತಿಯಲ್ಲಿ ಕೊನೆಗೊಳ್ಳಲಿ, ಒಂದು ಬ್ರಿಟೀಷ್ ವಿರೋಧಿ ಬಂಡಾಯವನ್ನು ನಡೆಸುವ ಉತ್ತಮ ಸ್ಥಿತಿಯಲ್ಲಿ ನಾವಿರುತ್ತಿದ್ದೆವು.

ಅನುಭವದ ವಿವರಣೆ

ಕೊನೆಯಲ್ಲಿ, ಸಂಘಟನೆಯ ಕ್ಷೇತ್ರದಲ್ಲಿ ನನ್ನ ಅನುಭವಗಳನ್ನು ಸಂಕ್ಷಿಪ್ತವಾಗಿ ವಿವರಿಸಿದೆ. ಜನತೆಯ ನೇರ, ಕ್ರಾಂತಿಕಾರಿ ಹಾಗೂ ಸಕ್ರಿಯ ಭಾಗವಹಿಸುವಿಕೆ ಇಲ್ಲದ ಸಶಸ್ತ್ರ ಪಡೆಗಳ ಪ್ರತ್ಯೇಕತಾ ಬಂಡಾಯ ಗುರಿಮುಟ್ಟುವಲ್ಲಿ ವಿಫಲಗೊಳ್ಳುತ್ತದೆ ಎಂಬ ನಂಬಿಕೆ ನನಗೆ ಈಗಾಗಲೇ ಬಂದಿದೆ. ಜನರು ಹಾಗೂ ಸಶಸ್ತ್ರ ಪಡೆಗಳು ಒಟ್ಟಾಗಿ ಬಂಡೆದ್ದರೆ ಮಾತ್ರವೇ ದೇಶದಲ್ಲಿನ ಸಾಮ್ರಾಜ್ಯಶಾಹಿ ಗಳಲ್ಲಿ ನಡುಕ ಹುಟ್ಟಿಸಬಹುದಿತ್ತು.

ಜನರು ಮತ್ತು ಸೇನೆ ಕ್ರಾಂತಿಕಾರಿ ಬಂಡಾಯದಲ್ಲಿ ಒಂದಾದರೆ ಯಾವುದೇ ದೇಶದ ವೈಶಾಲ್ಯ, ವಿವಿಧ ಹವಾಗುಣ, ಭಾರಿ ಜನಸಂಖ್ಯೆ- ಈ ಅಂಶಗಳನ್ನು ಬ್ರಿಟೀಷರ ವಿರುದ್ಧ ಮಿಲಿಟರಿ ಹೋರಾಟಕ್ಕೆ ಬಳಸಿಕೊಳ್ಳಬಹುದು. ಇಲ್ಲದಿದ್ದರೆ, ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಬ್ರಿಟೀಷ್ ಸೇನೆ ಗುಣಾತ್ಮಕವಾಗಿ ಮೇಲುಗೈ ಸಾಧಿಸುತ್ತಿತ್ತು. ಹೀಗಾಗಿ ಕ್ರಾಂತಿಕಾರಿ ಗುಂಪುಗಳನ್ನು ಸಂರಕ್ಷಿಸಬೇಕೆಂಬ ಸಲಹೆ ಮಂಡಿಸಿದೆ. ಸಶಸ್ತ್ರ ಪಡೆಗಳ ಹೊರಗೆ ಇಂಥ ಗುಂಪುಗಳು ಕ್ರಾಂತಿಕಾರಿ ಬಂಡಾಯದ ಯಶಸ್ಸಿಗೆ ಅಗತ್ಯವಾದ ಜನಪ್ರಿಯ ಕೇಂದ್ರಗಳಾಗಬಹು ದೆಂಬುದು ನನ್ನ ಲೆಕ್ಕಾಚಾರವಾಗಿತ್ತು.

ಅನುಭವದ ಪಾಠ

ಆದರೆ, ಸಶಸ್ತ್ರ ಪಡೆಗಳ ಒಳಗಿನಿಂದ ಇಂಥ ಯೋಜನೆಗಳನ್ನು ನಡೆಸಲಾಗದು ಎಂಬುದು ನಂತರದ ಅನುಭವಗಳು ಕಲಿಸಿತು. ಸೈನಿಕ ಒಬ್ಬ ಪೂರ್ಣಕಾಲದ ಕ್ರಾಂತಿಕಾರಿಯಲ್ಲ. ಆತ ಶಿಸ್ತಿನ ಸಂಕೋಲೆಯಲ್ಲಿ ಸಿಲುಕಿರುತ್ತಾನೆ. ಮುಕ್ತವಾಗಿ ಸಂಚರಿಸುವಂತಿಲ್ಲ. ಹೊರಗಡೆ ಜನರನ್ನು ಸಂಘಟಿಸಲು ಪೂರ್ಣಕಾಲದ ಕ್ರಾಂತಿಕಾರಿಗಳ ಕ್ರಾಂತಿಕಾರಿ ಪಕ್ಷವೊಂದು ಐತಿಹಾಸಿಕ ಅವಶ್ಯಕತೆಯಾಗಿತ್ತು. ಇದು ನನ್ನ ಕಹಿ ಅನುಭವ ಪಾಠವಾಗಿತ್ತು. ಒಂದು ಸೇನೆ, ಬ್ರಿಟೀಷರ ವಿರುದ್ಧ ಶಾಸ್ತ್ರ ಕೈಗೆತ್ತಿಕೊಳ್ಳಲು ಸಿದ್ಧವಾಗಿದ್ದ ಒಬ್ಬ ವ್ಯಕ್ತಿಗೆ, ಬಸ್ ತಪ್ಪಿಹೋಗಿತ್ತು. ಯಾಕೆಂದರೆ ಯುದ್ಧೋತ್ತರದ ಕಾಲಾವದಿಯಲ್ಲಿ ದೇಶಕ್ಕೆ ನಾಯಕತ್ವ ನೀಡಲು ಕ್ರಾಂತಿಕಾರಿ ಪಕ್ಷ ಇರಲಿಲ್ಲ.

ನಮ್ಮ ಸಂಘಟನೆ 1992 ರಲ್ಲಿ ಕ್ರಾಂತಿಕಾರಿ ಶಕ್ತಿಗಳಿಗೆ ಶಸಸ್ತ್ರ ಮತ್ತು ಹಣ ನೀಡಿತು.

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಫೆಬ್ರುವರಿ 24, 2003 - ಸೋಮವಾರ.
ಬೆಂಗಳೂರು ಜಿಲ್ಲಾ ಪಂಚಾಯತ್ ಚಲೋ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘ (ಸಿಐಟಿಯು) ಬೆಂಗಳೂರು ನಗರ / ಗ್ರಾಮಾಂತರ ಜಿಲ್ಲಾ ಸಮಿತಿ ಕರೆ. ಬೆಳಿಗ್ಗೆ 11 ಗಂಟೆಗೆ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ.
ವಿದ್ಯುತ್ ಬಳಕೆದಾರರ ಹೋರಾಟ ಸಮಿತಿ ಆಶ್ರಯದಲ್ಲಿ ವಿದ್ಯುತ್ ಚಳುವಳಿ.

ಫೆಬ್ರುವರಿ 24 - ಸೋಮವಾರ.
ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪೆನಿ (ಗೆಸ್ಕಾಂ) ಪ್ರಧಾನ ಕಛೇರಿ ಎದುರು ಪ್ರತಿಭಟನೆ.

ಫೆಬ್ರುವರಿ 26 - ಬುಧವಾರ.
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪೆನಿ (ಹೆಸ್ಕಾಂ) ಪ್ರಧಾನ ಕಛೇರಿ ಎದುರು ಪ್ರತಿಭಟನೆ ಮಧ್ಯಾಹ್ನ 12 ಗಂಟೆಗೆ ಇಂದಿರಾ ಗಾಜಿನ ಮನೆಯಿಂದ ಮೆರವಣಿಗೆ.

ಫೆಬ್ರುವರಿ 27- ಗುರುವಾರ.
ಮಂಗಳೂರು ವಿದ್ಯುತ್ ಸರಬರಾಜು ಕಂಪೆನಿ (ಮೆಸ್ಕಾಂ) ಪ್ರಧಾನ ಕಛೇರಿ ಎದುರು ಪ್ರತಿಭಟನೆ.


ಮಾರ್ಚ್ 3 ಸೋಮವಾರ.
ಬಂಗಳೂರು (ಬೆಸ್ಕಾಂ) ಪ್ರಧಾನ ಕಚೇರಿ ಎದುರು ಪ್ರತಿಭಟನೆ.

ಫೆಬ್ರುವರಿ 26 - ಬುಧವಾರ.
ಕೇಂದ್ರ ಸರಕಾರದ ದೇಶವಿರೋಧಿ, ಜನವಿರೋಧಿ, ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಬೃಹತ್ ಪಾರ್ಲಿಮೆಂಟ್ ಚಲೋ.
ಕಾರ್ಮಿಕ ಸಂಘಗಳ ರಾಷ್ಟ್ರೀಯ ಅಸೆಂಬ್ಲಿ ಕರೆ.

ಮಾರ್ಚ್ 4 - 2003
ಅಂಗನವಾಡಿ ನೌಕರರ ಅನಿರ್ಧಿಷ್ಟಾವದಿ ಸಾಮೂಹಿಕ ಧರಣಿ ಸತ್ಯಾಗ್ರಹ, ಬೆಳಿಗ್ಗೆ 11 ಗಂಟೆಗೆ ರೈಲ್ವೆ ನಿಲ್ದಾಣದಿಂದ ಬೃಹತ್ ಮೆರವಣಿಗೆ.

ತೊಗಾಡಿಯಾ ವಿಷಾವೇಶ ಮತ್ತು ಕೃಷ್ಣರ ಮೌನ? ನೋಟೀಸ್?

ಕೋಮುವಾದದ ವಿಷಜಂತು ಪ್ರವೀಣ್ ತೊಗಾಡಿಯಾನನ್ನು ಮಂಗಳೂರು, ಬೆಳಗಾವಿಗಳಲ್ಲಿ ಬಹಿರಂಗ ಸಭೆಗಾಗಿ ಕರ್ನಾಟಕಕ್ಕೆ ವಿಶ್ವಹಿಂದೂ ಪರಿಷತ್ ಆಹ್ವಾನಿಸಿತ್ತು. ಮಂಗಳೂರಿನಲ್ಲಿ ನಡೆದ ಕೋಟ್ಯಾಂತರ ಹಣ ವೆಚ್ಚದ 'ಹಿಂದೂ ಸಮಾಜೋತ್ಸವ'ದಲ್ಲಿ ಕುಖ್ಯಾತವಾದ ಕೋಮು ವಿಭಜನೆಯ ಅತ್ಯಂತ ಅಸಂಬದ್ಧ ಹಸಿ ಸುಳ್ಳುಗಳ ದೂಷಾರೋಪಣೆ ಮಾಡಿದ್ದಾನೆ ತೊಗಾಡಿಯಾ. ಜೆಹಾದಿ ಭಯೋತ್ಪಾದಕರನ್ನು (ಮುಸ್ಲಿಮರನ್ನು) ನಿಗ್ರಹಿಸುವ, 'ಸೆಕ್ಯುಲರ್‌ವಾದಿ'ಗಳಿಗೆ ತಕ್ಕ ಶಾಸ್ತಿ ಮಾಡುವ, ಕರೆಯನ್ನು ಕೊಟ್ಟಿದ್ದಾನೆ. ಅಯೋಧ್ಯೆಯಲ್ಲಿ ಮಸೀದಿ ಕೆಡವಿದ ಸ್ಥಳದಲ್ಲೇ ರಾಮಮಂದಿರ ನಿರ್ಮಾಣಕ್ಕೆ 'ಬೂದಿ ಬಾಬಗಳ ಧರ್ಮ ಸಂಸತ್'ನ ಅಂತಿಮ ತೀರ್ಮಾನವೆಂದು ಈ ನೆಲದ ಕಾನೂನು, ರೀತಿ-ನೀತಿಗಳನ್ನು ತಿರಸ್ಕರಿಸುತ್ತಾನೆ. ತೊಗಾಡಿಯಾ ನಂತಹ 'ಧರ್ಮಾತ್ಮರು' ಇಂತಹದ್ದನ್ನು ಆಡ ಬಾರದೆಂದೇನಿಲ್ಲ! ನಾಗರೀಕ ಪ್ರಜ್ಞೆ, ಕನಿಷ್ಟ ಮನುಷ್ಯರಂತೆ ಯೋಚಿಸುವ ಅವಶ್ಯಕತೆಯೂ ಆತನಿಗೆ ಕಂಡಿಲ್ಲ. ಹಿಂದೂ ಧರ್ಮೋದ್ದಾರದ ಡೋಂಗಿ ಹೊದಿಕೆಯಲ್ಲಿ ಆತ ಆಡಿದ್ದೆಲ್ಲವೂ ಮಹೋಪದೇಶವೇ? ಪೇಜಾವರ ಮಠಾಧೀಶರಂತಹ ಖಾವಿಧಾರಿ ಪಡೆ, ಧರ್ಮದ ರಕ್ಷಣೆಯನ್ನು ತೊಗಾಡಿಯಾ ನಂತಹವರಿಗೆ ವಹಿಸಿ ಬಿಟ್ಟು ಹಿಂದಿನ ಪದಾತಿದಳವಾಗಿ ಆಡುತ್ತಿದೆ. ಆತನ ಬರ್ಬರ ಸಂಸ್ಕೃತಿಯು ಮಾತುಗಳನ್ನು ಸಮರ್ಥಿಸುವ ಮುತ್ಸದ್ದಿಗಳೂ ಸಿದ್ಧವಾಗಿಯೇ ಇದ್ದಾರೆ. ಹೀಗಿದ್ದಾಗ್ಯೂ ಮಂಗಳೂರಿನ ಭಾಷಣದಲ್ಲಿ ಕೊಂಚ ಹಲ್ಲು ಹಿಡಿಯಬೇಕಾಗಿ ಬಂದದ್ದುರಲ್ಲಿ ಕೋರ್ಟ್ ಆದೇಶದ ಛಾಪು ಕಂಡಿದೆ. ಆದಾಗ್ಯೂ ವಿಷ ಕಾರಲು ಚಿಡ್ಡಿ ಪಡೆಗಳಿಗೆ ಅಂತಹದ್ದೇ ಆದ ವಿಶೇಷ ಭಾಷೆಯಿದೆ. ಶಾಂತಿ ಎನ್ನುತ್ತಲೇ ಹಿಂಸೆ-ಕ್ರೌರ್ಯ ಹರಿಬಿಡುವ ಕಲೆ ಅವರಿಗೆ ಮಾತ್ರ ಸಿದ್ಧಿಸಿದೆ.



ಭಾರತದ ಸಮಗ್ರತೆ ಮೇಲೆ ಧಾಳಿ

ಈಗಾಗಲೇ ಕರ್ನಾಟಕವನ್ನೇ ತಮ್ಮ ಮುಂದಿನ ದಾಳಿಯ ಗುರಿಯ ಕೇಂದ್ರವನ್ನಾಗಿರಿಸಿಕೊಂಡಿರುವ ಸಂಘ ಪರಿವಾರ ರಾಜ್ಯದ ಅನೇಕ ಕಡೆ ಕೋಮುವಾದಿ ಗಲಭೆಗಳನ್ನು ಹುಟ್ಟು ಹಾಕುತ್ತಿರುವುದನ್ನು ಮುಂದುವರಿಸಿದ್ದು, ವ್ಯಾಪಕ ಪ್ರಚಾರಕ್ಕೂ ಇಳಿದಿದೆ. ಹೀಗಾಗಿ ಜಿಲ್ಲೆ-ನಗರಗಳಲ್ಲಿಯೂ 'ಹಿಂದೂ ಸಮಾಜೋತ್ಸವ', ಸಮಾವೇಶಗಳ ಮೂಲಕ ಆಕ್ರಮಣಕಾರಿ

ಈವಾರ ಕರ್ನಾಟಕ ಒಂದು ನೋಟ — ಎಸ್.ವೈ.ಗುರುಶಾಂತ್

ಪುಟ 9 ಕ್ಕೆ

ಗುಲ್ಬರ್ಗಾ: ಸ್ವಾಭಿಮಾನಿ ರೈತನನ್ನು ಕೊಂದೇ ಬಿಟ್ಟ ಬ್ಯಾಂಕ್ ಅಧಿಕಾರಿಗಳು

ರಾಜ್ಯದೆಲ್ಲೆಡೆ ಬರದ ತಾಂಡವ, ಬದುಕುವುದೇ ದುಸ್ಸಾಧ್ಯವಾಗಿರುವಾಗ ಸಾಲ ವಸೂಲಿಗೆಂದು ಬಂದ ಕಿರಾತಕರು ರೈತನನ್ನು ಬಲಿ ತೆಗೆದುಕೊಂಡೇ ಬಿಟ್ಟರು. ರೈತರ ಸಾವಿಗೆ ಸಾಲವಾಗಲೀ, ಬೆಳೆ ಹಾನಿ, ಬೆಲೆ ಇಲ್ಲದ್ದು ಕಾರಣವಲ್ಲವೆಂದು ಬೇಜವಾಬ್ದಾರಿ ಬೊಗಳೆ ಹೊಡೆಯುತ್ತಿದ್ದ ಕೃಷ್ಣ ಸರ್ಕಾರ, ಗೃಹ ಸಚಿವರ ಜಿಲ್ಲೆಯಲ್ಲಿಯೇ ಆದ ಧಾರುಣ ಆತ್ಮಹತ್ಯೆಗೆ ಕೃಷ್ಣ-ಖರ್ಗೆ ಏನು ಹೇಳುತ್ತಾರೆ?

ಇದುವರೆಗೂ ಸಾಲದ ಬಾದೆ, ಬೆಳೆ ಕುಸಿತ, ಬೆಳೆನಾಶದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದ ರೈತರ ಮೇಲೆ ಇದೀಗ ಸರ್ಕಾರ ಮತ್ತು ಸಾಲ ವಸೂಲಿಗಾರರು ನಡೆಸುತ್ತಿರುವ ದೌರ್ಜನ್ಯಗಳಿಂದ ಅಮೂಲ್ಯ ಜೀವ ಕಳೆದುಕೊಂಡ ಆತಂಕ ಪ್ರಕರಣವೊಂದು ಗುಲ್ಬರ್ಗ ಜಿಲ್ಲೆಯಿಂದ ವರದಿಯಾಗಿದೆ.

ಗುಲ್ಬರ್ಗಾ ಜಿಲ್ಲೆಯ ಕಣದಾಳ ಗ್ರಾಮದ ರೈತ ಯುವಕನಾದ ಶರಣಬಸಪ್ಪ ನಾಟಿಕಾರ್, ಪಿ.ಎಲ್.ಡಿ. ಬ್ಯಾಂಕಿನ ಅಧಿಕಾರಿಗಳು ಸಾಲ ವಸೂಲಿಗಾಗಿ ಹಾಕಿದ ಬೆದರಿಕೆ, ಒತ್ತಡ ಮತ್ತು ದೌರ್ಜನ್ಯದಿಂದ ಮಾನಸಿಕವಾಗಿ ನೊಂದು ಫೆಬ್ರವರಿ ಹತ್ತರಂದು ಸಾವಿಗೆ ಶರಣಾಗಿದ್ದಾನೆ.

ರೇಷ್ಮೆ ಗೂಡಿಗೆ ಉತ್ತಮ ಬೆಲೆ ಸಿಗುತ್ತಿದ್ದ ಹಿನ್ನೆಲೆಯಲ್ಲಿ ಗುಲ್ಬರ್ಗಾದ ಪಿ.ಎಲ್.ಡಿ. ಬ್ಯಾಂಕಿನಿಂದ ರೂ. 30,000 ಗಳನ್ನು ಸಾಲವಾಗಿ ಪಡೆದಿದ್ದ ಶರಣಬಸಪ್ಪ ನಾಟಿಕಾರ್, ಆದರಲ್ಲಿ ಆಗಲೇ ರೂ. 10 ಸಾವಿರವನ್ನು ತೀರಿಸಿದ್ದ. ಈ ಮಧ್ಯೆ ಕೇಂದ್ರ ಸರ್ಕಾರದ ಆಮದು ನೀತಿಯ ಪರಿಣಾಮವಾಗಿ ಚೀನಾದಿಂದ ಅಗ್ಗದ ರೇಷ್ಮೆ ದೇಶದೊಳಗೆ ಹರಿದು ಬಂದಿದ್ದರ ಪರಿಣಾಮವಾಗಿ ದೇಶಿಯ ರೇಷ್ಮೆ ಗೂಡಿನ ದರಗಳು ವಿಪರೀತವಾಗಿ ಕುಸಿದು ದೊಡ್ಡ ಸಂಖ್ಯೆಯಲ್ಲಿ ರೇಷ್ಮೆ ಬೆಳೆಗಾರರು ದಿವಾಳಿ ಯಾದರು. ಹೀಗೆ ದಿವಾಳಿಯಾದ ಅಸಂಖ್ಯಾತ ರೈತ ಕುಟುಂಬಗಳಲ್ಲಿ ಶರಣ ಬಸಪ್ಪನ ಕುಟುಂಬವೂ ಒಂದು.



ಅಧಿಕಾರಿಗಳ ವಿರುದ್ಧ

ಈ ಬೆಲೆ ಕುಸಿತದಿಂದ ಬ್ಯಾಂಕಿನಿಂದ ಪಡೆದ ಸಾಲ ತೀರಿಸಲಾರದೆ, ಸಾಲದ ಮೇಲೆ ಬಡ್ಡಿ, ಚಕ್ರಬಡ್ಡಿ ಬೆಳೆಯಿತು. ಈ ಸಾಲದ ವಸೂಲಿಗಾಗಿ ಫೆಬ್ರವರಿ 10 ರಂದು ಕಣದಾಳ ಗ್ರಾಮಕ್ಕೆ ಬಂದ ಬ್ಯಾಂಕಿನ ಅಧಿಕಾರಿಗಳು ಮನೆಯಲ್ಲಿದ್ದ ದವಸದಾನ್ಯ ಹೊರ ಹಾಕಿದರು. ಅಡ್ಡ ಬಂದ ಶರಣಬಸಪ್ಪನ ತಾಯಿ ಮತ್ತು ತಂಗಿಯನ್ನು ಮನಸ್ಸಿಗೆ ಬಂದಂತೆ ಬೈದರು. ಇದನ್ನು ಪ್ರತಿಭಟಿಸಿದ ಯುವಕ ಶರಣ ಬಸಪ್ಪನನ್ನು ಅವಾಚ್ಯ ಶಬ್ದಗಳಿಂದ ಹೀಯಾಳಿಸಿದರು. ಊರಿನ ಜನರ ಎದುರಿಗೆ ತನಗೂ, ತನ್ನ ಕುಟುಂಬಕ್ಕೆ ಆದ ಅವಮಾನದಿಂದ ತತ್ತರಿಸಿದ ಯುವಕ ಅಂದು ರಾತ್ರಿಯೇ ವಿಷ ಕುಡಿದು ಪ್ರಾಣ ಬಿಟ್ಟ!

ರೈತ ಸಂಘದ ಮಧ್ಯ ಪ್ರವೇಶ ಶವದೊಂದಿಗೆ ಪ್ರತಿಭಟನೆ

ಸುದ್ದಿ ತಿಳಿದ ತಕ್ಷಣವೇ ಗ್ರಾಮಕ್ಕೆ ಪ್ರವೇಶಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಕಾ। ಮಾರುತಿ ಮಾನ್ಪಡೆಯವರು ಮೃತನ ಕುಟುಂಬಕ್ಕೆ ಸಾಂತ್ವನ ಹೇಳಿ, ಇಡೀ ಗ್ರಾಮದ ಸುಮಾರು 600-700 ಜನರ ಜೊತೆಗೂಡಿ ರೈತನ ಸಾವಿಗೆ ಕಾರಣವಾದ ಪಿ.ಎಲ್.ಡಿ. ಬ್ಯಾಂಕಿನ ಎದುರು ಶವವನ್ನು ಇಟ್ಟುಕೊಂಡು ಪ್ರತಿಭಟನೆ ನಡೆಸಿ. ಬ್ಯಾಂಕ್ ಅಧಿಕಾರಿಗಳನ್ನು ತಕ್ಷಣವೇ ಬಂಧಿಸಲು ಹಾಗೂ ಮೃತ ಶರಣ ಬಸಪ್ಪನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು. ಎಂದು ಒತ್ತಾಯಿಸಿದರು.

ಶವದೊಂದಿಗೆ ಜಿಲ್ಲಾಧಿಕಾರಿ ಕಛೇರಿಯತ್ತ ಹೊರಟ ಜನರನ್ನು ತಡೆಯಲು ಹೆಜ್ಜೆಹೆಜ್ಜೆಗೂ ಎಸ್‌ಪಿ ಸೇರಿ ಪೋಲೀಸರು ಪ್ರಯತ್ನಿಸಿದ್ದಾರೆ. ಆದರೇ ಇದಾವುದನ್ನೂ ಲೆಕ್ಕಿಸದೇ ಪೋಲೀಸರ ಅಡ್ಡಿ ಧಿಕ್ಕರಿಸಿ ಮೆರವಣಿಗೆ ನಡೆದಿದೆ. ಕಾಂ ಮಾನ್ಪಡೆ ಮತ್ತು ಎಸ್‌ಪಿಯವರ ನಡುವೆ ಚಕಮಕಿ ಆಗಿದೆ.

ಐದು ಲಕ್ಷ ಪರಿಹಾರಕ್ಕೆ ಆಗ್ರಹ :

ಸರ್ಕಾರದ ಬಲಾತ್ಕಾರ ಸಾಲ ವಸೂಲಾತಿಯಿಂದ ಸಾವನ್ನಪ್ಪಿದ ಗುಲ್ಬರ್ಗಾ ಜಿಲ್ಲೆಯ ಕಣದಾಳ ಗ್ರಾಮದ ಶರಣ ಬಸಪ್ಪ ನಾಟಿಕಾರ್ ಕುಟುಂಬಕ್ಕೆ ಸರ್ಕಾರ ಕೂಡಲೇ ಐದು ಲಕ್ಷ ರೂಪಾಯಿ ಪರಿಹಾರ ನೀಡಬೇಕು. ಮತ್ತು ಅವರ ಸಾವಿಗೆ ನೇರ ಹೊಣೆಯಾದ ಗುಲ್ಬರ್ಗಾ ಪಿ.ಎಲ್.ಡಿ. ಬ್ಯಾಂಕ್ ಅಧಿಕಾರಿಗಳ ಮೇಲೆ ಕೊಲೆ ಮೊಕದ್ದಮೆಯನ್ನು ದಾಖಲು ಮಾಡಿ, ತಕ್ಷಣ ಬಂಧಿಸಿ ಅವರನ್ನು ಜೈಲಿಗೆ ಕಳುಹಿಸಲು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸರ್ಕಾರವನ್ನು ಆಗ್ರಹಪಡಿಸಿದೆ.



ಭೀಕರ ಬರಗಾಲದಲ್ಲೂ ಸಾಲ ವಸೂಲಿ ಮಾಡುವ ಸರ್ಕಾರದ ಕ್ರಮವನ್ನು ಉಗ್ರವಾಗಿ ಖಂಡಿಸಿರುವ ಪ್ರಧಾನ ಕಾರ್ಯದರ್ಶಿ. ಕಾಂ। ಜಿ.ಸಿ. ಬಯ್ಯಾರೆಡ್ಡಿ, ಇಂತಹ ಜನವಿರೋಧಿ ಕ್ರಮವನ್ನು ಕೈಬಿಡಬೇಕು. ಹಾಗೂ ರೇಷ್ಮೆ ಕೃಷಿಗಾಗಿ ರೈತ ಶರಣಬಸಪ್ಪ ಪಿ.ಎಲ್.ಡಿ. ಬ್ಯಾಂಕಿನಲ್ಲಿ ಮಾಡಿರುವ ಸಾಲವನ್ನು 'ಮನ್ನಾ' ಮಾಡಬೇಕೆಂದು ಒತ್ತಾಯಿಸಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡು ರೈತ ಯುವಕನೊಬ್ಬ ಸಾಲದ ಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡು ನಾಲ್ಕು ದಿನಗಳಾಗಿದ್ದರೂ, ಗುಲ್ಬರ್ಗಾ ಜಿಲ್ಲೆಯ ಆರು ಜನ ಮಂತ್ರಿ ಮಹೋದಯರಲ್ಲಿ, ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆಸೇರಿ ಯಾರೊಬ್ಬರೂ ಇದುವರೆಗೂ ಭೇಟಿ ನೀಡಿ ಮೃತ ಯುವಕನ ಕುಟುಂಬಕ್ಕೆ ಸಾಂತ್ವನ ಹೇಳುವ ಸೌಜನ್ಯ ತೋರಿಸದ ರಾಜ್ಯ ಸರ್ಕಾರದ ಕ್ರಮವನ್ನು ಪ್ರಾಂತ ರೈತ ಸಂಘ ತೀವ್ರವಾಗಿ ಖಂಡಿಸಿದೆ.

ಮೃತ ರೈತ ಕುಟುಂಬಕ್ಕೆ ಪರಿಹಾರ, ಸಾಲವಸೂಲಾತಿಗೆ ತಡೆ ಮತ್ತು ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕೆಂದು ಆಗ್ರಹಿಸಿ ಎಲ್ಲಾ ರೈತ ಸಂಘದ ಸಮಿತಿಗಳು ಮುಖ್ಯ ಮಂತ್ರಿ ಮತ್ತು ಸಹಕಾರ ಮಂತ್ರಿಗಳಿಗೆ ಹಾಗೂ ನಿಯೋಗಗಳ ಮೂಲಕ ಪಿ.ಎಲ್.ಡಿ. ಬ್ಯಾಂಕ್‌ಗಳಿಗೆ ಬೇಡಿಕೆ ಪತ್ರಗಳನ್ನು ಸಲ್ಲಿಸಲು ಕರೆ ನೀಡಿದೆ.

ರೈತ ಉದ್ಧಾರದ ಬಗ್ಗೆ ದಿನನಿತ್ಯ ಮಾತನಾಡುವ ರಾಜ್ಯದ ಮುಖ್ಯಮಂತ್ರಿಗಳು, ತಮ್ಮ ಸರ್ಕಾರದ ನೀತಿಗಳೇ ಮುಗ್ಧ ರೈತನೊಬ್ಬನ ಸಾವಿಗೆ ನೇರ ಹೊಣೆ ಎಂಬುದನ್ನು ಒಪ್ಪಿಕೊಂಡು, ರೈತರ ಬಗ್ಗೆ ಕನಿಷ್ಠ ಕಾಳಜಿ ಇದ್ದರೆ ತಕ್ಷಣ ಸಾಲ ವಸೂಲಾತಿ ನಿಲ್ಲಿಸಿ ಮೃತ ರೈತ ಕುಟುಂಬಕ್ಕೆ ಪರಿಹಾರ ಘೋಷಣೆ ಮಾಡಬೇಕು. ಇದಕ್ಕೆ ಸ್ಪಂದಿಸದಿದ್ದರೆ ಗುಲ್ಬರ್ಗಾದ ಕಣದಳದಿಂದ ಜಾಥಾ ಸೇರಿದಂತೆ ವಿವಿಧ ಹಂತದ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲು ಪ್ರಾಂತ ರೈತ ಸಂಘ ನಿರ್ಧರಿಸಿದೆ.



ಪೋಲೀಸರ ಅಡ್ಡಿ [illegible] ಶವದೊಂದಿಗೆ ಮೆ[illegible]

ಗುಂಡು ಹಾಕಿ ಕೊಲ್ರಿ ನಮುಗ...

ಅಲ್ರಿ ಸಾರ್, ನಮ್ಮ ಕೊತಲಪ್ಪ ಬುದ್ದಪ್ಪ ಪೂಜಾರಿ ಮುನಿಯೊಳಗ 2 ವರ್ಷದ ಹಸುಗೂಸು ಕೋಣೆಯೊಳಗೆ ಇದೆ. ಅದನ್ನು ಒಳಗೇ ಬಿಟ್ಟು ಕೋಣೆಗೆ ಬೀಗ ಜಡಿದರ್ರಿ. ಬ್ಯಾಂಕ್ ಅಧಿಕಾರಿಗಳು, ಇವರಲ್ಲೇನು ಮಾನವೀಯತೆ ಇದೇಯಾ?'

'ಅಲ್ರಿ, ನಮ್ಮ ಹೋರಾಟದ ಹಕ್ಕನ್ನೂ ಕಸ್ಕೋಗ್ತಾ ಇದ್ದೀರಲ್ಲಾ, ನಾವು ಹೋರಾಟ ಮಾಡುವವರೇ. ನಮ್ಮ ತ್ರಾಸ ನಿಮಗೇನು ಗೊತ್ತೈತಿ. ಎರಡು ವರ್ಷದಿಂದ ಮಳಿ ಇಲ್ಲಾ ಬರಗಾಲದಾಗ ಬಿದ್ದೇವು. ಈಗ ಸಾಲ ವಸೂಲಿಗೆ ಬರ್ತಾರ. ನಿಮ್ಮ ಸರ್ಕಾರದ ಅಧಿಕಾರಿಗಳು ಸಾಲ ವಸೂಲಿಗೆ ಬರಬ್ಯಾಡ್ರಿ. ನಮಗ ಸುಮ್ನ ಗುಂಡ ಹಾಕ್ರಿ' ಎಂದು ವೃದ್ಧ ರೈತನೋರ್ವನೊಂದ ಮನದಲ್ಲಿ ಜಿಲ್ಲಾ ಪೋಲೀಸ್ ವರಿಷ್ಠರನ್ನೇ ತರಾಟೆಗೆ ತೆಗೆದುಕೊಂಡ.

ಶಿಕ್ಷಣದ ಕೋಮುವಾದೀಕರಣ ಕುರಿತು ಯಶಸ್ವಿ ಸಮಾವೇಶ

ಯುವ ಮನಗಳ 'ಕೇಸರೀಕರಣ'ಕ್ಕೆ ಚಿಂತನೆಯ ಚಾಬೂಕು

ಶಿಕ್ಷಣದ ಕೋಮುವಾದೀಕರಣ, ಖಾಸಗೀಕರಣದ ಕುರಿತು ರಾಜ್ಯಮಟ್ಟದ ಸಮಾವೇಶವನ್ನು ಎಸ್.ಎಫ್.ಐ. ರಾಷ್ಟ್ರ ಸಮ್ಮೇಳನದ ಹಿನ್ನೆಲೆಯಲ್ಲಿ ಸಂಘಟಿಸಿತ್ತು. ಶಿಕ್ಷಣವನ್ನು ಇಲ್ಲವಾಗಿಸುವ, ಶಿಕ್ಷಣದ ಮೂಲಕ ಮೆದುಳನ್ನು ವಿಷಮಯಗೊಳಿಸುವ ಧಾಳಿಗಳ ವಿವಿಧ ಆಯಾಮಗಳನ್ನು ಪರಿಶೀಲಿಸಿದ ವಿಚಾರಸಂಕಿರಣ ಅರ್ಥಪೂರ್ಣವಾಗಿತ್ತು.

ವಿಶ್ವ ಕುಂದಾಪುರ

ಬುದ್ಧಿಗೆ ತರಬೇತಿ ನೀಡಿ, ಹೃದಯ ಪರಿಶುದ್ಧಗೊಳಿಸಿ ಆತ್ಮಸಂಯಮ ಬೆಳೆಸುವುದೇ ಶಿಕ್ಷಣ

- ಡಾ. ಎಸ್.ರಾಧಾಕೃಷ್ಣನ್

ಉತ್ತಮ ಬದುಕೆ ನಮ್ಮ ಜೀವನದುಸಿರು. ಉತ್ತಮ ಬದುಕೇ ನಮ್ಮ ನಡೆ ನುಡಿಗಳಾಗಲಿ. ನಾನಲ್ಲ, ನೀನು-ನಿಮ್ಮ ಪವಿತ್ರ ಜಪವಾಗಲಿ. ಮತ್ತೊಬ್ಬರ ಬದುಕಿನ ರಕ್ಷಣೆಗಾಗಿ ನಿಮ್ಮ ಸರ್ವಸ್ವದ ತ್ಯಾಗ.

- ಸ್ವಾಮಿ ವಿವೇಕಾನಂದ



ವೇದಿಕೆಯಲ್ಲಿ ಖ್ಯಾತ ಪತ್ರಕರ್ತ ಎನ್.ರಾಮ್, ಹಿರಿಯ ಕವಿ ಜಿ.ಎಸ್.ಶಿವರುದ್ರಪ್ಪ ಹಾಗೂ ರಾಮಕೃಷ್ಣ ಅರ್.

ಶಿಕ್ಷಣವೆನ್ನುವುದು ಸಮಾಜದ ಮೆದುಳು ಇದ್ದಂತೆ. ಕುಲುಮೆಯಲ್ಲಿ ಕಾಯಿಸಿ ಕಬ್ಬಿಣಕ್ಕೆ ಬೇಕಾದ ಆಕೃತಿ ನೀಡಲು ಸಾಧ್ಯವಾಗುವ ರೀತಿಯಲ್ಲಿ ಶಿಕ್ಷಣಕ್ಷೇತ್ರದ ಬಹುಮುಖ್ಯ ಅಂಗವಾಗಿರುವ ವಿದ್ಯಾರ್ಥಿಗಳ ಯುವ ಮೆದುಳುಗಳನ್ನು ತರಬೇತುಗೊಳಿಸಿ ಸಮಾಜಮುಖಿಯನ್ನಾಗಿಸುವ, ಮನುಷ್ಯತ್ವವನ್ನು ಉದ್ದೀಪಿಸುವ ಮಹತ್ತರ ಹೊಣೆ ಶಿಕ್ಷಣ ಕ್ಷೇತ್ರದ್ದಾಗಿರುತ್ತದೆ.

'ಮನುಷ್ಯ ಮೃಗವಾದರೆ ಮೃಗಕ್ಕಿಂತಲೂ ಕ್ರೂರವಾಗಿ ವರ್ತಿಸಬಲ್ಲ' ಎಂದು ಕವಿವರ್ಯ ರವೀಂದ್ರನಾಥ ಟಾಗೂರರು ಹೇಳಿದ್ದಾರೆ. ಮನುಷ್ಯ ಮೃಗವಾಗುವುದನ್ನು ತಡೆಯುವ ಹೊಣೆಯು ಶಿಕ್ಷಣದ್ದಾಗಿದೆ. ಆದರೆ ದುರದೃಷ್ಟವಶಾತ್, ವಿದ್ಯಾರ್ಥಿಗಳೆಂಬ ಯುವಸಸಿಗಳಿಗೆ ಧರ್ಮಾಧತೆಯೆಂಬ ರ(ಕ)ಸಗೊಬ್ಬರ ಹಾಕಿ ಪೋಷಿಸುವ ಕಳವಳಕಾರಿ ಪ್ರವೃತ್ತಿಯನ್ನು ಭಾರತದಲ್ಲಿ ಕಾಣುತ್ತಿದ್ದೇವೆ. ದೇಶ, ಮರ್ಮ, ಸಂಸ್ಕೃತಿಯ ಹೆಸರಿನಲ್ಲಿ ಯುವಮನಗಳಲ್ಲಿ ಅಜ್ಞಾನ ಹಾಗೂ ಅನ್ಯಧರ್ಮೀಯರ ಬಗ್ಗೆ ಕೆಸರು ತುಂಬುವ, ಅವೈಜ್ಞಾನಿಕತೆ ಕೈಂಕರ್ಯ ನಡೆಯುತ್ತಿದೆ. ಅಕಾಡೆಮಿಕ್ ವಲಯದಲ್ಲಿ ಇದನ್ನು 'ಶಿಕ್ಷಣದ ಕೇಸರೀಕರಣ' ಎಂದು ಗುರುತಿಸಲಾಗುತ್ತಿದೆ.

ಯುವ ಮನಗಳ 'ಕೇಸರೀಕರಣ' ದಿಂದ ಭವಿಷ್ಯದಲ್ಲಾಗಬಹುದಾದ ಅಪಾಯದ ಕುರಿತು ಚರ್ಚಿಸಲು ರಾಷ್ಟ್ರದ ಪ್ರಮುಖ ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐ ಕರ್ನಾಟಕ ರಾಜ್ಯ ಮಟ್ಟದ ಶೈಕ್ಷಣಿಕ ಸಮಾವೇಶವನ್ನು ಬೆಂಗಳೂರಿನಲ್ಲಿ ಫೆಬ್ರವರಿ 3 ಮತ್ತು 4 ರಂದು ಆಯೋಜಿಸಿತ್ತು. ರಾಜ್ಯದ ನಾನಾ ಭಾಗಗಳಿಂದ ಸುಮಾರು 25 ವಿದ್ಯಾರ್ಥಿನಿಯರು ಸೇರಿದ್ದಂತೆ ನೂರಾರು ಪ್ರತಿನಿದಿಗಳು ಭಾಗವಹಿಸಿದ್ದ ಸಮಾವೇಶವನ್ನು ಖ್ಯಾತ ಪತ್ರಕರ್ತ ಎನ್.ರಾಮ್ ಉದ್ಘಾಟಿಸಿದರು.

ಸರ್ವಧರ್ಮ ಸಮಬಾವ, ಸರ್ವಧರ್ಮ ಸದ್ಭಾವ, ಜಾತ್ಯಾತೀತತೆ ನಮ್ಮ ದೇಶದ ಪರಂಪರೆಯಾದರೂ ಇತ್ತೀಚಿನ ದಿನಗಳಲ್ಲಿ ಕೆಲವು ಶಕ್ತಿಗಳು ರಾಜಕೀಯ ಲಾಭಕ್ಕಾಗಿ ಇದನ್ನು ಹಾಳು ಮಾಡುತ್ತಿರುವ ಪರಿಯನ್ನು ರಾಮ್ ಬಿಡಿಸಿಟ್ಟರು. ನಮ್ಮ ಸಂವಿಧಾನದ ಜಾತ್ಯಾತೀತ ಸ್ವರೂಪವನ್ನು ವಿವರಿಸಿದರು. ಸಂವಿಧಾನದ 14, 15, 16, 25,325 ಇತ್ಯಾದಿ ವಿಧಿಗಳು ಧರ್ಮನಿರಪೇಕ್ಷತೆ ಖಾತರಿಗಳು ಎಂದರು.

ICE, ICHR, UGC,IIS, ICSSR, ಮೊದಲಾದ ಶೈಕ್ಷಣಿಕ ಮಹತ್ವದ ಸಂಸ್ಥೆಗಳಲ್ಲಿ ಕೋಮುವಾದದ ಒಲವಿನ ಶಕ್ತಿಗಳ ನಿಯಂತ್ರಣಕ್ಕೆ ಒಳಗಾಗುತ್ತಿರುವುದು ಅಪಾಯದ ಸೂಚನೆ. ಪಠ್ಯಕ್ರಮದಲ್ಲಿ ಜ್ಯೋತೀಷ್ಯ ಶಾಸ್ತ್ರವನ್ನು ಅಳವಡಿಸುವುದು ನಾಚಿ ತಲೆತಗ್ಗಿಸಬೇಕಾದ ಸಂಗತಿ ಎಂದರು.

ಕಾಂಗ್ರೆಸ್ ಆಡಳಿತವಿರುವ ಕರ್ನಾಟಕದ ಪಠ್ಯಪುಸ್ತಕಗಳಲ್ಲಿ ಕೋಮುಪಕ್ಷಪಾತದ ಅಂಶಗಳು ನುಸುಳಿರುವುದು ಧರ್ಮಾಂಧ ಶಕ್ತಿಗಳ ಪ್ರಭಾವ ವ್ಯಾಪಕವಾಗಿ ಹರಡಿರುವುದರ ಸಂಕೇತವಾಗಿದೆ ಎಂದರು. ಶಿಕ್ಷಣಕ್ಷೇತ್ರದಲ್ಲಿನ ಕೋಮುವಾದವನ್ನು ಅರಿಯಲು ವಿದ್ಯಾರ್ಥಿಗಳಿಗೆ ವಿಫುಲ ಅವಕಾಶವಿರುತ್ತದೆ. ತಪ್ಪು- ವಿರೂಪಗಳನ್ನು ಕಂಡಾಗ ಎಚ್ಚರಿಕೆಯ ಕಹಳೆ ಊದಿ ಎಂದವರು ವಿದ್ಯಾರ್ಥಿಗಳಿಗೆ ಮನವಿ ಮಾಡಿ ಆಶಾವಾದಿಗಳಾಗಿರುವಂತೆ ಸೂಚಿಸಿದರು.

ಜಿ.ಎಸ್.ಎಸ್ ವಿಶ್ಲೇಷಣೆ

ಬದುಕಿನ ಬಹುಭಾಗವನ್ನು ವಿದ್ಯಾರ್ಥಿಗಳ ಜತೆ ಕಳೆದರೂ 30 ವರ್ಷಕಾಲ ಅಧ್ಯಾಪನ ಕಾರ್ಯ ನಡೆಸಿದರೂ ತಾವು ಮೂಲತಃ ವಿದ್ಯಾರ್ಥಿ ಎಂದು ಹೇಳುವ ಮೂಲಕ ಜೀವನವೇ ಒಂದು ಪಾಠಶಾಲೆ ಎಂದು ಸೂಚ್ಯವಾಗಿ ಹೇಳಿದವರು ಉದ್ಘಾಟನೆ ಅಧಿವೇಶನದ ಮುಖ್ಯ ಅತಿಥಿ ಖ್ಯಾತ ಕವಿ ಡಾ.ಜಿ.ಎಸ್.ಶಿವರುದ್ರಪ್ಪ.

ತಾವು ವಿದ್ಯಾರ್ಥಿಯಾಗಿದ್ದಾಗ ದೇಶಕ್ಕೆ ಸ್ವಾತಂತ್ರ್ಯ ಸಿಗಬೇಕು ಎಂದಷ್ಟೇ ಅಲ್ಲ, ಜನರ ಬದುಕು ಹಸನಾಗಬೇಕು ಎಂದು ಕಂಡ ಕನಸನ್ನು ನೆನಪಿಸಿಕೊಂಡರು ಜಿಎಸ್ಸೆಸ್. ಆದರೆ ಸ್ವತಂತ್ರ ಭಾರತ ಭ್ರಷ್ಟ ಭಾರತವಾಗಿದೆ, ಅಸ್ವಸ್ಥ ಭಾರತವಾಗಿದೆ ಎಂದು ವಿಷಾದಿಸಿದರು. ವಿಜ್ಞಾನ ತಂತ್ರಜ್ಞಾನ ಬೆಳೆದರೂ ಅವೈಚಾರಿಕತೆಯ ತಾಂಡವ, ಧರ್ಮ ದೇವರು ದೇವಸ್ಥಾನಗಳ ಹೆಸರಿನಲ್ಲಿ ಕಲಹ, ಪರಿಸರ ನಾಶ, ಉದಾರೀಕರಣ, ಜಾಗತೀಕರಣ ಇದಕ್ಕೆ ಮುಖ್ಯ ಕಾರಣಗಳಾಗಿವೆ ಎಂದು ಜಿಎಸ್ಸೆಸ್ ವಿಶ್ಲೇಷಿಸಿದರು. ಧಾರ್ಮಿಕ ಸಾಮರಸ್ಯವು ಮೂಲಭೂತವಾದಿಗಳಿಂದ ಚೂರುಚೂರಾಗುತ್ತಿದೆ ಎಂದರು. ಅವೈಜ್ಞಾನಿಕತೆ ಹಾಗೂ ಮೂಲಭೂತವಾದಕ್ಕೆ ಪರಸ್ಪರ ಸಂಬಂಧವಿದೆಯೆಂದರು.

ದೇವರು, ಮತಧರ್ಮ, ಮಂದಿರಗಳು ಈಗ ಮನುಷ್ಯನ ಮೊದಲ ಅಗತ್ಯವಲ್ಲ. ಮನುಷ್ಯನ ಪ್ರಗತಿ ಸಾಧಿಸುವುದಕ್ಕೆ ಆದ್ಯತೆ ನೀಡಬೇಕಾಗಿದೆ. ಕಾಲದ ಪ್ರಸಕ್ತ ಅಪಾಯವನ್ನು ಗುರುತಿಸಿ ಅದರಿಂದ ದೇಶವನ್ನು ಪಾರು ಮಾಡುವ ದಿಸೆಯಲ್ಲಿ ಕಾರ್ಯನಿರ್ವಹಿಸುವಂಥ ದೊಡ್ಡ ಸವಾಲು ವಿದ್ಯಾರ್ಥಿಗಳ ಮುಂದಿದೆ ಎಂದರು. ವಿದ್ಯಾರ್ಥಿಗಳು ಯುವಜನರು. ಯೌವನ - ಕಲ್ಪನಾಶಕ್ತಿ- ಕ್ರಿಯಾಶೀಲತೆ ಅಪಾರ ಅವಕಾಶ ಕಲ್ಪಿಸುವ ಅವಧಿ ಎಂದ ಅವರು ವಿವಿಧ ದೇಶಗಳ ನಿರ್ಣಾಯಕ ಘಟ್ಟಗಳಲ್ಲಿ ಯುವಜನರು ವಹಿಸಿದ ಮಹತ್ವದ ಪಾತ್ರದತ್ತ ಗಮನ ಸೆಳೆದರು.

"18 ವರ್ಷದ ಮುದುಕರನ್ನು ನಾನು ಕಂಡಿದ್ದೇನೆ. 75 ವರ್ಷದ ಯುವಕರನ್ನು ನೋಡಿದೇನೆ" ಎಂದು ಕವಿ ಜಿಎಸ್ಸೆಸ್ ಹೇಳಿದ ಮಾತಿಗೆ ನೆರೆದಿದ್ದ ತರುಣ- ತರುಣಿಯರಲ್ಲಿ ಉತ್ಸಾಹವನ್ನು ಚಿಮ್ಮಿಸಿತು.

ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಆರ್.ರಾಮಕೃಷ್ಣ ಅಧ್ಯಕ್ಷತೆ ವಹಿಸಿದ್ದರು.

ನಂತರದ ಗೋಷ್ಠಿಯಲ್ಲಿ ಇತಿಹಾಸ ಸಂಶೋಧಕಿ ಹಾಗೂ ಪತ್ರಕರ್ತೆ ಡಾ.ಪಾರ್ವತಿ ಮೆನನ್ 'ಇತಿಹಾಸದ ಕೋಮುವಾದೀಕರಣ' ಪ್ರಬಂಧದಲ್ಲಿ ಕೇಂದ್ರ ಪಠ್ಯಕ್ರಮಗಳಲ್ಲಿ ಇತಿಹಾಸದ ತಿರುಚುವಿಕೆ ವಿಚಾರದ ಮೇಲೆ ಹೆಚ್ಚಿನ ಬೆಳಕು ಚೆಲ್ಲಿದರು. ಸಿಪಿಐ(ಎಂ) ಕಾರ್ಯದರ್ಶಿ ಜಿ.ಎನ್.ನಾಗರಾಜ್ 'ಕೋಮುವಾದ ಪ್ರಜಾಪ್ರಭುತ್ವ ಮತ್ತು ಜಾಗತೀಕರಣ' ವಿಷಯವಾಗಿ ಮಾತನಾಡಿ ಜಾಗತೀಕರಣ, ಉದಾರೀಕರಣಗಳು ಕೋಮುವಾದಕ್ಕೆ ಹೇಗೆ ಪೂರಕವಾಗಿದೆ ಎಂದು ವಿವರಿಸಿದರು. ಎಡಚಳುವಳಿ ಸಮಾಜವಾದಿ ಚಿಂತನೆ ಪ್ರಭಲವಾಗಿರುವಲ್ಲಿ ಜಾತಿ-ಧಾರ್ಮಿಕ ಅಸಹನೆ ಇಲ್ಲದಿರುವುದನ್ನು ವಿವಿಧ ದೇಶಗಳ ದೃಷ್ಟಾಂತದೊಂದಿಗೆ ವಿವರಿಸಿ ಈ ನಿಟ್ಟಿನಲ್ಲಿ ಕೆಲಸ ಮಾಡುವಂತೆ ಸಲಹೆ ಮಾಡಿದರು. 'ಕರ್ನಾಟಕದ ಪಠ್ಯ ಪುಸ್ತಕಗಳಲ್ಲಿ ಕೋಮುವಾದಿ ನುಸುಳುವಿಕೆ' ಪ್ರಬಂಧ ಮಂಡಿಸಿದವರು ವಿದ್ಯಾರ್ಥಿ ಮುಖಂಡ ಆರ್.ರಾಮಕೃಷ್ಣ.

ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಚಿಂತಕ, ಶಿಕ್ಷಣ ತಜ್ಞ ಡಾ.ಜಿ.ರಾಮಕೃಷ್ಣ, ಪಠ್ಯ ಪುಸ್ತಕಗಳಲ್ಲಿ ಮಾತ್ರವಲ್ಲದೆ ಇತರೆಡೆಯೂ ಕೋಮುವಾದಿ ಪರಿಸರ ನಿರ್ಮಾಣವಾಗುತ್ತಿರುವುದರ ಬಗ್ಗೆ ಗಮನ ಸೆಳೆದರು. ಬಾಬಾಬುಡನ್‌ಗಿರಿ ಸಮಸ್ಯೆ ಮೊದಲಾದವುಗಳ ಉದಾಹರಣೆ ನೀಡಿದರು.

ಮೊದಲ ದಿನ ಉದ್ಘಾಟನೆ ಹಾಗೂ ಗೋಷ್ಠಿಗಳು ಎರಡನೇ ದಿನ ವಿದ್ಯಾರ್ಥಿ ಪ್ರತಿನಿಧಿಗಳು ಕಲೆತು ಶಿಕ್ಷಣದ ಕೇಸರೀಕರಣದ ಸಮಸ್ಯೆಯನ್ನು ಸಮಗ್ರವಾಗಿ ಚರ್ಚಿಸಿದರು. ರಾಜ್ಯದಾದ್ಯಂತ ವಿದ್ಯಾರ್ಥಿ, ಶಿಕ್ಷಕ ವಲಯದಲ್ಲಿ ಈ ವಿಷಯದಲ್ಲಿ ವ್ಯಾಪಕ ಜಾಗೃತಿ ಮೂಡಿಸಲು ಸಮಾವೇಶ ನಿರ್ಧರಿಸಿತು. ನವೀನ್ ಕುಮಾರ್ ನಿರ್ವಹಣೆ ಮಾಡಿದರು.



ಮನ ತೆರೆದು ಮಥನದಲ್ಲಿ ಭಾಗಿಯಾದ ವಿದ್ಯಾರ್ಥಿ ಚೇತನಗಳು

ವಾಜಪೇಯಿಯವರ ಎರಡೆಳೆ ನಾಲಗೆ ಮತ್ತೆ ಹೊರಗೆ

ಭಯೋತ್ಪಾದನೆಯ ವಿರುದ್ಧ ಬಹಳ ದೊಡ್ಡ ಸ್ವರದಲ್ಲಿ ಮಾತನಾಡುವ ಪ್ರಧಾನಿ ವಾಜಪೇಯಿಯವರು ತಮಗೆ ಅನುಕೂಲ ಸಿಂಧು ರಾಜಕಾರಣಕ್ಕೆ ಅನುಗುಣವಾಗಿ ವಿಶೇಷ ವ್ಯಾಖ್ಯಾನ ಮಾಡುತ್ತಾರೆ! ಜೇಹಾದಿ ಭಯೋತ್ಪಾದಕರನ್ನು ಗುರುತಿಸುವ ಪ್ರಧಾನಿಗಳು ಗಾಂಧಿ ಕೊಂದದ್ದಾಗಲೀ, ಅಯೋಧ್ಯಾ ಕಾಂಡವಾಗಲೀ ಭಯೋತ್ಪಾದನೆ ಎಂಬುದನ್ನು ಜಾಣತನದಿಂದ ನಿರಾಕರಿಸ ಬಯಸುತ್ತಾರೆ! ಪ್ರಜಾಸತ್ತಾತ್ಮಕ ಧರ್ಮನಿರಪೇಕ್ಷಿತ ಸಮಗ್ರ ಭಾರತದ ಭವಿಷ್ಯತ್ತು ನುಂಗುವ ಎರಡೆಳೆ ನಾಲಿಗೆ ಮತ್ತ ಈಗ ಬಿಚ್ಚಿದ್ದಾರೆ

"ಯಾವುದೇ ಸಂಘಟನೆಗೆ ಅದು ಬಹುಸಂಖ್ಯಾತರ ಪರ ಮಾತಾಡಲಿ, ಅಲ್ಪಸಂಖ್ಯಾತರ ಪರ ಮಾತಾಡಲಿ, ಭಾವೋದ್ರೇಕದ ಉರಿ ಹಚ್ಚಲು, ದ್ವೇಷ ಹರಡಲು, ಹಿಂಸೆಯನ್ನು ಪ್ರಚೋದಿಸಲು ಬಿಡಲಾಗದು" ಎಂದು ಪ್ರಧಾನ ಮಂತ್ರಿ ಅಟಲಬಿಹಾರಿ ವಾಜಪೇಯಿಯವರು ಸಾರಿದ್ದಾರೆ. ಬಿಜೆಪಿ ಯುವಮೋರ್ಚಾ ಏರ್ಪಡಿಸಿದ್ದ ಭಯೋತ್ಪಾದನೆ ವಿರುದ್ಧ ಅಂತರ್ರಾಷ್ಟ್ರೀಯ ಯುವ ಸಮ್ಮೇಳನವನ್ನು ಉದ್ಘಾಟಿಸುತ್ತಾ ಈ ರೀತಿ ಅವರು ಹೇಳಿದ್ದಾರೆ.

ಅದು ಸರಿ. ಭಯೋತ್ಪಾದನೆಯನ್ನು ಈ ರೀತಿ ಗುರುತಿಸಬಹುದಾದರೆ ಅವರು ಕೇಸರಿ ಆಕ್ಟೋಪಸ್‌ಗೆ ಮತ್ತು ಅದರ ಸಹಸ್ರ ಬಾಹುಗಳಿಗೆ ಯಾವ ಸ್ಥಾನ ಕೊಡುತ್ತಾರೆ? ಗುಜರಾತಿನ ನರಮೇಧದಿಂದಾಗಿ ವಿದೇಶಗಳಲ್ಲಿ ತನ್ನ ಪ್ರತಿಷ್ಠೆಗೆ ಕುಂದು ಬಂದಾಗ ಮೊಸಳೆ ಕಣ್ಣೀರು ಸುರಿಸಿದರೂ ಅವರು ಇಂತಹದೊಂದು ನರಮೇಧ ಪ್ರಾಯೋಜಿಸಲು ಪ್ರಭುತ್ವ ಯಂತ್ರದ ಬಳಕೆಯನ್ನು ಅನುಮೋದಿಸಿದರು, ಅದರ ವಿಜಯೋತ್ಸವದಲ್ಲಿ ಪಾಲುಗೊಂಡರು ಕೂಡಾ.

ಭಯೋತ್ಪಾದಕರು ಯಾರ್ಯಾರು?


ಹೀಗೆ ಮಾತು ಮತ್ತು ಕೃತಿಯ ನಡುವೆ ಕಂದರವಿದ್ದರೆ ಸತ್ಯಕ್ಕೆ ಅಪಚಾರ ನಡೆದರೆ ಅದಕ್ಕೆ ಅವರೇನು ಹೆದರುವವರಲ್ಲ! ಧರ್ಮದ ಮರೆಯಲ್ಲಿ ಕೆಲಸ ಮಾಡುವ ಜೆಹಾದಿ ಭಯೋತ್ಪಾದನೆ, ಈಗ ಭಯೋತ್ಪಾದನೆಯ ಪ್ರಮುಖ ರೂಪ ಎನ್ನುತ್ತಾರೆ ಪ್ರಧಾನಿಗಳು. ಕಳೆದೆರಡು ದಶಕಗಳಲ್ಲಿ ಭಯೋತ್ಪಾದಕ ಧಾಳಿಗಳಿಗೆ 60000 ಮುಗ್ಧ ಜೀವಗಳು ಬಲಿಯಾದವು ಎಂದರು. ಆದರೆ ಈ ಜೀವಗಳನ್ನು ಬಲಿ ತೆಗೆದುಕೊಂಡವರ ಪೂರ್ವಾಪರಗಳ ಬಗ್ಗೆ ಅವರು ಮಾತಾಡಲಿಲ್ಲ. ಇದರಲ್ಲಿ ಇಸ್ಲಾಮೀ ಗುಂಪುಗಳಷ್ಟೇ ಅಲ್ಲ, ಎಲ್‌ಟಿಟಿಇ, ಪಂಜಾಬ್‌ನ ಭಯೋತ್ಪಾದಕರು, ಈಶಾನ್ಯ ಭಾರತದಲ್ಲಿ ಗಡಿಯಾಚೆಯಿಂದ ಕಾರ್ಯಾಚರಣೆ ನಡೆಸುವ ಭಯೋತ್ಪಾದಕರು ಇವರೆಲ್ಲಾ ಇದ್ದಾರೆ. ಇವರನ್ನೆಲ್ಲಾ ಪಟ್ಟಿ ಮಾಡದೆ ದೇಶದಲ್ಲಿ ಮುಗ್ಧ ಜೀವಗಳನ್ನು ಬಲಿತೆಗೆದುಕೊಂಡವರು ಇಸ್ಲಾಮಿ ಭಯೋತ್ಪಾದಕರು ಮಾತ್ರ ಎಂದು ಬಿಂಬಿಸುವ ತಂತ್ರವನ್ನು ಇಲ್ಲಿ ಕಾಣಬಹುದು.

ಇಸ್ಲಾಮಿನ ಹೆಸರಲ್ಲಿ ಭಯೋತ್ಪದಾನೆ ನಡೆಸುವವರ ವಿರುದ್ಧ ಹೋರಾಟದಲ್ಲಿ ಜತೆ ಸೇರಲು ಯಾವ ಭಾರತೀಯ ದೇಶಪ್ರೇಮಿಯೂ ನಿರಾಕರಿಸುತ್ತಿಲ್ಲ. ನಿಜ ಸಂಗತಿಯೆಂದರೆ ಈ ಪ್ರಶ್ನೆಯ ಮೇಲೆ ಪ್ರತಿಪಕ್ಷಗಳಿಂದ ಈ ಸರ್ಕಾರಕ್ಕೆ ಸಿಕ್ಕಷ್ಟು ಬೆಂಬಲ ಸ್ವತಂತ್ರ ಭಾರತದಲ್ಲಿ ಬೇರಾವ ಸರಕಾರಕ್ಕೂ ಸಿಕ್ಕಿಲ್ಲ.

ರಾಜಕೀಯ ಪ್ರಯೋಜನಕ್ಕೆ

ಆದರೆ ಆರ್.ಎಸ್.ಎಸ್. ನೇತೃತ್ವದ ಬಿಜೆಪಿ ಮತ್ತಿತರ ಸಂಘಟನೆಗಳು ಭಯೋತ್ಪಾದನೆಯನ್ನು ರಾಜಕೀಯ ಪ್ರಯೋಜನಕ್ಕೆ ಬಳಸುತ್ತಿದ್ದಾರೆ. ಈಗ ತ್ರಿಪುರಾದಲ್ಲಿ ಭಯೋತ್ಪಾದಕರು ಮುಗ್ಧ ಜನಗಳನ್ನು ಕೊಲ್ಲುತ್ತಲೇ ಇದ್ದಾರೆ. ಇದರ ವಿರುದ್ಧ ಹೋರಾಟದಲ್ಲಿ ತೊಡಗಿರುವವರು ಸಿಪಿಐ(ಎಂ) ಕಾರ್ಯಕರ್ತರು. ಈ ಹಿಂದೆ ಪಂಜಾಬಿನಲ್ಲೂ ನೂರಾರು ಸಿಪಿಐ(ಎಂ) ಕಾರ್ಯಕರ್ತರು ಈ ಹೋರಾಟದಲ್ಲಿ ಜೀವ ಕಳೆದುಕೊಂಡರು. ಹೀಗಿರುವಾಗ ಇದರಲ್ಲಿ ದೇಶಪ್ರೇಮದ ಸರ್ಟಿಫಿಕೇಟ್ ನೀಡುವ ನೈತಿಕ ಅಧಿಕಾರ ಆರ್‌ಎಸ್‌ಎಸ್‌ನ ನೇತೃತ್ವದ ಬಿಜೆಪಿ ಮತ್ತು ಅದರ ಇತರ ವಿಷ ಬಾಹುಗಳಿಗಂತೂ ಖಂಡಿತಾ ಇಲ್ಲ.

ಹೀಗೆ ಹೇಳಲು ಕಾರಣ - ಅವರು ಇಸ್ಲಾಮೀ ಭಯೋತ್ಪಾದನೆಯ ವಿರುದ್ಧ ಹೋರಾಟವನ್ನು ಇಡೀ ಇಸ್ಲಾಮೀ ಸಮುದಾಯದ ವಿರುದ್ಧ ಭಾವೋದ್ರೇಕವನ್ನು ಬಡಿದೆಬ್ಬಿಸಲು ಪ್ರಯತ್ನಿಸುತ್ತಿದ್ದಾರೆ. ಏಕೆಂದರೆ ಇದು ಹಿಂದೂ ವೋಟ್‌ಬ್ಯಾಂಕನ್ನು ಕ್ರೋಢೀಕರಿಸಲು ಸಹಾಯವಾಗುತ್ತದೆ. ಹೀಗೆ ಭಯೋತ್ಪಾದನೆಯ ವಿರುದ್ಧ ಹೋರಾಟವನ್ನು ಚುನಾವಣಾ ಮತ್ತು ರಾಜಕೀಯ ಲಾಭಕ್ಕಾಗಿ ಅತ್ಯಂತ ಸಿನಿಕತನದಿಂದ ಬಳಸಲಾಗುತ್ತಿದೆ. ಇಂತಹ ದುಷ್ಟ ಅಜೆಂಡಾ ಭಯೋತ್ಪಾದನೆಯ ವಿರುದ್ಧ ಐಕ್ಯ ಹೋರಾಟವನ್ನು ದುರ್ಬಲಗೊಳಿಸುತ್ತದೆ.



ಮೈಯ್ಯುದು ತಣ್ಣಗೆ, ಮನದೊಳು ಬಿಸಿಹಗೆ ಎರಡಳ ನಾಲಿಗ...

ಗಾಂಧಿ ಕೊಲೆ : ಭಯೋತ್ಪಾದನೆ ಅಲ್ಲವೇ?

ಮಹಾತ್ಮಗಾಂಧೀಜಿಯ ಕೊಲೆ ಒಂದು ಭಯೋತ್ಪಾದಕ ಕೃತ್ಯ. ಆದರೆ ಅದಕ್ಕೆ ಹೊಣೆಗಾರರಾದವರು ಈಗ ಅಧಿಕಾರದಲ್ಲಿರುವುದು ಹಾಸ್ಯಾಸ್ಪದವಷ್ಟೇ ಅಲ್ಲ, ಒಂದು ದುರಂತ ಕೂಡಾ. ಕೋಮು ಭಾವೋದ್ರೇಕಗಳನ್ನು ಬಡಿದೆಬ್ಬಿಸಿ ಹಿಂಸಾಚಾರ, ಕೊಲೆ, ಸುಲಿಗೆ ನಡೆಸುವ ಕೋಮು ಗಲಭೆಗಳು ಕೂಡಾ ಭಯೋತ್ಪಾದನೆಯ ಅಭಿವ್ಯಕ್ತಿಗಳೇ. ಗುಜರಾತ್‌ನಲ್ಲಿ ನಡೆದದ್ದಂತೂ ಸರಕಾರವೇ ಪ್ರಾಯೋಜಿಸಿದ ಭಯೋತ್ಪಾದನೆ. ವಾಜಪೇಯಿಯವರು ಉದ್ಘಾಟಿಸಿದ ಈ ಅಂತರ್ರಾಷ್ಟ್ರೀಯ ಭಯೋತ್ಪಾದನಾ-ವಿರೋಧಿ ಸಮ್ಮೇಳನ ನಡೆಸಿದವರು ಇಂತಹ ಭಯೋತ್ಪಾದನೆಯಲ್ಲಿ ಪಾಲುಗೊಂಡವರೇ. ವಾಜಪೇಯಿ ಸರ್ಕಾರದ ಆಶಿರ್ವಾದ ಮತ್ತು ವಿದೇಶಗಳಲ್ಲಿ ಭಾರತೀಯ ರಾಜತಾಂತ್ರಿಕ ಮಿಶನ್‌ಗಳನ್ನು ಬಳಸಿ ಈ ಸಮ್ಮೇಳನಕ್ಕೆ ಪ್ರವಾಸೀ ಪ್ರತಿನಿಧಿಗಳನ್ನು ಒಟ್ಟುಗೂಡಿಸಲಾಯಿತು.

ಸರ್ವಾಧಿಕಾರಶಾಹೀ ಅಪಾಯ

ಈ ಸಂದರ್ಭದಲ್ಲಿ ಇನ್ನೊಂದು ಅಪಾಯಕಾರೀ ಘೋಷಣೆಯನ್ನು ಮಾಡಿದರು. ಭಯೋತ್ಪಾದನೆಯ ಪಿಡುಗನ್ನು ಎದುರಿಸುವಲ್ಲಿ ಕೆಲವೊಮ್ಮೆ ನಾಗರಿಕ ಸ್ವಾತಂತ್ರ್ಯಗಳನ್ನೂ ಕಡಿತ ಮಾಡಬಹುದಂತೆ. ಭಯೋತ್ಪಾದನೆಯ ವಿರುದ್ಧ ಹೋರಾಟದ ಹೆಸರಿನಲ್ಲಿ ಪ್ರಜಾಪ್ರಭುತ್ವ ಹಕ್ಕುಗಳನ್ನು ಕೂಡಾ ಮೊಟಕು ಮಾಡಬಹುದೆಂಬ ಸರ್ವಾಧಿಕಾರಶಾಹೀ ಎಚ್ಚರಿಕೆ ಇಲ್ಲಿದೆ.

ಭಾರತದಲ್ಲಿ ಧರ್ಮನಿರಪೇಕ್ಷತೆಗೆ ಧಕ್ಕೆ ಬಂದರೆ ಪ್ರಜಾಪ್ರಭುತ್ವಕ್ಕೂ ಧಕ್ಕೆ ಬರುತ್ತದೆ ಎಂದು ನಾವು ಸದಾ ಹೇಳುತ್ತಲೇ ಬಂದಿದ್ದೇವೆ. ಧರ್ಮನಿರಪೇಕ್ಷ ತಳಪಾಯವನ್ನು ದುರ್ಬಲಗೊಳಿಸಿ ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳನ್ನು ಮೊಟಕುಗೊಳಿಸಿದರೆ ಆಗ ಪ್ರಜಾಪ್ರಭುತ್ವದ ಆರೋಗ್ಯ ಕೆಟ್ಟು ಅದು ಫ್ಯಾಸಿಸ್ಟ್ ಮಾದರಿ ಸರ್ವಾಧಿಕಾರಿಶಾಹಿಯಾಗಿ ಅವನತಿ ಹೊಂದುತ್ತದೆ. ಧರ್ಮನಿರಪೇಕ್ಷತೆಯ ಮೇಲೆ ಧಾಳಿಯಿಡುವ ಆರ್.ಎಸ್.ಎಸ್./ಬಿಜೆಪಿ ನೇತೃತ್ವದ ಕೋಮುವಾದಿ ಶಕ್ತಿಗಳು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ ಮೇಲೂ ಧಾಳಿಯಿಡುತ್ತಾರೆ.

ಭಯೋತ್ಪಾದನೆ, ಸ್ವಾತಂತ್ರ್ಯ ಹೋರಾಟ ಮತ್ತು ರಾಷ್ಟ್ರವಾದ

ಭಯೋತ್ಪಾದನೆಯನ್ನು ಸ್ವಾತಂತ್ರ್ಯ ಹೋರಾಟದೊಂದಿಗೆ ಹೋಲಿಸುವುದು 'ಒಂದು ವಂಚಕ ತರ್ಕ' ಎನ್ನುತ್ತಾರೆ ಪ್ರಧಾನಿಗಳು. ಖಂಡಿತಾ ನಿಜ. ಅದೇ ತರ್ಕ ಬಳಸುವುದಾದರೆ ಭಯೋತ್ಪಾದನೆಯನ್ನು ರಾಷ್ಟ್ರೀಯವಾದ ಎನ್ನಲೂ ಸಾಧ್ಯವಿಲ್ಲ, ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟುವ ಹೆಸರಲ್ಲಿ ಎಬ್ಬಿಸಿದ ಭಾವೋದ್ರೇಕದಲ್ಲಿ ಬಾಬ್ರಿ ಮಸೀದಿ ಧ್ವಂಸವಾಯಿತು. ನಂತರ ಸಾವಿರಾರು ಜೀವಗಳ ಬಲಿಯಾಯಿತು. ಆದರೂ ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟುವುದು ರಾಷ್ಟ್ರೀಯ ಭಾವನೆಯ ಪ್ರತಿಫಲನ ಎಂದು ಪ್ರಧಾನಿಗಳು ಸಂಸತ್ತಿನಲ್ಲಿ ಹೇಳಿದರು. ಹಿಂದುತ್ವವಾದಿಗಳ ಬೇಡಿಕೆಯನ್ನು ಇಡೀ ರಾಷ್ಟ್ರದ ಬೇಡಿಕೆ ಎನ್ನಲಾಗುತ್ತಿದೆ.

ಭಯೋತ್ಪಾದನೆಯನ್ನು ಎಂದೂ ಸ್ವಾತಂತ್ರ್ಯ ಹೋರಾಟದೊಂದಿಗೆ ಹೋಲಿಸಲಾಗದು. ನಿಜ, ಆದರೆ ಭಯೋತ್ಪಾದನೆಯನ್ನು ರಾಷ್ಟ್ರವಾದದೊಂದಿಗೆ ಹೋಲಿಸಬಹುದೇ? 'ಹಿಂದುತ್ವ ಪಡೆಗಳ ಭಯೋತ್ಪಾದನೆ ರಾಷ್ಟ್ರೀಯ ಹಿತಕ್ಕೆ ಅನುಗುಣವಾಗಿದೆ. ಇತರ ಎಲ್ಲಾ ಭಯೋತ್ಪಾದಕ ಪ್ರವೃತ್ತಿಗಳು ಮಾತ್ರ ದೇಶದ ಹಿತಾಸಕ್ತಿಗಳಿಗೆ ವಿರುದ್ಧವಾಗಿವೆ' ಎಂದು ಪ್ರಧಾನಮಂತ್ರಿಗಳು ಸೂಚಿಸುವಂತಿದೆ. ಇಲ್ಲಿ ಭಯೋತ್ಪಾದನಯ ಪಿಡುಗನ್ನು ನಿವಾರಿಸುವ ಆಶಯಕ್ಕಿಂತ ಅದನ್ನು ರಾಜಕೀಯ ಲಾಭಕ್ಕೆ ಬಳಸುವ ಆಶಯವೇ ಹೆಚ್ಚಾಗಿ ಕಾಣುತ್ತದೆ.

ವಾಜಪೇಯಿ ಅಂಡ್ ಕೋ. - ನದ್ದು ಇದೇ ತರ್ಕ ಎಂಬುದು ಈಗ ಮತ್ತೆ ದೃಢಪಡಿಸುತ್ತಿದೆ. ಕಳೆದ ವರ್ಷ ಇದೇ ಸುಮಾರಿಗೆ ಅಯೋಧ್ಯೆಯಲ್ಲಿ ವಿವಾದಿತ ಸ್ಥಳದಲ್ಲಿ ದೇವಸ್ಥಾನ ಕಟ್ಟುವ ಪ್ರಶ್ನೆಯನ್ನು ಎತ್ತಿ ದೇಶಾದ್ಯಂತ ಕೋಮು ಭಾವೋದ್ರೇಕವನ್ನು ಎಬ್ಬಿಸಲು ಪ್ರಯತ್ನಿಸಲಾಯಿತು. ಈ ಹಿನ್ನೆಲೆಯಲ್ಲಿ ಗೋದ್ರಾ ಹಾಗೂ ನಂತರ ಗುಜರಾತಿನ ಭೀಕರ ಘಟನೆಗಳೂ ನಡೆದವು. ಮಧ್ಯ ಪ್ರವೇಶಿಸಲು ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಲಾಯಿತು. ಅದು ಮಾರ್ಚ್ 13, 2002 ರಂದು ನೀಡಿದ ತೀರ್ಪಿನಲ್ಲಿ "ಸರಕಾರ ವಹಿಸಿಕೊಂಡ ಭೂಮಿಯಲ್ಲಿ ಯಾವುದೇ ಭಾಗವನ್ನು ಯಾರಿಗೂ ಸರಕಾರ ವಹಿಸಿಕೊಡುವಂತಿಲ್ಲ. ಈ ರಿಟ್ ಅರ್ಜಿಯ ತೀರ್ಮಾನವಾಗುವ ವರೆಗೆ ಈ ಭೂಮಿಯ ಯಾವುದೇ ಭಾಗವನ್ನು ಯಾವುದೇ ಧಾರ್ಮಿಕ ಉದ್ದೇಶಕ್ಕೆ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಬಳಸಲು ಅನುಮತಿಯಿಲ್ಲ" ಎಂದು ಸ್ಪಷ್ಟವಾಗಿ ಹೇಳಿತ್ತು. ಆದರೂ ವಾಜಪೇಯಿ ಸರಕಾರ ಈ ಫೆಬ್ರವರಿ 4 ರಂದು ಸುಪ್ರಿಂ ಕೋರ್ಟ್ ತನ್ನ ಈ ಹಿಂದಿನ ಆದೇಶವನ್ನು ಹಿಂತೆಗೆದುಕೊಳ್ಳಬೇಕೆಂದು ಅರ್ಜಿ ಹಾಕಿದೆ! ನ್ಯಾಯಾಲಯದ ತೀರ್ಪನ್ನು ಮನ್ನಿಸುವುದಿಲ್ಲ ಎಂದು ಸಾರುವ ವಿಹೆಚ್‌ಪಿ ಯಂತಹವುಗಳೊಟ್ಟಿಗೆ ಈ ಸರಕಾರದ ಬಹಿರಂಗ ಪಾಲುದಾರಿಕೆ ಹೀಗಿದೆ. ಇದರೊಂದಿಗೆ ದೇಶದ ಉದ್ದಗಲ್ಲಕೂ ಈ ಆರ್‌ಎಸ್‌ಎಸ್ ವಿಷ ಬಾಹುಗಳ ಕರ್ಣಕಠೋರ ಪ್ರಚಾರ. ಇದು 'ಭಾವೋದ್ರೇಕ ಉರಿಹಚ್ಚುವ, ದ್ವೇಷ ಹರಡುವ, ಹಿಂಸಾಚಾರ ಪ್ರಚೋದಿಸುವ ಪ್ರಯತ್ನ" ವಲ್ಲದೆ ಮತ್ತೇನು, ಶ್ರೀಯುತ ವಾಜಪೇಯಿಯವರೇ? ನಿಮ್ಮ ನಿರ್ವಚನೆಯ ಪ್ರಕಾರ ಇದು ಭಯೋತ್ಪಾದನೆಯೇ. ವಾಸ್ತವವಾಗಿ ಭಾರತದ 'ಮೋದೀಕರಣ' ರಭಸದಿಂದ ಸಾಗಿದೆ

ಮತ್ತೊಂದು ಕುಟಿಲೋಪಾಯ

ಆದರೆ ವಾಜಪೇಯಿಯವರು ಇದನ್ನು ಭಾರತೀಯ ರಾಷ್ಟ್ರೀಯ ವಾದದ ಮುಂದುವರೆದ ಪ್ರತಿಪಾದನೆಯನ್ನಬಹುದು. ಹಿಟ್ಲರ್ ಕೂಡಾ ನಾಝಿವಾದ ಹೇರುವಾಗ ಅದು ಜರ್ಮನ್ ರಾಷ್ಟ್ರೀಯವಾದದ ಪ್ರತಿಪಾದನೆ ಎಂಬ ತರ್ಕ ಹೂಡಿದ್ದರು.

ವಾಜಪೇಯಿಯವರು ತನ್ನ ವಾರ್ಷಿಕ ಚಿಂತನೆಯ ಇತ್ತೀಚಿನ ಆವೃತ್ತಿಯಲ್ಲಿ ಹಿಂದುತ್ವ ಆಂತರಿಕವಾಗಿ ಧರ್ಮನಿರಪೇಕ್ಷ ಹಾಗೂ ಸಹಿಷ್ಣು ಎಂದಿದ್ದಾರಲ್ಲ! ಹಿಂದುತ್ವ ಒಂದು ಮತ ಧರ್ಮವಲ್ಲ, ಜೀವನ ಶೈಲಿ ಎಂದು ಬಿಂಬಿಸಲು ಅವರು ಹಿಂದಿನ ಸುಪ್ರೀಂ ಕೋರ್ಟ್ ತೀರ್ಪೊಂದನ್ನು ಸದಾ ಉದ್ಗರಿಸುತ್ತಾರೆ. ಆದರೆ ಆ ತೀರ್ಪು ನೀಡಿದ ನ್ಯಾಯಮೂರ್ತಿ ವರ್ಮಾ ಇತ್ತೀಚಿಗೆ ಆ ಬಗ್ಗೆ ಸ್ಪಷ್ಟೀಕರಣ ನೀಡುತ್ತಾ ಆ ತೀರ್ಪಿನಲ್ಲಿ ಹೇಳಿದ್ದು ಹಿಂದೂ ಧರ್ಮ ಒಂದು ಜೀವನಶೈಲಿಯೆಂದೇ ಹೊರತು ಹಿಂದುತ್ವವನ್ನಲ್ಲ ಎಂದಿದ್ದಾರೆ. ಅಷ್ಟೇ ಅಲ್ಲ, ತನ್ನ ತೀರ್ಪಿನ ತಪ್ಪು ವ್ಯಾಖ್ಯಾನ ಮಾಡಲಾಗಿದೆ ಎಂದೂ ಅವರು ಹೇಳಿದ್ದಾರೆ. ಯಾರು ತಪ್ಪು ವ್ಯಾಖ್ಯಾನ ಮಾಡುತ್ತಿರುವವರು? ನಿಮ್ಮ ಊಹೆಗೆ ಬಿಟ್ಟದ್ದು.

ಇಲ್ಲೇ ಇರುವುದು ಇನ್ನೊಂದು ಕಪಟೋಪಾಯ. ಹಿಂದೂ ಅಥವಾ ಹಿಂದೂ ಧರ್ಮವನ್ನು ಉದ್ದೇಶಪೂರ್ವಕವಾಗಿ ಹಿಂದುತ್ವದೊಂದಿಗೆ ಸಮೀಕರಿಸಿ ಅವುಗಳೆರಡರ ನಡುವಿನ ಮಹತ್ವದ ಭಿನ್ನತೆಯನ್ನು ಮರೆಮಾಚಲು ಪ್ರಯತ್ನಿಸಲಾಗುತ್ತಿದೆ. ಈ ಹಿಂದೆ ಹೇಳಿದಂತೆ 'ಹಿಂದುತ್ವ' ಎಂಬ ಪದವನ್ನು 1923 ರಲ್ಲಿ ವಿನಾಯಕ ದಾಮೋದರ ಸಾವರ್ಕರ್ ಒಂದು ರಾಜಕೀಯ ಘೋಷಣೆಯಾಗಿ ಸೃಷ್ಟಿಸಿದರು. ಹಿಂದುತ್ವ ಮತ್ತು ಹಿಂದೂ ಧರ್ಮ ಸಮಾನಾರ್ಥಕ ಪದಗಳಲ್ಲ, ಹಿಂದುತ್ವ ಎಂಬುದು ರಾಜಕೀಯ ಅಧಿಕಾರ ವಶಪಡಿಸಿಕೊಳ್ಳಲು ರೂಪಿಸಿರುವ ರಾಜಕೀಯ ಘೋಷಣೆಯೆಂದು ಆ ಪದದ ಸೃಷ್ಟಿಕರ್ತನೇ ಒಪ್ಪಿಕೊಂಡಿದ್ದಾರೆ.

ಆದರೆ ವಾಜಪೇಯಿ ಮತ್ತು ಆರ್‌ಎಸ್‌ಎಸ್ ವಿಷ ಬಾಹುಗಳು ಹಿಂದುತ್ವ ಮತ್ತು ಹಿಂಧೂ ಧರ್ಮವನ್ನು ಸಮಾನಾರ್ಥಕವಾಗಿ ಬಿಂಬಿಸಿ ಉದ್ದೇಶಪೂರ್ವಕವಾಗಿಯೇ ಹಾಗೂ ಬಹಿರಂಗವಾಗಿಯೇ ತಮ್ಮ ರಾಜಕೀಯ ಅಜೆಂಡಾದ ಸಾಧನೆಗೆ ಜನರ ಧಾರ್ಮಿಕ ಭಾವನೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರವನ್ನು ಒಂದು ಅತ್ಯಂತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸುವುದೇ ಅವರ ರಾಜಕೀಯ ಅಜೆಂಡಾ. ಇದೇ ಪ್ರಧಾನಮಂತ್ರಿಗಳ ಶಬ್ದ ಚಾತುರ್ಯದ ಸಾರಾಂಶ. ❍

ಕರ್ನಾಟಕದ ವಿದ್ಯುತ್ ರ

ಹಿಂದೊಮ್ಮೆ ಹೆಚ್ಚುವರಿ ವಿದ್ಯುತ್ ಹೊಂದಿದ್ದ ಕರ್ನಾಟಕ ಇಂದು ವಿದ್ಯುತ್ ಕ್ಷಾಮವನ್ನು ಎದುರಿಸುತ್ತಿದೆ. ಆಳುವ ಸರ್ಕಾರಗಳು ಯಾವುದೇ ಮುಂದಾಲೋಚನೆ ಇಲ್ಲದೆ ಐಎಂಎಫ್-ವಿಶ್ವಬ್ಯಾಂಕ್ ಒತ್ತಡಕ್ಕೆ ಮಣಿದು ಖಾಸಗೀಕರಣದ ಮೇಲೆ ಅವಲಂಬಿತವಾದುದೇ ಈ ದುರಂತಕ್ಕೆ ಕಾರಣ. ಇದರ ಮೇಲೆ ಬೆಳಕು ಚೆಲ್ಲಿದ್ದಾರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್. ಸರ್ಕಾರ ವಿದ್ಯುತ್ ದರ ಹೆಚ್ಚಿಸಬೇಕೆಂದು ಪಟ್ಟು ಹಿಡಿದಿರುವ ಸಂದರ್ಭದಲ್ಲಿ, ಅದರ ವಿರುದ್ಧವಾಗಿ ಜನರು ಹೋರಾಡಲು ಸನ್ನದ್ಧರಾಗಿರುವಾಗ ಸಾಂದರ್ಭಿಕ ಲೇಖನ ಇದಾಗಿದೆ. ಸರ್ಕಾರದ ವಿದ್ಯುತ್ ರಂಗದ ನೀತಿಯು ತರುವ ಅಪಾಯವನ್ನು ವಿಶ್ಲೇಷಿಸಿದ್ದಾರೆ.


ಕರ್ನಾಟಕದಲ್ಲಿ ಇನ್ನೂ ಚಳಿಗಾಲದ ಆರಂಭದಲ್ಲಿಯೇ ಪವರ್‌ಕಟ್, ಲೋಡ್ ಷೆಡ್ಡಿಂಗ್‌ಗಳು ದಿನನಿತ್ಯದ ಮಾತಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಂತೂ 12-14 ಗಂಟೆಗಳ ದೀರ್ಘ ಲೋಡ್ ಷೆಡ್ಡಿಂಗ್‌ಗಳ ಸಂಕಷ್ಟವನ್ನು ಎದುರಿಸಬೇಕಾಗಿದೆ. ಬೇಸಿಗೆ ಆರಂಭವಾದ ಮೇಲೆ - ಎಲ್ಲಾ ಫ್ಯಾನ್‌ಗಳೂ ಹಗಲು ರಾತ್ರಿ ಗರಗರ ತಿರುಗಲಾರಂಭಿಸಿದಾಗ ಕರ್ನಾಟಕದ ಎಲ್ಲಾ ಪಂಪ್‌ಸೆಟಗಳೂ ಎಷ್ಟು ಗರಿಷ್ಠ ಕಾಲ ಓಡಲು ಆಗುವುದೋ ಅಷ್ಟು ಕಾಲವೂ ಓಡಲು ಆರಂಭಿಸಿದಾಗ ದಿನವೊಂದಕ್ಕೆ 10 ಕೋಟಿ ಯೂನಿಟ್ ವಿದ್ಯುತ್ ಬೇಕಾಗುವ ಚಳಿಗಾಲಕ್ಕೆ ಬದಲಾಗಿ 11 ಕೋಟಿ ಯೂನಿಟ್‌ಗಳು ಬಳಕೆಯಾಗುವ ಬೇಸಿಗೆಯ ದಿನಗಳಲ್ಲಿ ಪವರ್‌ಕಟ್ ಇನ್ನು ಎಷ್ಟು ತೀವ್ರವಾಗಿರಬಹುದು ಎಂದು ಊಹಿಸಬಹುದು.

ದರ ಏರಿಕೆಯ ಶಾಕ್

ಪವರ್‌ಕಟ್‌ಗಳ ಜೊತೆ ಜೊತೆಗೆ ಈ ಬೇಸಿಗೆಯುಲ್ಲಿ ಮತ್ತೊಂದು ಶಾಕ್ ನಮ್ಮ ಮೇಲೆರಗಲಿದೆ. ಈಗಾಗಲೇ ಪತ್ರಿಕೆಗಳಲ್ಲಿ ಪುಟಗಟ್ಟಲೆ ಜಾಹಿರಾತು ನೀಡಿರುವಂತೆ ವಿದ್ಯುತ್ ದರ ಏರಿಕೆಯ ಶಾಕ್. ವಿದ್ಯುತ್ ಬಿಲ್ ಕೊಡುವ ಶಕ್ತಿ ಇಲ್ಲದ ಎರಡು ಹೊತ್ತು ಊಟಕ್ಕೆ ಕಷ್ಟಪಡ ಬೇಕಾದ ಬಡವರಿಗೆ ಮುಫತ್ತಾಗಿ ವಿದ್ಯುತ್ ನೀಡಲೆಂದು ರೂಪಿತವಾದ ಭಾಗ್ಯಜ್ಯೋತಿ - ಕುಟೀರ ಜ್ಯೋತಿಗಳಿಗೆ ಅತ್ಯಂತ ಹೆಚ್ಚು ದರ ಏರಿಕೆ. ಈ ಮೂರು ವರ್ಷಗಳಲ್ಲಿ 5 ರೂ.ನಿಂದ 50 ರೂ.ಗೆ ಹತ್ತು ಪಟ್ಟು ದರ ಏರಿಕೆ. ಆ ಮೂಲಕ ಭಾಗ್ಯಜ್ಯೋತಿ ಯೋಜನೆಯ ಮೂಲ ಉದ್ದೇಶದ ನಾಶ (ಕರ್ನಾಟಕದಲ್ಲಿ ಜನಪ್ರಿಯವಾದ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ, ನಗರಗಳಲ್ಲಿ ಕೂಡ ವಿದ್ಯುತ್ತಿಲ್ಲದ ಅಪಾರ ಸಂಖ್ಯೆಯ ಮನೆಗಳಿಗೆ ಬೆಳಕು ಹರಿಸಲು ಕಾರಣವಾದ ಯೋಜನೆಯನ್ನು ದೇಶಕ್ಕೆ ಅಳವಡಿಸಿ ಕುಟೀರ ಜ್ಯೋತಿ ಎಂಬ ಹೆಸರಿನಲ್ಲಿ ದೇಶದಾದ್ಯಂತ ಜಾರಿಯಲ್ಲಿದೆ. 21 ಲಕ್ಷ ಕುಟುಂಬಗಳು ಉಪಯೋಗಿಸುವ ಈ ಯೋಜನೆಯ ಹೆಸರನ್ನು ಮಾತ್ರ ಉಳಿಸಿಕೊಂಡು ನಾಶ ಮಾಡುವ ದುಷ್ಟ ಹೊಂಚನ್ನು ರಾಜ್ಯ ಸರಕಾರ ಹಾಕಿದೆ.

ಗೃಹ ಬಳಕೆ

ಭಾಗ್ಯಜ್ಯೋತಿ ನಂತರ ರಾಜ್ಯ ಸರ್ಕಾರದ ಮತ್ತು ಅವರ ವಿದ್ಯುತ್ ಸರಬರಾಜು ಕಂಪನಿಗಳ ಕಣ್ಣು ಬಿದ್ದಿರುವುದು ಗೃಹ ಬಳಕೆದಾರರ ಮೇಲೆ. ಅದರಲ್ಲಿಯೂ ಎಚ್ಎಚ್ ಅಲ್ಲದ ಬಡಗೃಹ ಬಳಕೆದಾರರ ಮೇಲೆ. ಈ ಬಡಗೃಹಬಳಕೆದಾರರು ತಿಂಗಳಿಗೆ ಸರಾಸರಿ ಕೇವಲ 26 ಯೂನಿಟ್ ವಿದ್ಯುತ್ ಬಳಸುವವರು. ಇದರಲ್ಲಿ ತಿಂಗಳಿಗೆ ಕೇವಲ 14 ಯೂನಿಟ್ ಬಳಸುವ ಮಧುಗಿರಿ ಡಿವಿಷನ್ ಬಳಕೆದಾರರೂ ಸೇರಿದಂತೆ 14 ಡಿವಿಷನ್‌ಗಳಲ್ಲಿ 20 ಯೂನಿಟ್‌ಗಳಿಗಿಂತಲೂ ಕಡಿಮೆ ಬಳಸುವವರು. ಇಂತಹ ಗುಬ್ಬಚ್ಚಿಗಳ ಮೇಲೆ ವಿದ್ಯುತ್ ಸರಬರಾಜು ಕಂಪನಿಗಳು ಬ್ರಹ್ಮಾಸ್ತ್ರ ಹೂಡಿದ್ದಾರೆ. ತಿಂಗಳಿಗೆ 30 ಯೂನಿಟ್‌ಗಳಿಗೆ 1.50 ರೂ.ಇದ್ದುದನ್ನು ಈಗ 0-100 ಯೂನಿಟ್‌ಗಳವರೆಗೆ ಒಂದು ಗುಂಪು ಮಾಡಿ ಯೂನಿಟ್‌ಗೆ 2-50 ರೂ. ಏರಿಕೆ ಸೂಚಿಸಿದ್ದಾರೆ.



ಇದರಿಂದ 55 ಲಕ್ಷಕ್ಕಿಂತ ಹೆಚ್ಚು ಬಡ ಬಳಕೆದಾರರಿರುವ ಈ ವಲಯದ ಮೇಲೆ ಎಲ್ಲ ವಿದ್ಯುತ್ ಬಳಕೆದಾರರ ಮೇಲೆ ಹೇರಿದ್ದಕ್ಕಿಂತ ಹೆಚ್ಚು ಏರಿಕೆ ಬಯಸಿದ್ದಾರೆ. ಸುಮಾರು 15 ಲಕ್ಷ ಇರುವ ಸರ್ವ ವಿದ್ಯುತ್ ಗೃಹಬಳಕೆದಾರರು ಒಂದು ಯೂನಿಟ್‌ಗೆ 4.25 ರೂವರೆಗೆ ಅಂದರೆ ಒಂದು ತಿಂಗಳಿಗೆ 750 ರಿಂದ 1200 ರೂವರೆಗೆ ಕೇವಲ ವಿದ್ಯುತ್ ಬಿಲ್ ತೆರಬೇಕಾಗುತ್ತದೆ. ಇವುಗಳ ಜೊತೆಗೆ ವಿದ್ಯುತ್ ದರ ಹೆಚ್ಚಾಗುವುದರಿಂದ ಕುಡಿಯುವ ನೀರಿನ ದರ, ತರಕಾರಿ, ಹಣ್ಣಿನ ಬೆಲೆಗಳು ಇತ್ಯಾದಿಗಳೂ ಏರಿ ನಗರಗಳ ಮಧ್ಯಮ ವರ್ಗದ ಮೇಲೆ ಹೊರೆ ಏರುತ್ತದೆ.

ನೀರಾವರಿ ಪಂಪ್‌ಸೆಟ್‌ಗಳ ದರ ಮತ್ತು ಮೀಟರೀಕರಣ

ಒಂದು ವರ್ಷಕ್ಕೆ ಪ್ರತಿ ಎಚ್.ಪಿ.ಗೆ 720 ರೂ. ದರವನ್ನು, ನಗರಗಳ ಬಳಿ ಒಂದು ವರ್ಷಕ್ಕೆ ಪ್ರತಿ ಹೆಚ್.ಪಿ.ಗೆ 1200 ರೂ.ಗಳನ್ನು ಸೂಚಿಸಲಾಗಿದೆ. ಅದೇ ಸಮಯದಲ್ಲಿ ಮೀಟರುಗಳನ್ನು ಜೋಡಿಸಲೇಬೇಕೆಂದು, ಮೀಟರುಗಳನ್ನು ಜೋಡಿಸಿದರೆ ವರ್ಷಕ್ಕೆ ಹೆಚ್.ಪಿ.ಗೆ 2400 ರೂ ಮತ್ತು ಒಂದು ಯೂನಿಟ್‌ಗೆ 40 ಪೈಸೆ ಎಂದು ಸೂಚಿಸಿದ್ದಾರೆ. ಇದು ಹಿಂದಿನ ವರ್ಷ ಚಾಲ್ತಿಯಲ್ಲಿದ್ದ ದರವಾದ ಹೆಚ್.ಪಿ.ಗೆ ವರ್ಷಕ್ಕೆ 540 ರೂ.ಗಳಿಗಿಂತ ಹೆಚ್ಚು. ಆದರೆ ಈ ದರ ನಿಗದಿಯ ಒಳಗುಟ್ಟು ಇರುವುದೇ ಕಡ್ಡಾಯ ಮೀಟರೀಕರಣದಲ್ಲಿ. ಈ ದರವನ್ನು ನಿಗದಿ ಮಾಡುವಾಗ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಸ್ಪಷ್ಟವಾಗಿ ಹೀಗೆ ಹೇಳಿದೆ. "ಎಲ್ಲಾ ಪಂಪ್‌ಸೆಟ್ ಬಳಕೆದಾರರು ಮೀಟರುಗಳನ್ನು ಅಳವಡಿಸಿಕೊಳ್ಳಲಿ ಎಂದು ಉತ್ತೇಜನ ನೀಡಲೆಂದೇ ಮೀಟರುಗಳನ್ನು ಅಳವಡಿಸಿಕೊಂಡ ಪಂಪ್‌ಸೆಟ್‌ಗಳಿಗೆ ಅಳವಡಿಸಿಕೊಳ್ಳದ ಪಂಪ್ ಸೆಟ್‌ಗಳಿಗಿಂತ ಕಡಿಮೆ ದರ ನಿಗದಿ ಮಾಡಲಾಗಿದೆ". ಕೆ.ಪಿ.ಟಿ.ಸಿ.ಎಲ್. ಪಂಪ್‌ಸೆಟ್‌ಗಳಿಗೆ ದರ ಏರಿಕೆಯ ಪ್ರಸ್ತಾಪ ಮುಂದಿಟ್ಟಾಗ ಮೂರು ಪಂಪ್‌ಸೆಟ್‌ಗಳಿಗಿಂತ ಕಡಿಮೆ ಇರುವವರಿಗೆ ಒಂದು ಯೂನಿಟ್‌ಗೆ 80 ಪೈಸೆ ಮೂರು ಪಂಪ್ ಸೆಟ್‌ಗಳು ಹಾಗೂ ಅದಕ್ಕಿಂತ ಹೆಚ್ಚಿರುವವರಿಗೆ ಒಂದು ಯೂನಿಟ್‌ಗೆ 3.00 ರೂ ಎಂದು ಸೂಚಿಸಿತ್ತು.

ಇದರಿಂದ ಕೆ.ಪಿ.ಟಿ.ಸಿ.ಎಲ್. ಹಾಗೂ ಕೆ.ಇ.ಆರ್.ಸಿ. (ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ) ಗಳ ಚಿಂತನೆ ಏನೆಂದು ಸ್ಪಷ್ಟವಾಗುತ್ತದೆ. ಪಂಪ್‌ಸೆಟ್‌ಗಳ ಮೀಟರೀಕರಣ ಆಗುವವರೆಗೂ ಕಡಿಮೆ ದರ ನಿಗದಿ ಮಾಡಿ ಆನಂತರ ವಿದ್ಯುತ್ ಸರಬರಾಜಿಗೆ ತಗುಲುವ ವೆಚ್ಚವನ್ನು ಪೂರ್ಣವಾಗಿ ವಸೂಲಿ ಮಾಡಬೇಕೆಂದು ಕೇಂದ್ರ ಸರ್ಕಾರ ಹಾಗೂ ವಿಶ್ವಬ್ಯಾಂಕ್‌ಗಳ ನಿರ್ದೇಶನವಿದೆ. ಅಂದರೆ ಒಂದೆರಡು ವರ್ಷಗಳಲ್ಲಿ ಒಂದು ಪಂಪ್‌ಸೆಟ್ ಒಂದು ವರ್ಷಕ್ಕೆ 6040 ಯೂನಿಟ್ ವಿದ್ಯುತ್ ಬಳಸುತ್ತದೆಂಬ ಸಮೀಕ್ಷೆಯ ಆಧಾರದ ಮೇಲೆ 5 ಹೆಚ್‌ಪಿ ಪಂಪ್‌ಸೆಟ್‌ಗೆ ಒಂದು ವರ್ಷಕ್ಕೆ 22,000 ರೂಗಳಿಗಿಂತ ಹೆಚ್ಚು ವಿದ್ಯುತ್ ಬಿಲ್ ತೆರಬೇಕಾಗುತ್ತದೆ. ಮಳೆಯ ಕೆಲವು ದಿನಗಳ ಹೊರತಾಗಿ ವರ್ಷವಿಡೀ ವಿದ್ಯುತ್ ಇರುವಷ್ಟು ಕಾಲವೂ ಕೆಲಸ ಮಾಡುವ ಕೋಲಾರ, ಬೆಂಗಳೂರು, ತುಮಕೂರು, ಬೆಳಗಾಂ, ಬಿಜಾಪುರ, ಗುಲ್ಬರ್ಗಾ ಮೊದಲಾದ ಬಯಲು ನಾಡಿನ ಬರಗಾಲ ಪೀಡಿತ ಪ್ರದೇಶದ ಜಿಲ್ಲೆಗಳಲ್ಲಿ ವಿದ್ಯುತ್ ಬಳಕೆಯ ಪ್ರಮಾಣ ಇನ್ನೂ ಹೆಚ್ಚಿರುತ್ತದೆ. ಹೀಗಾಗಿ ಮಳೆಯಿಲ್ಲದ ಸಮಯದಲ್ಲಿ ತಿಂಗಳಿಗೆ 2,000-4,000 ರೂ ಬಿಲ್ ಬರುವ ಸಾಧ್ಯತೆ ಇದೆ. ಇದು ಮೂರು ತಿಂಗಳ ಒಂದು ತರಕಾರಿ ಬೆಳೆಗೆ 6,000 ರೂ ನಿಂದ 12,000 ರೂವರೆಗೂ ಏರುತ್ತದೆ. ಒಂದು ಬೆಳೆಗೆ ವಿದ್ಯುತ್ ವೆಚ್ಚವೇ ಈ ಪ್ರಮಾಣದ್ದಾದರೆ ಬೆಳೆ ಹೇಗೆ ಬೆಳೆಯುವುದು? ಬೆಳೆದ ಬೆಳೆಗಳನ್ನು ಆ ದುಬಾರಿ ಬೆಲೆ ತೆತ್ತು ಕೊಳ್ಳುವವರು ಯಾರು?

ವಿದ್ಯುತ್ ದರದಲ್ಲಿ ಸಹಾಯಧನ(ಸಬ್ಸಿಡಿ) ಹಾಗೂ ವಿದೇಶಿ ಆಮದುಗಳಿಂದ ಬೆಲೆ ಕುಸಿತ

ಈಗಾಗಲೇ ಕೃಷಿ ಬಿಕ್ಕಟ್ಟಿಗೆ ಸಿಲುಕಿದೆ. ಅದರಲ್ಲಿಯೂ ಪಂಪ್‌ಸೆಟ್ ನೀರಾವರಿ ಕೃಷಿಯ ಬೆಳೆಗಳ ಬೆಲೆಗಳು ಹೊರ ದೇಶಗಳ ಆಮದಿನಿಂದಾಗಿ ಕುಸಿದಿದೆ. ರೇಷ್ಮೆ, ಹಾಲು, ಅಡಿಕೆ, ತೆಂಗು, ಕಾಫಿ ಇತ್ಯಾದಿ. ಯಾವುದೇ ಬೆಳೆಯನ್ನು ಯಾವುದೇ ದೇಶದಿಂದ ಆಮದು ಮಾಡುವುದಕ್ಕೆ ವಿಶ್ವ ವಾಣಿಜ್ಯ ಸಂಸ್ಥೆಯ (WTO) ನಿಯಮಗಳಿಗೆ ಕಣ್ಮುಚ್ಚಿ ಸಹಿ ಹಾಕಿ, ಕೇಂದ್ರ ಸರ್ಕಾರ ಅವಕಾಶ ನೀಡಿರುವ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಯಾವ ಬೆಳೆಯ ಬೆಲೆ ಹೆಚ್ಚಿದರೂ ಕೂಡ ಅದು ವಿದೇಶಗಳಿಂದ ಆಮದಾಗಿ ನಮ್ಮ ಬೇಸಾಯವನ್ನು ಮುಳುಗಿಸುತ್ತದೆ.

ವಿಶ್ವಬ್ಯಾಂಕ್ ಒತ್ತಡದ ಮೇಲೆ ಕೃಷಿಗೆ ವಿದ್ಯುತ್ ದರಗಳನ್ನು ಕಡಿಮೆ ದರದಲ್ಲಿ ಒದಗಿಸಿ ಸಬ್ಸಿಡಿ ನೀಡಬಾರದು ಎನ್ನುವ ವಿದ್ಯುತ್ ನೀತಿಯನ್ನು ಯಾವ ಕೇಂದ್ರ ಸರ್ಕಾರ ಒತ್ತಾಯದಿಂದ ರಾಜ್ಯ ಸರ್ಕಾರಗಳ ಮೇಲೆ ಹೇರುತ್ತಿದೆಯೋ ಅದೇ ಕೇಂದ್ರ ಸರ್ಕಾರ ಹಾಗೂ ವಿಶ್ವವಾಣಿಜ್ಯ ಸಂಸ್ಥೆ ವಿದೇಶಗಳ ಆಮದಿಗೆ ಯಥೇಚ್ಛ ಅವಕಾಶ ನೀಡಿದೆ. ಅದೇ ಸಮಯದಲ್ಲಿ ನಮ್ಮ ದೇಶದೊಳಕ್ಕೆ ನುಗ್ಗಿಬರುವ ಈ ಕೃಷಿ ಫಸಲುಗಳು ಅಮೇರಿಕ, ಆಸ್ಟ್ರೇಲಿಯಾ, ಯೂರೋಪ್ ಗಳಲ್ಲಿ ಬೆಳೆಯ ವೆಚ್ಚದ ಶೇ.50 ರಿಂದ ಶೇ.70ರವರೆಗೂ ಸಹಾಯಧನ ಪಡೆದಿದೆ. ಅಂತಹ ಸಂದರ್ಭದಲ್ಲಿ ಭಾರತದಲ್ಲಿ ಕೃಷಿಗೆ ವಿದ್ಯುತ್‌ದರದ ಸಹಾಯಧನ ಹೇಗೆ ಅನ್ಯಾಯವಾಗುತ್ತದೆ? ಈ ಪ್ರಶ್ನೆಯನ್ನು ಕರ್ನಾಟಕದ ಜನತೆ ಎತ್ತಬೇಕಾಗಿದೆ.

ಜಿ.ಎನ್.

ಕೈಗಾರಿಕೆಗಳು ಹಾಗೂ ವಿದ್ಯುತ್ ದರ

ಕೈಗಾರಿಕೆಗಳು ಕೂಡ ಇಂದು ವಿದೇಶಿ ಆಮದಿನ ಸ್ಪರ್ಧೆಯನ್ನು ಎದುರಿಸುತ್ತಾ ತೀವ್ರ ಬಿಕ್ಕಟ್ಟಿನಲ್ಲಿದೆ. ಸಾವಿರಾರು ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳು ಮುಚ್ಚಿಕೊಂಡಿವೆ, ರೋಗಗ್ರಸ್ಥವಾಗಿವೆ. ದೊಡ್ಡ ಕೈಗಾರಿಕೆಗಳು ಕೂಡ ಈ ಸ್ಪರ್ಧೆಯನ್ನು ಎದುರಿಸಲೆಂದು ಕಾರ್ಮಿಕರ ಸಂಖ್ಯೆಯನ್ನು ಕಡಿತ ಗೊಳಿಸುತ್ತಿದೆ. ಹೀಗಾಗಿ ಲಕ್ಷಾಂತರ ಕಾರ್ಮಿಕರು ಕೆಲಸ ಕಳೆದು ಕೊಳ್ಳುತ್ತಿದ್ದಾರೆ. ಹೀಗೆ ವಿದೇಶದಿಂದ ಬರುವ ಆಮದುಗಳ ಉತ್ಪಾದನಾ ವೆಚ್ಚದಲ್ಲಿ ನಮ್ಮ ದೇಶಕ್ಕಿಂತ ಕಡಿಮೆ ಇರುವುದಕ್ಕೆ ಒಂದು ಮುಖ್ಯ ಕಾರಣ, ಆಯಾ ದೇಶಗಳಲ್ಲಿ ಕಡಿಮೆ ದರದಲ್ಲಿ ಸಿಗುವ ವಿದ್ಯುತ್ ದರ ಎಂದು ಕೈಗಾರಿಕೆ ಹಾಗೂ ವಾಣಿಜ್ಯ ಸಂಸ್ಥೆಗಳ ಒಕ್ಕೂಟಗಳಾದ FICCI ಹಾಗೂ CII ನ ವಿಶೇಷ ಅಧ್ಯಯನಗಳು ಹೇಳುತ್ತಿದೆ. ಆದರೆ ನಮ್ಮ ದೇಶದಲ್ಲಿ ವರ್ಷದಿಂದ ವರ್ಷಕ್ಕೆ ಕೈಗಾರಿಕೆಗಳ ವಿದ್ಯುತ್ ದರವನ್ನು ಏರಿಸಲಾಗುತ್ತಿದೆ. ಹಾಗೆಯೇ ವಿದ್ಯುತ್ ಕಡಿತವೂ ಕೈಗಾರಿಕೆಗಳ ಉತ್ಪಾದನೆ ಹಾಗೂ ಲಾಭ ನಷ್ಟಗಳ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ.

ಕರ್ನಾಟದಲ್ಲಿ ಈ ವರ್ಷ ಕೈಗಾರಿಕಾ ಬಳಕೆಗಾಗಿ ಒಂದು ಯೂನಿಟ್‌ಗೆ 3-25 ರಿಂದ 4-00 ರೂ.ಗೆ ಏರಿಕೆಯನ್ನು ಸೂಚಿಸಿದೆ. ಇದು ವರ್ಷಗಟ್ಟಲೆ ವಿದ್ಯುತ್ ಬಿಲ್‌ನ್ನು ಏರಿಸುತ್ತದ.

ಎತ್ತ ಸಾಗಿದೆ?

, ಮಧ್ಯಮ ಪ್ರಮಾಣದ ಕೈಗಾರಿಕೆಗಳು ಟ್ಟಿನಲ್ಲಿ ಸಿಲುಕುತ್ತವೆ. ಅನೇಕ ಮಿನಿ ಸ್ಟೀಲ್, ಂಟ್ ಕೈಗಾರಿಕೆಗಳು ವಿದ್ಯುತ್ ದರ ಲಾಗದೆ ಮುಚ್ಚಿಕೊಂಡಿವೆ. ಪವರ್‌ಲೂಮ್‌ಗೆ ದ್ಧವಾದ ಹಲವು ಪಟ್ಟಣಗಳೇ ಇಂದು ್ಯತ್ ದರ ಏರಿಕೆಯಿಂದಾಗಿ ಬಿಕ್ಕಟ್ಟಿನಲ್ಲಿ ಕಿವೆ. ಬೀದಿದೀಪ, ಕುಡಿಯುವ ನೀರು ಬರಾಜು ಮಾಡುವ ಪೌರ ಸಂಸ್ಥೆಗಳು, ಚಾಯ್ತಿಗಳು ದುಬಾರಿ ವಿದ್ಯುತ್ ದರ ತಲಾಗುತ್ತಿಲ್ಲ. ವಿದ್ಯುತ್ ಉಪಯೋಗಿಸುವ ುಗಳ ಸಾಗಾಣಿಕೆ ವೆಚ್ಚವೂ ದುಬಾರಿ ಗುತ್ತಿದೆ. ಇದರಿಂದ ಕುಡಿಯುವ ನೀರಿನ ದರ, ಪ್ರಯಾಣ ದರ ಏರುತ್ತದೆ.


ಹೀಗೆ ದರ ಏರಿಕೆಯಿಂದ ರಾಜ್ಯದ ಜನ ವನದ ಎಲ್ಲ ವಿಭಾಗಗಳೂ ಆರ್ಥಿಕ ಕಟ್ಟದಲ್ಲಿ ಸಿಲುಕುತ್ತವೆ. ಇಂತಹ ವಿದ್ಯುತ್ ದರ ಕೆ ಬೇಕು? ದರ ಏರಿಕೆಯ ಕಾರಣಗಳೇನು ಬುದನ್ನು ಪರೀಕ್ಷೆಗೊಳಪಡಿಸಬೇಕಾಗಿದೆ.

ರ್ಣಾಟಕದಲ್ಲಿ ವಿದ್ಯುತ್ ಅವಶ್ಯಕತೆ ಮತ್ತು ತ್ಪಾದನೆ - ಇಂದಿನ ಸ್ಥಿತಿ

ಕರ್ನಾಟಕದಲ್ಲಿ ಇಂದು 5102 ಮೆಗಾವ್ಯಾಟ್ ವಾ) ವಿದ್ಯುತ್ ತಯಾರಿಕಾ ಸಾಮರ್ಥ್ಯವನ್ನು ಸ್ಥಾಪಿಸಲಾಗಿದೆ. ಇದರಲ್ಲಿ 3027 ಮೆ.ವ್ಯಾ. ಜಲವಿದ್ಯುತ್, 1470 ಮೆ.ವ್ಯಾ. ಥರ್ಮಲ್ (ಶಾಖೋತ್ಪನ್ನ ವಿದ್ಯುತ್), 4359 ಮೆ.ವ್ಯಾ. ಗಳಷ್ಟು ರ್ವಜನಿಕ ವಲಯದ ವಿದ್ಯುತ್ ಸಾಮರ್ಥ್ಯ, ಸಣ್ಣ ಖಾಸಗಿ ಕಂಪನಿಗಳಿಂದ 588 ಮೆ.ವ್ಯಾ., ಕ್ಕರೆ ಮೊದಲಾದ ಕಾರ್ಖಾನೆಗಳ ಸಹ ಉತ್ಪಾದನೆ ಂದು 155 ಮೆ.ವ್ಯಾ. ಸಾಮರ್ಥ್ಯವಿದೆ. ಇವುಗಳ ಜೊತೆಗೆ ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ಜ್ಯದ ಪಾಲೆಂದು 889 ಮೆ.ವ್ಯಾ. ವಿದ್ಯುತ್ ಮರ್ಥ್ಯ ಲಭ್ಯವಿದೆ.

ಜ್

ಆದರೆ ಅದೇ ಸಮಯದಲ್ಲಿ ದ್ಯುತ್ ಅವಶ್ಯಕತೆ ದಲ್ಲಿರುವ



ಲ್ಲಾ ವಿದ್ಯುತ್ ಸಂಪರ್ಕಗಳನ್ನು 'ಸ್ವಿಚ್ ಆನ್' ಮಾಡಿದರೆ 6062 ಮೆ.ವ್ಯಾ. ವಿದ್ಯುತ್ ಅವಶ್ಯವಾಗುತ್ತದೆ. ಹೀಗಾಗಿ ಬೇಸಿಗೆಯಲ್ಲಿ ಎಲ್ಲಾ ವಿದ್ಯುತ್ ಸಂಪರ್ಕಗಳೂ ಉಪಯೋಗದಲ್ಲಿರು ಾಗ ಈಗಾಗಲೇ ಹೇಳಿದಂತೆ 11 ಕೋಟಿ ಯೂನಿಟ್ ವಿದ್ಯುತ್ ಪ್ರತಿದಿನ ಬೇಕಾಗುತ್ತದೆ. ಆದರೆ ಅಷ್ಟು ವಿದ್ಯುತ್ತನ್ನು ಒದಗಿಸುವ ಸಾಮರ್ಥ್ಯ ಕರ್ನಾಟಕ ರಾಜ್ಯ ಪಡೆದಿಲ್ಲ. ಆದ್ದರಿಂದ ವಿದ್ಯುತ್ ಕೊರತೆಯುಂಟಾಗುತ್ತದೆ. 90 ರ ದಶಕದ ಈ ಕೊರತೆ ಹೆಚ್ಚಾಗಿದೆ. ಅದನ್ನು ಪವರ್ ಕಟ್‌ಗಳ ಮೂಲಕ ನಾವೆಲ್ಲಾ ಅನುಭವಿಸುತ್ತಿದ್ದೇವೆ.

ವಿದ್ಯುತ್ ಕೊರತೆಯ ಪರಿಣಾಮಗಳು

ವಿದ್ಯುತ್ ಕೊರತೆ ಕರ್ನಾಟಕದ ಅಭಿವೃದ್ಧಿಯನ್ನು ಹಲವು ರೀತಿ ತೀವ್ರವಾಗಿ ಕಾಡಿದೆ. ವಿದ್ಯುತ್ ಕೊರತೆಯಿಂದಾಗಿ ಕರ್ನಾಟಕದಲ್ಲಿ ಆರಂಭವಾಗದ ಕೈಗಾರಿಕೆಗಳೆಷ್ಟೋ. ಕರ್ನಾಟಕದಲ್ಲಿ ಸ್ಥಾಪಿತವಾದ ಕೈಗಾರಿಕೆಗಳಲ್ಲಿ ಎಲ್ಲವೂ ವಿದ್ಯುತ್ ಕೊರತೆಯಿಂದಾಗಿ ಪ್ರತಿವರ್ಷವೂ ಎಂಬಂತೆ ಉತ್ಪಾದನೆಯಲ್ಲಿ ಗಣನೀಯ ನಷ್ಟ ಹೊಂದಿವೆ. ಇದರಿಂದಾಗಿ ಹಲವು ಕೈಗಾರಿಕೆಗಳು ಮುಚ್ಚಿಹೋಗಿವೆ ಕೂಡ.

ವಿದ್ಯುತ್ ಕೊರತೆಯಿಂದಾಗುವ ನಷ್ಟವನ್ನು ಭರಿಸಲಾರದೆ ಕರ್ನಾಟಕದ ದೊಡ್ಡ ದೊಡ್ಡ ಕೈಗಾರಿಕೆಗಳು ತಮ್ಮದೇ ಸ್ವಂತ ವಿದ್ಯುತ್ ತಯಾರಿಕಾ ಘಟಕಗಳನ್ನು ಸ್ಥಾಪಿಸಿಕೊಂಡವು ಹಾಗೂ ಕೆಪಿಟಿಸಿಎಲ್‌ನಿಂದ ವಿದ್ಯುತ್ ಪಡೆಯುವುದನ್ನೇ ಕೈ ಬಿಟ್ಟವು ಕೂಡ. ಈ ಕೆಳಗಿನ ಪಟ್ಟಿ ವರ್ಷದಿಂದ ವರ್ಷಕ್ಕೆ ಹೈ ಟೆನ್ಷನ್ ವಿದ್ಯುತ್ ಬಳಸುವ ಕೈಗಾರಿಕೆಗಳು ಕರ್ನಾಟಕ ವಿದ್ಯುತ್ ಮಂಡಳಿಯಿಂದ ವಿದ್ಯುತ್ ಪಡೆಯುವುದನ್ನು ಕಮ್ಮಿ ಮಾಡಿದ್ದನ್ನು ತೋರಿಸುತ್ತದೆ. 94-95 ರಿಂದ 99-00 ವರೆಗಿನ ಏಳು ವರ್ಷಗಳಲ್ಲಿ ಒಟ್ಟು 91 ಕೋಟಿ ಯೂನಿಟ್‌ಗಳ ವ್ಯಾಪಾರ ಕಡಿಮೆಯಾಯಿತು.

ಹೈ ಟೆನ್ಷನ್ ವಿದ್ಯುತ್ ಬಳಸುವ ಕೈಗಾರಿಕೆಗಳು ಕೆಇಬಿಯಿಂದ ಪಡೆದ ವಿದ್ಯುತ್‌ನ ಪ್ರಮಾಣ

ವರ್ಷ	ಕೋಟಿ ಯೂನಿಟ್‌ಗಳಲ್ಲಿ
94-95	313.6
95-96	286.7
96-97	263.0
97-98	239.8
98-99	233.6
99-00	221.7

ಅದೇ ಸಮಯದಲ್ಲಿ ಕೃಷಿಯಲ್ಲಿ ಖಾಸಗಿ ಬಡ್ಡಿ ಸಾಹುಕಾರರಿಂದ ದುಬಾರಿ ಬಡ್ಡಿಯಲ್ಲಿ ಹಣ ಪಡೆದ 10-20,000 ರೂ.ಗಳನ್ನು ಬಾವಿ, ಕೊಳವೆ ಬಾವಿಗಳಿಗೆ ಹೂಡಿ ವಿದ್ಯುತ್ ಪಂಪ್‌ಸೆಟ್‌ಗಳ ಸಂಪರ್ಕಕ್ಕಾಗಿ 5-10 ವರ್ಷಗಳವರೆಗೆ ಕಾದು ದಿವಾಳಿಯೆದ್ದವರೂ ಎಷ್ಟೋ. ಇದರಿಂದಾಗಿಯೇ ಅನಧಿಕೃತ ಸಂಪರ್ಕಗಳೂ ಹೆಚ್ಚಾದವು. ವಿದ್ಯುತ್ ಮಂಡಳಿಗೆ ಮತ್ತಷ್ಟು ನಷ್ಟವಾಯಿತು. ಅದೇ ಸಮಯದಲ್ಲಿ ವಿದ್ಯುತ್ ಮಂಡಳಿಯ ಸಿಬ್ಬಂದಿಯ ಭ್ರಷ್ಟಾಚಾರವೂ ಮುಗಿಲಿಗೇರಲು ವಿದ್ಯುತ್ ಕೊರತೆ ಕಾರಣವಾಯಿತು.

ವೋಲ್ಟೇಜ್ ಏರುಪೇರಿನಿಂದ ಎಷ್ಟೋ ಪಂಪ್‌ಸೆಟ್‌ಗಳು ಮತ್ತಿತರ ವಿದ್ಯುತ್ ಸಂಪರ್ಕಗಳು ಸುಟ್ಟಿವೆಯೋ? ಲೆಕ್ಕ ಮಾಡಿದವರಿಲ್ಲ.

ವಿದ್ಯುತ್ ಕೊರತೆ ಏಕೆ?

ಇಷ್ಟೊಂದು ಪ್ರಮಾಣದಲ್ಲಿ ವಿದ್ಯುತ್ ಕೊರತೆಗೆ ಕಾರಣಗಳೇನು? ರಾಜ್ಯ ಸರ್ಕಾರ, 'ಬರಗಾಲವೇ ಕಾರಣ. ಜಲಾಶಯಗಳು ತುಂಬಲಿಲ್ಲವಾದ್ದರಿಂದ ವಿದ್ಯುತ್ ತಯಾರಿಕೆ ಕಡಿಮೆಯಾಯಿತು' ಎನ್ನುತ್ತದೆ. ಆದರೆ ಈಗ್ಗೆ ಹತ್ತು ವರ್ಷಗಳಿಂದಲೂ ವಿದ್ಯುತ್ ಬರವನ್ನು ಅನುಭವಿಸುತ್ತಿದ್ದೇವೆ. ಬರಗಾಲವಿಲ್ಲದ ವರ್ಷಗಳಲ್ಲಿ ಕೂಡ ತೀವ್ರ ವಿದ್ಯುತ್ ಕೊರತೆಯನ್ನು ಅನುಭವಿಸಿದ್ದೇವೆ. ಆದ್ದರಿಂದ ಬರಗಾಲದ ವರ್ಷಗಳಲ್ಲಿ ಸ್ವಲ್ಪ ಹೆಚ್ಚು ಕೊರತೆಯನ್ನು ಅನುಭವಿಸಿದ್ದೇವೆ. ಅಲ್ಲದೇ ಬರಗಾಲವೆಂಬುದೇನೂ ಪೂರ್ಣವಾಗಿ ಅನಿರೀಕ್ಷಿತವಲ್ಲ. 5 ವರ್ಷಗಳಲ್ಲಿ ಒಂದೆರೆಡು ವರ್ಷಗಳು ಬರಗಾಲದ ಬವಣೆಯನ್ನು ಅನುಭವಿಸಲೇಬೇಕಾಗುತ್ತದೆ ಎಂಬುದು ಸರ್ಕಾರದ ಬಳಿ ಲಭ್ಯವಿರುವ ಮಳೆ ಮಾಪನದ ಅಂಕಿ ಅಂಶಗಳು ಶ್ರುತಪಡಿಸುತ್ತವೆ. ಅಂತಹ ಸಂದರ್ಭದಲ್ಲಿ ಬರಗಾಲದ ಸಂದರ್ಭಕ್ಕೆ ಆಹಾರ ಧಾನ್ಯಗಳ ಕೊರತೆಯಾಗದಂತೆ ಕಾದಿಡುವಂತೆ ಉಳಿದ ಅನೇಕ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಪೂರಕವಾದ ವಿದ್ಯುತ್ ತಯಾರಿಕೆ ಯೋಜನೆಗಳನ್ನು ಸಿದ್ಧ ಮಾಡಿಕೊಳ್ಳಬೇಕಷ್ಟೆ.

ವಿಫುಲ ಪ್ರಾಕೃತಿಕ ಸಂಪತ್ತು - ವಿದ್ಯುತ್ ತಯಾರಿಕೆಯ ಸಂಪನ್ಮೂಲಗಳು

ನಮ್ಮ ದೇಶದಲ್ಲಿ ನಮಗೆ ಅಗತ್ಯವಾದ ವಿದ್ಯುತ್ತನ್ನೆಲ್ಲಾ ತಯಾರು ಮಾಡುವಷ್ಟು ಪ್ರಾಕೃತಿಕ ಸಂಪತ್ತು ಹೇರಳವಾಗಿದೆ. ಮುಖ್ಯವಾಗಿ ಜಲ ವಿದ್ಯುತ್ ಹಾಗೂ ಕಲ್ಲಿದ್ದಲು. ಇವುಗಳ ಜೊತೆಗೆ ಅಣು ಶಕ್ತಿ, ಸೌರಶಕ್ತಿ, ಜೈವಿಕ ಅನಿಲದ ಮೂಲಗಳು, ವಾಯುಶಕ್ತಿ ಮೊದಲಾದ ಮೂಲಗಳನ್ನೂ ಸೇರಿಸಿಕೊಳ್ಳಬಹುದು. ಆದರೆ ಅಭಿವೃದ್ಧಿಗೆ ಅಗತ್ಯವಾದ ಪ್ರಮಾಣದಲ್ಲಿ ಕಡಿಮೆ ವೆಚ್ಚದಲ್ಲಿ ತಯಾರಿಸಬಹುದಾದ ಜಲ ವಿದ್ಯುತ್ ಮತ್ತು ಶಾಖೋತ್ಪನ್ನ ವಿದ್ಯುತ್‌ಗಳನ್ನೇ ತೆಗೆದುಕೊಳ್ಳೋಣ. ನಮ್ಮ ದೇಶದಲ್ಲಿ 90,000 ಮೆ.ವ್ಯಾ.ಗಳಷ್ಟು ಜಲ ವಿದ್ಯುತ್ ಸಾಮರ್ಥ್ಯ ಲಭ್ಯವಿದೆ. ಅದರಲ್ಲಿ ಕೇವಲ ಶೇ 28 ರಷ್ಟು ಮಾತ್ರ ಬಳಸಿಕೊಳ್ಳಲಾಗಿದೆ. ಹಾಗೆಯೇ ದೇಶದಲ್ಲಿ ಕಲ್ಲಿದ್ದಲು (ಸ್ವಲ್ಪ ಲಿಗ್ನೈಟ್ ಕೂಡ ಸೇರಿ) 20,000 ಕೋಟಿ ಟನ್‌ನಷ್ಟು ಲಭ್ಯವಿದೆಯೆಂದು ಅಂದಾಜು ಮಾಡಲಾಗಿದೆ. ಇದು ಇನ್ನೂ ನೂರು ವರ್ಷಕ್ಕೂ ಹೆಚ್ಚು ಕಾಲ ನಮ್ಮ ದೇಶದ ವಿದ್ಯುತ್ ಅಗತ್ಯ ಪೂರೈಸುತ್ತದೆ.

ನಮ್ಮ ರಾಜ್ಯದಲ್ಲಿ ಕಲ್ಲಿದ್ದಲು ಲಭ್ಯವಿಲ್ಲದಿದ್ದರೂ 7750 ಮೆ.ವ್ಯಾ. ಗಳಷ್ಟು ಜಲ ವಿದ್ಯುತ್ ಸಾಮರ್ಥ್ಯ ಸಾಧ್ಯವಿದೆ. ಇದರಲ್ಲಿ ಈಗ ಕೇವಲ 3024 ಮೆ.ವ್ಯಾ. ನಷ್ಟು ಮಾತ್ರ ಜಲ ವಿದ್ಯುತ್ ಸಾಮರ್ಥ್ಯವನ್ನು ಬಳಸಿಕೊಳ್ಳಲಾಗಿದೆ. ಜಲ ವಿದ್ಯುತ್ ಉತ್ಪಾದನೆ ಬೇರೆ ವಿದ್ಯುತ್ ಉತ್ಪಾದನೆಯಷ್ಟು ಬಂಡವಾಳವನ್ನು ಬೇಡುವಂತಹದ್ದು ಅಲ್ಲ. ಆದ್ದರಿಂದ ವಿದ್ಯುತ್ ಕೊರತೆ ಇದ್ದರೆ ಅದು ಕೇವಲ ನಮ್ಮ ಸರ್ಕಾರಗಳ ಕೊರತೆಯಿಂದಲೇ ಹೊರತು ದೇಶದ ಪ್ರಾಕೃತಿಕ ಸಂಪನ್ಮೂಲಗಳ ಕೊರತೆಯಿಂದಲ್ಲ.

ಹೆಚ್ಚುವರಿಯಾದ ವಿದ್ಯುತ್ ಉಪಯೋಗದ ಪ್ರಯತ್ನಗಳು

ಕರ್ನಾಟಕದಲ್ಲಿ 70 ರ ದಶಕದಲ್ಲಿ ವಿದ್ಯುತ್ ಹೆಚ್ಚಳವಿತ್ತು. ಆಗ ಭಾರತದ ಎಲ್ಲಾ ಬಂಡವಾಳಶಾಹಿಗಳಿಗೂ ಕರ್ನಾಟಕ ಸರ್ಕಾರ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ವಿದ್ಯುತ್ತನ್ನು ಬಳಸಿಕೊಳ್ಳಿ ಎಂದು ಆಹ್ವಾನಿಸಿತ್ತು. ವಿದ್ಯುತ್ ಅತಿಯಾಗಿ ಬೇಕಾದ ಲೋಹಗಳ ಕಾರ್ಖಾನೆಗಳನ್ನು ಕೂಡಾ ಆಹ್ವಾನಿಸಿತು. ಹೀಗೆ ಬೆಳಗಾಂ ಇಂಡಾಲ್, ಅನೇಕ ಕಿರು ಉಕ್ಕು ಕೈಗಾರಿಕೆಗಳು, ಹರಿಹರದ ಪಾಲಿಫೈಬರ್ಸ್ ಮುಂತಾದವು ಕರ್ನಾಟಕಕ್ಕೆ ಬಂದವು. ಹಾಗೆಯೇ ಆಗ ಕೇವಲ ಶೇ. 15 ರಷ್ಟು ಮಾತ್ರ ವಿದ್ಯುತ್ತನ್ನು ಬಳಸುತ್ತಿದ್ದ ಕೃಷಿಯಲ್ಲಿ ವಿದ್ಯುತ್ ಉಪಯೋಗಿಸಲು ಕೂಡ ಉತ್ತೇಜನ ನೀಡಲಾಯಿತು. ಅದಕ್ಕಾಗಿಯೇ ಅಲ್ಲಿಯವರೆಗೂ ಇದ್ದ ಮೀಟರುಗಳನ್ನು 1980 ರಲ್ಲಿ ಮರಳಿ ಪಡೆದು ಎಚ್.ಪಿ.ಆಧಾರದಲ್ಲಿ ವಿದ್ಯುತ್ ದರ ನಿಗದಿ ಮಾಡಲಾಯಿತು. ನೀರಾವರಿ ಬಾವಿಗಳಿಗಾಗಿ ಸಾಲ ಹಾಗೂ ಪಂಪ್‌ಸೆಟ್‌ಗಾಗಿ ವಿದ್ಯುತ್ ಕೋರಿದ ಕೂಡಲೇ ಸಂಪರ್ಕಗಳನ್ನು ನೀಡಲು ಆದೇಶ ನೀಡಲಾಯಿತು. ಇವುಗಳ ಜೊತೆಗೆ ಸರ್ವ ವಿದ್ಯುತ್ ಗೃಹಗಳಿಗೆ ಉತ್ತೇಜನ ನೀಡುವ ಮೂಲಕ ಗೃಹ ವಿದ್ಯುತ್ ಬಳಕೆ ಹೆಚ್ಚಿಸಲಾಯಿತು. ಅದೇ ಸಮಯದಲ್ಲಿ ವಿದ್ಯುತ್ ಸಂಪರ್ಕ ಪಡೆಯುವ ವೆಚ್ಚ ಹಾಗೂ ವಿದ್ಯುತ್ ಬಿಲ್ ಭರಿಸಲಾರದವರಿಗಾಗಿ 1980 ರಲ್ಲಿಯೇ ಭಾಗ್ಯಜ್ಯೋತಿ ಸಂಪರ್ಕ ಯೋಜನೆಯ ಮೂಲಕ ಕೆಳ ವರ್ಗಗಳಿಗೆ ವಿದ್ಯುತ್ ಬಳಕೆ ವಿಸ್ತರಿಸಲಾಯಿತು. ಹೀಗೆ ವಿದ್ಯುತ್ ಹೆಚ್ಚಳವನ್ನು ಉಪಯೋಗಿಸಿಕೊಳ್ಳಲು ಮಾಡಿದ ಪ್ರಯತ್ನಗಳು ಫಲ ನೀಡಿದವು. ವಿದ್ಯುತ್ ಉಪಯೋಗ ಹೆಚ್ಚಿತು. ಆದರೆ ಅದೇ ಪ್ರಮಾಣದಲ್ಲಿ ವಿದ್ಯುತ್ ತಯಾರಿಕೆ ಹೆಚ್ಚಿಸಲಿಲ್ಲ ಎಂಬುದೇ ಕೊರತೆಗೆ ಮುಖ್ಯ ಕಾರಣವಾಗಿದೆ. ಈಗ ವರ್ಷವೊಂದಕ್ಕೆ 6 ಲಕ್ಷ ಹೊಸ ಬಳಕೆದಾರರು ವಿದ್ಯುತ್ ಸಂಪರ್ಕಗಳನ್ನು ಪಡೆಯುತ್ತಿದ್ದಾರೆ. 90 ರ ದಶಕದಲ್ಲಿ ಪ್ರತಿವರ್ಷ 250-300 ಮೆ.ವ್ಯಾ. ಗಳ ವಿದ್ಯುತ್ ಸಂಪರ್ಕಗಳು ಹೆಚ್ಚಾಗುತ್ತಿದ್ದವು. 2000 ದ ನಂತರ ಪ್ರತಿವರ್ಷ 400 ರಿಂದ 600 ಮೆ.ವ್ಯಾಗಳಷ್ಟು ವಿದ್ಯುತ್ ಸಂಪರ್ಕಗಳು ಹೆಚ್ಚಾಗುತ್ತಿವೆ.

ವಿವಿಧ ವಿದ್ಯುತ್ ಸಂಪರ್ಕಗಳು	2002-2003 (ಲಕ್ಷಗಳಲ್ಲಿ)	ವಿದ್ಯುತ್ ಬಳಕೆ (ಕೋಟಿ ಯೂನಿಟ್‌ಗಳಲ್ಲಿ)
ಭಾಗ್ಯಜ್ಯೋತಿ	20	66
ಗೃಹಬಳಕೆ ವಿದ್ಯುದ್ದೀಪ	55.01	190.7
ಸರ್ವ ವಿದ್ಯುತ್‌ಗೃಹಗಳು	14.96	220.7
ವಾಣಿಜ್ಯ ದೀಪಗಳು	9.13	79.1
ಕುಡಿಯುವ ನೀರು	0.55	10.63
ಲೋ ಟೆನ್ಷನ್ ವಿದ್ಯುತ್ ಬಳಸುವ ಕೈಗಾರಿಕೆ ಮತ್ತಿತರೆ	3.51	157.0
ಪಂಪ್‌ಸೆಟ್‌ಗಳು	13.26	813.4
ಹೈ ಟೆನ್ಷನ್ ವಿದ್ಯುತ್ ಬಳಸುವ ಕೈಗಾರಿಕೆಗಳು	0.046	763.4

ವಿದ್ಯುತ್ ತಯಾರಿಕೆಯಲ್ಲಿ ಹಿನ್ನಡೆ

ವಿದ್ಯುತ್ ಬಳಕೆಯನ್ನು ಪ್ರೋತ್ಸಾಹಿಸಿದ್ದು ನಿಜಕ್ಕೂ ರಾಜ್ಯದ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಗೆ ಅತ್ಯವಶ್ಯವಾದುದಾಗಿತ್ತು. ಆದರೆ ವಿದ್ಯುತ್ ಬಳಕೆ ಏರಿದಂತೆಲ್ಲಾ ವಿದ್ಯುತ್ ತಯಾರಿಕೆಯೂ ಹೆಚ್ಚಳವಾಗಬೇಕಾಗಿತ್ತು. ಆದರೆ ಆ ಪ್ರಮಾಣದಲ್ಲಿ ವಿದ್ಯುತ್ ತಯಾರಿಕೆ ಏರಲಿಲ್ಲ. ಅದರಲ್ಲಿಯೂ 91 ರ ನಂತರ ಇದು ಬಹಳ ನಿಚ್ಚಳವಾಗಿ ಕಂಡಿತು. ಈ ಕೆಳಗಿನ ಅಂಕಿ ಅಂಶಗಳು ತಾವೇ ಈ ಸಂಗತಿಯನ್ನು ಸ್ಪಷ್ಟ ಪಡಿಸುತ್ತವೆ.

1992-93 ರಲ್ಲಿ 339.80 ಕೋಟಿ ರೂ.

ಮುಂದಿನ ಪುಟಕ್ಕೆ

......ವಿದ್ಯುತ್‌ರಂಗ ಎತ್ತ ಸಾಗಿದೆ?

ಪುಟ 7 ರಿಂದ

ಹಣವನ್ನು ವಿದ್ಯುತ್ ತಯಾರಿಕೆಗಾಗಿ ಸರ್ಕಾರ ಹೂಡಿತು. ಆದರೆ ಮುಂದಿನ ವರ್ಷಗಳಲ್ಲಿ ವರ್ಷದಿಂದ ವರ್ಷಕ್ಕೆ ವಿದ್ಯುತ್ ಬೇಡಿಕೆ ರಭಸವಾಗಿ ಏರುತ್ತಿದ್ದ ಸಂದರ್ಭದಲ್ಲಿ ಹಣ ಹೂಡಿಕೆ ಹೆಚ್ಚಾಗುತ್ತಾ ಹೋಗುವುದಕ್ಕೆ ಬದಲಾಗಿ ಕಡಿಮೆಯಾಯಿತು. 95-96 ರಲ್ಲಿ ಕೇವಲ 26.69 ಕೋಟಿ ರೂ. ಇದರಿಂದಾಗಿ ಪ್ರತಿವರ್ಷ ವಿದ್ಯುತ್ ತಯಾರಿಕಾ ಸಾಮರ್ಥ್ಯಕ್ಕೆ ಹೊಸ ಸೇರ್ಪಡೆ ಕೇವಲ 17 ಮೆ.ವ್ಯಾ. 40 ಮೆ.ವ್ಯಾ. 88 ಮೆ.ವ್ಯಾ. ನಷ್ಟು. ಪ್ರತಿವರ್ಷ 250-300 ಮೆ.ವ್ಯಾ.ನಷ್ಟು ಹೊಸ ವಿದ್ಯುತ್ ಸಂಪರ್ಕಗಳು ಹೆಚ್ಚುತ್ತಿರುವಾಗ ಅದನ್ನು ಸರಿತೂಗಿಸುವ ವಿದ್ಯುತ್ ತಯಾರಿಕೆ ಇಲ್ಲದ್ದರಿಂದ ವಿದ್ಯುತ್ ಕೊರತೆ ಏರುತ್ತಾ ಹೋಯಿತು. ಇದು ರಾಜ್ಯದ ಆರ್ಥಿಕ ಬೆಳವಣಿಗೆಗೆ ಘೋರವಾದ ಧಕ್ಕೆ ತರಲಾರಂಭಿಸಿದಾಗ ಮಾತ್ರ ಎಚ್ಚೆತ್ತುಕೊಂಡು 98-99 ಲ್ಲಿ 549 ಕೋಟಿ 99-2000 ರಲ್ಲಿ 675 ಕೋಟಿ ಹಣ ಹೂಡಿದ ಪರಿಣಾಮವಾಗಿ ವಿದ್ಯುತ್ ತಯಾರಿಕಾ ಸಾಮರ್ಥ್ಯದಲ್ಲಿ ಗಣನೀಯ ಹೆಚ್ಚಳವಾಯಿತು. ಕೊರತೆ ಸ್ವಲ್ಪ ಕಡಿಮೆಯಾಯಿತು.

ವರ್ಷ	ವಿದ್ಯುತ್‌ತಯಾರಿಕೆಯಲ್ಲಿ ಹೂಡಿದ ಹಣ ಕೋಟಿ ರೂಗಳಲ್ಲಿ	ಆ ವರ್ಷ ಹೆಚ್ಚಾದ ವಿದ್ಯುತ್ ತಯಾರಿಕೆ ಸಾಮರ್ಥ್ಯ ಮೆಗಾವ್ಯಾಟ್‌ಗಳಲ್ಲಿ
91-92	-	29
92-93	339.80	95
93-94	239.92	174
94-95	272.98	210
95-96	26.69	17
96-97	186.83	40
97-98	198.12	88
98-99	549.26	415
99-2000	675.21	371
2000-01	519.94	102

ಇದೇ ಪರಿಸ್ಥಿತಿಯನ್ನು ನಾವು ದೇಶದ ಮಟ್ಟದಲ್ಲಿಯೂ ನೋಡಬಹುದು.

ಪಂಚವಾರ್ಷಿಕ ಯೋಜನೆ
ವಿದ್ಯುತ್ ತಯಾರಿಕಾ ಸಾಮರ್ಥ್ಯದಲ್ಲಿಹೆಚ್ಚಳ
ಏಳನೆ ಯೋಜನೆ (1985-90) 21,000 ಮೆ.ವ್ಯಾ.
ಎಂಟನೇ ಯೋಜನೆ (1992-97) 16,000 ಮೆ.ವ್ಯಾ. (ಗುರಿ 30,000 ಮೆ.ವ್ಯಾ)
ಒಂಬತ್ತನೇ ಯೋಜನೆ (1997-2002) 19,000 ಮೆ.ವ್ಯಾ(ಗುರಿ 40,000 ಮೆ.ವ್ಯಾ)

ಹನ್ನೆರಡು ವರ್ಷದ ಹಿಂದೆ ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಿಸಿದ 21,000 ಮೆ.ವ್ಯಾ. ವಿದ್ಯುತ್ ಸಾಮರ್ಥ್ಯವನ್ನು ಅಪಾರವಾಗಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಗೆ ಅನುಗುಣವಾಗಿ ಹೆಚ್ಚಳ ವಾಗುವುದಕ್ಕೆ ಬದಲಾಗಿ 5000 ಮೆ.ವ್ಯಾ. ಕಡಿಮೆಯಾಯಿತು. ಹನ್ನೆರಡು ವರ್ಷಗಳ ನಂತರ ಒಂಭತ್ತನೇ ಯೋಜನೆಯಲ್ಲಿ 1985-90 ರ ಅವಧಿಗೆ ಹೋಲಿಸಿದರೆ, ಬೇಡಿಕೆ ಎರಡು ಪಟ್ಟು ಹೆಚ್ಚಿರುವಾಗಲೂ ಕೂಡ ಉತ್ಪಾದನೆಯಲ್ಲಿ ಏರಿಕೆ ಇಲ್ಲ ಬದಲಾಗಿ 2000 ಮೆ.ವ್ಯಾ. ಕಡಿಮೆ.

ಹೀಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ವಿದ್ಯುತ್ ತಯಾರಿಕೆಗಾಗಿ ತಮ್ಮ ಬಜೆಟ್‌ಗಳಿಂದ ಹೂಡದ ವಿದ್ಯುತ್ ಕೊರತೆ ತೀವ್ರವಾಗಿ ಹೆಚ್ಚುವಂತೆ ಮಾಡಿ ದೇಶದ ಅಭಿವೃದ್ಧಿಗೆ ತುಂಬಲಾರದ ಹಾನಿಯೆಸಗಿದ್ದಾರೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ನಡುವೆಯ ಹೆಚ್ಚು ಹಾನಿಯೆಸಗಿರುವುದು ಕೇಂದ್ರ ಸರ್ಕಾರ ಹಾಗೂ ಖಾಸಗೀ ರಂಗವೇ.

ಒಂಭತ್ತನೆಯ ಯೋಜನೆಯಲ್ಲಿ ವಿದ್ಯುತ್ ತಯಾರಿಕೆ

	ಗುರಿಸಾಧನೆ
ರಾಜ್ಯ ಸರ್ಕಾರ	ಶೇ 87
ಕೇಂದ್ರ ಸರ್ಕಾರ	ಶೇ 38
ಖಾಸಗಿ ವಲಯ	ಶೇ 30

ಹಣದ ಸಂಪನ್ಮೂಲ ಅತ್ಯಂತ ಕಡಿಮೆ ಇರುವ ರಾಜ್ಯ ಸರ್ಕಾರಗಳು ಕಷ್ಟಪಟ್ಟು ತಿಣುಕಿ ವಿದ್ಯುತ್ ತಯಾರಿಕೆಯನ್ನು ಹೆಚ್ಚಿಸಿದರೆ ಅಪಾರ ಹಣ ಸಂಪನ್ಮೂಲದ ಆಸರೆ ಇರುವ ಕೇಂದ್ರ ಸರ್ಕಾರ ಕೇವಲ ಶೇ 38 ರಷ್ಟು ಗುರಿ ಸಾಧಿಸಿರುವುದು ನಾಚಿಕೆಗೇಡು. ಕೇಂದ್ರದಲ್ಲಿರುವ ಬಿಜೆಪಿ ಕೂಟ ಸರ್ಕಾರದ ಹೊಣೆಗೇಡಿತನವನ್ನು ಇದು ಸ್ಪಷ್ಟವಾಗಿ ಪ್ರದರ್ಶಿಸುತ್ತದೆ. ಇನ್ನು ಖಾಸಗಿರಂಗವಂತೂ ತನಗೆ ಗುರಿಯಾಗಿರಿಸಿದ್ದ ಅಲ್ಪಪ್ರಮಾಣವನ್ನು ತುಂಬಲು ಕೂಡ ಪ್ರಯತ್ನಿಸಲಿಲ್ಲ. ಇದು ಖಾಸಗಿರಂಗದ ಬಗ್ಗೆ ಇರುವ ಭ್ರಮೆಯನ್ನು ತೊಡೆಯಬೇಕು. ಆದರೆ..?

ಖಾಸಗೀಕರಣದ ಭ್ರಮೆ

ಹೀಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಕೂಡ 1992 ರಿಂದ ವಿದ್ಯುತ್ ಉತ್ಪಾದನೆಯಲ್ಲಿ ಹಣ ಹೂಡಿಕೆ ಕಡಿಮೆ ಗೊಳಿಸಲು ಕಾರಣ. 1991 ರಲ್ಲಿ ದೇಶದಲ್ಲಿ ಹರಿಬಿಟ್ಟ ಜಾಗತೀಕರಣ, ಖಾಸಗೀಕರಣದ ನೀತಿಗಳು. ಈ ನೀತಿಗಳ ಫಲವಾಗಿ ವಿದೇಶಿ ಬಂಡವಾಳವನ್ನು ದೇಶಕ್ಕೆ ನುಗ್ಗುವುದಕ್ಕೆ ಇದ್ದ ರಕ್ಷಣಾ ಕೋಟೆಗಳನ್ನು ಒಡೆದು ನರಸಿಂಹರಾವ್ -ಮನಮೋಹನ್ ಸಿಂಗ್ ಸರ್ಕಾರ ಅವರನ್ನು ಒಳಗೆ ಬಿಟ್ಟುಕೊಳ್ಳಲಾರಂಭಿಸಿದ ಕೂಡಲೇ ಒಳಗೆ ನುಗ್ಗಿದ್ದು ವಿದ್ಯುತ್ ಕಂಪನಿಗಳು. ಈ ಕಂಪನಿಗಳ ಹಾಕಿದ ಶರತ್ತಿಗೆ ಒಪ್ಪಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳೆರಡೂ ಈ ಕಂಪನಿಗಳ ಮೂಲಕ ವಿದ್ಯುತ್ ಉತ್ಪಾದನೆ ಮಾಡಲು ಒಪ್ಪಂದಗಳಿಗೆ ಸಹಿ ಹಾಕತೊಡಗಿದವು.

ಕರ್ನಾಟಕ ರಾಜ್ಯ ಸರ್ಕಾರದ ಅಂದಿನ ಮುಖ್ಯಮಂತ್ರಿ ಬಂಗಾರಪ್ಪನವರು ಕೊಜೆಂಟ್ರಿಕ್ಸ್ (ಅಮೆರಿಕಾ), ಟ್ಯಾಪ್‌ಕೋ(ಅಮೆರಿಕಾ) ಯುನೋಕಲ್(ಅಮೆರಿಕಾ), ಎ.ಎ.ಟೆ (ಆಸ್ಟ್ರೀಯಾ), ಸ್ಮಿತ್ ಕೊಜನರೇಷನ್, ಯುರೋ ಇಂಡಿಯಾ ಇತ್ಯಾದಿ ಕಂಪನಿಗಳ ಜೊತೆಯಲ್ಲಿ 2 ದೊಡ್ಡ ಯೋಜನೆಗಳಿಗಾಗಿ ಒಪ್ಪಂದ ಮಾಡಿಕೊಂಡರು. ಅಥವಾ ಟೆಂಡರ್ ಕರೆದರು

ಮಂಗಳೂರು ಬಳಿಯ ನಂದಿಕೂರಿನಲ್ಲಿ 100 ಮೆ.ವ್ಯಾ., ಬೆಂಗಳೂರು ಬಳಿಯ ಬಿಡದಿಯ ಬ 1200 ಮೆ.ವ್ಯಾ., ಬಳ್ಳಾರಿ ಜಿಲ್ಲೆಯ ಕುಡತಿನಿಯ 1000 ಮೆ. ವ್ಯಾ., ಆಲಮಟ್ಟಿ ಹಾಗೂ ತಮಕ ಗಳಲ್ಲಿ 1100 ಮೆ.ವ್ಯಾ.ಹೀಗೆ ಹತ್ತಾರು ಸಾವಿ ಮೆ.ವ್ಯಾ.ಗಳ ವಿದ್ಯುತ್ ಉತ್ಪಾದನೆಯಾಗು ದೆಂಬ ಭ್ರಮೆಯಲ್ಲಿ ರಾಜ್ಯ ಸರ್ಕಾರ, ಕೇಂ ಸರ್ಕಾರಗಳು ಮುಳುಗಿ ವಿದ್ಯುತ್‌ಗಾ ಬಜೆಟ್‌ನಿಂದ ಹಣ ನೀಡುವುದನ್ನೇ ಕೈಬಿಟ್ಟರು

ಪಲಾಯನ ಮಾಡಿದ ವಿದೇಶಿ ಕಂಪನಿಗಳು

ಹೀಗೆ ವಿದೇಶಿ ಕಂಪನಿಗಳ ವಿದ್ಯು ಉತ್ಪಾದನೆಗೆ ಬಾಗಿಲನ್ನು ವಿಶಾಲವಾಗಿ ತೆರೆ ರಾಜ್ಯ ಸರ್ಕಾರ ಕಾಯುತ್ತಾ ಕುಳಿತುಕೊಂಡಿತು ಆದರೆ ಈ 21 ಕಂಪನಿಗಳಲ್ಲಿ 19 ಕಂಪನಿಗ ವಿದ್ಯುತ್ ಉತ್ಪಾದನೆಯ ಆರಂಭಿಕ ಪ್ರಯತ್ನಗಳ ಮಾಡಲಿಲ್ಲ. ಬಹಳ ದೊಡ್ಡದಾಗಿ ಸುದ್ದಿ ಮಾಡಿ ಕೊಜೆಂಟ್ರಿಕ್ಸ್ ನಾಲ್ಕಾರು ವರ್ಷ ಗುಡುಗಾ ಸರ್ಕಾರದಿಂದ ನಂದಿಕೂರಿನಲ್ಲಿ ಜಾಗ ಪಡೆ ಬೋರ್ಡ್ ಹಾಕಿ ನಂತರ ಹೇಳ ಹೆಸರಿಲ್ಲದ ಪಲಾಯನ ಮಾಡಿದೆ. ಆಲಮಟ್ಟಿಯ ಜಲವಿದ್ಯುತ್ ಯೋಜನೆ ಕೈಗೊಳ್ಳಬೇಕೆಂದಿ ಟ್ಯಾಪ್‌ಕೊ ಕಂಪನಿಗೆ ಕರ್ನಾಟಕ ಸರ್ಕಾರ "ನೀವು ಉತ್ಪಾದಿಸುವ ವಿದ್ಯುತ್ ನಮಗೆ ಬೇಡ ಬೇಡ ದಯವಿಟ್ಟು ಜಾಗ ಖಾಲಿ ಮಾಡಿ" ಎಂದ ಕೈ ಮುಗಿದು ಕಳಿಸಬೇಕಾಯಿತು. ಮುಂದೆ ವಿವರಗಳನ್ನು ನೀಡಲಾಗಿದೆ.

'ಅಂತು ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿ ಎಂಬಂತೆ ವಿದೇಶಿ ಕಂಪನಿಗಳು ಹರಿಸುತ್ತಾರೆಂ ವಿದ್ಯುತ್ ಪ್ರವಾಹ ಆರಂಭಕ್ಕೆ ಮೊದಲ ಬತ್ತಿಹೋಯಿತು. ಕೇಂದ್ರ ಹಾಗೂ ರಾ ಸರ್ಕಾರಗಳೂ ಕೂಡ ತಾವು ಅಲ್ಲಿಯವರ ನಿರ್ವಹಿಸುತ್ತಿದ್ದ ವಿದ್ಯುತ್ ಉತ್ಪಾದನೆಯ ಹೊಣೆಯನ್ನು ಕೈಬಿಟ್ಟರು. ರಾಜ್ಯದಲ್ಲಿ ವಿದ್ಯು ಪ್ರವಾಹಕ್ಕೆ ಬದಲಾಗಿ ವಿದ್ಯುತ್ ಕ್ಷಾಮ ಆವರಿಸಿತು. ಚೆನ್ನಾಗಿ ಮಳೆ ಬಂದ ಜಲಾಶಯಗಳು ತುಂಬಿ ಹರಿದರೂ ಕ್ಷಾಮ ಜಲಾಶಯಗಳು ತುಂಬಲಿಲ್ಲ ಎಂದು ಮತ್ತ ಕ್ಷಾಮ ಎಂಬಂತೆ ಆಗಿದೆ ಕರ್ನಾಟಕದ ಪರಿಸ್ಥಿ

ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗ ವಿದ್ಯುತ್ತಿನಲ್ಲಿ ಸರ್ಕಾರಿ ವಲಯದ ಬೆಳವಣಿ ಯನ್ನು ಕೈಬಿಟ್ಟು ಖಾಸಗೀಕರಣ ನೀತಿಯ ಅವಲಂಬಿಸಿದುದೆ ರಾಜ್ಯದಲ್ಲಿ ವಿದ್ಯುತ್ ಕ್ಷಾಮ ಮುಖ್ಯಕಾರಣವಾಗಿದೆ ಎಂಬುದನ್ನು ಕರ್ನಾಟಕ ಜನತೆ ಮನಗಾಣಬೇಕು ಹಾಗೂ ವಿದ್ಯು ಖಾಸಗೀಕರಣ ನೀತಿಯನ್ನು ಕೈಬಿಟ್ಟು ಸಾರ್ವಜ ವಲಯಕ್ಕೆ ಹಣ ಹೂಡಿ ವಿದ್ಯುತ್ ಉತ್ಪಾದನ ಶೀಘ್ರ ಹೆಚ್ಚಳಕ್ಕೆ ಶ್ರಮಿಸಬೇಕು

ವಿದ್ಯುತ್ ಹೋರಾಟ - ಅಪೂರ್ವ ಸ್ಪಂದನ

ವಿದ್ಯುತ್ ದರ ಏರಿಕೆ ಕಾವು ದಿನೇ ದಿನೇ ಜನಸಾಮಾನ್ಯರನ್ನು ದಂಗು ಬಡಿಸುತ್ತಿದೆ. ವಿದ್ಯುತ್ ಖಾಸಗೀಕರಣ ವಿರೋಧಿಸಿ ಮಾರ್ಚ್-3 ರ ಹೋರಾಟದ ಸಿದ್ದತೆಗಾಗಿ ಶ್ರೀರಾಮಪುರದಲ್ಲಿ ಸ್ಥಳೀಯ ನಾಗರೀಕರನ್ನು ಸಂಪರ್ಕಿಸಲು ತೀವ್ರ ಪ್ರಯತ್ನ ನಡೆಸುತ್ತಿದೆ, ಡಿ.ವೈ.ಎಫ್.ಐ, ಜೆ.ಎಮ್.ಎಸ್, ಸಿ.ಐ.ಟಿ.ಯು ಸಾಮೂಹಿಕ ಸಂಘಟನೆಗಳ ಮುಖಂಡರುಗಳು ಫೆಬ್ರವರಿ-10 ರಂದು ಸಭೆ ನಡೆಸಿ ಸುಮಾರು 20 ಕಡೆಗಳಲ್ಲಿ ಹೋರಾಟ ಸಮಿತಿಗಳನ್ನು ರಚಿಸಲು ತೀರ್ಮಾನಿಸಿ 3-4 ಜನ ಸಣ್ಣ ಗುಂಪುಗಳಿಗೆ ಪ್ರದೇಶವಾರು ಜವಾಬ್ದಾರಿ ನೀಡಿತು. ಈ ತಂಡಗಳು ಕೆಲಸ ಸುರು ಮಾಡಿದ್ದೇ ತಡ! ವಿದ್ಯುತ್ ಸಮಸ್ಯೆಯಿಂದ ಕುದಿಯುತ್ತಿರುವ ಜನ ಹೋರಾಟಕ್ಕೆ ಉತ್ಸಾಹ ನೀಡಿದ್ದಾರೆ. ಆರ್.ಜಿ.ಐ ಕಾಲೋನಿಯೊಂದರಲ್ಲಿ 300 ಮನೆಗಳಿಗೆ ಸುತ್ತೋಲೆ ನೀಡಿ ಸಭೆ ಕರೆಯಲಾಗಿತ್ತು. ಸುಮಾರು 70 ಜನ ಭಾಗವಹಿಸಿದ್ದರು. ಚರ್ಚೆಯಲ್ಲಿ ಹಲವಾರು ಸಲಹೆಗಳು ಬಂಧವು. ಬೆಸ್ಕಾಂ ಅಧಿಕಾರಿಗಳನ್ನು ಕಾಲೋನಿಗೆ ಬರದಂತೆ ತಡೆಯಬೇಕು. ಬಿಲ್ ಕಟ್ಟಬಾರದು. ಬಿಲ್‌ಗಳನ್ನು ಸುಟ್ಟು ಪ್ರತಿಭಟನೆ ನಡೆಸೋಣ ಎಂದು ಆಕ್ರೋಶದ ಮಾತುಗಳು ಕೇಳಿದವು. ಹೋರಾಟ ಸಮಿತಿಯ ರಚನೆಯಾಯಿತು. 16 ರಂದು ಬಹಿರಂಗ ಸಭೆ ನಡೆಸಿ ಪ್ರದೇಶದಲ್ಲಿ ಸಮಾವೇಶ ಯಶಸ್ವಿಗೊಳಿಸಲು ನಿರ್ಧರಿಸಿದೆ. ಈ ಬಹಿರಂಗ ಸಭೆ ಯಶಸ್ವಿಗೆ ನಾಗರೀಕರ ಸಿದ್ಧತೆಗಳು ನಡೆದಿವೆ.

ಶ್ರೀರಾಮಪುರದಲ್ಲಿ ಓಕಳಿಪುರ ಹೆಸರುವಾಸಿ ಕೊಳಚೆಪ್ರದೇಶ, ದಲಿತರ ಹೆಚ್ಚು ಅದರಲ್ಲೂ ತಮಿಳು ಮಾತನಾಡುವ ಜನ ಭಾಗ್ಯಜ್ಯೋತಿ-ಕುಟೀರ ಜ್ಯೋತಿ ವಿದ್ಯುತ್ ಸಮಸ್ಯೆಗಳನ್ನು ತಿಳಿಸಿದ್ದೆ ತಡ ಹೆಂಗಸರು ಸರ್ಕಾರದ ವಿರೋದ ಬೈಗುಳಗಳ ಸುರಿಮಳೆ ಗೈದರು. ಹೋರಾಟ ನಡೆಸೋಣ ವೆಂದು ಫೆಬ್ರವರಿ-9 ರಂದು ಸಭೆ ನಡೆಸಿ ನಿರ್ಧರಿಸಿದ್ದಾರೆ. ಹೆಂಗಸರು ಹೆಚ್ಚಿನ ಸಂಖ್ಯೆಯಲ್ಲಿ ಹೋರಾಟ ಸಮಿತಿಗೆ ಆಯ್ಕೆಯಾಗಿ ಒಳ್ಳೆಯ ಸಭೆ ನಡೆದಿದೆ. ಫೆಬ್ರವರಿ-16 ರಂದು ಸಂಜೆ ಬಹಿರಂಗ ಸಭೆ ನಡೆಯುತ್ತಿದೆ. ಸಭೆ ಸ್ಥಳೀಯ ಜನರ ಹಣಕಾಸಿನ ನೆರವನ್ನು ನೀಡಿದ್ದಾರೆ.

ಪವರ್‌ಲೂಂ ಹೆಚ್ಚಾಗಿರುವ ಲಕ್ಷ್ಮೀ ನಾರಾಯಣಪುರದಲ್ಲಿ ಪ್ರಮುಖ ಮಾಲೀಕರನ್ನು ಸಂಪರ್ಕಿಸಿದಾಗ ತಕ್ಷಣವೇ ಸಭೆ ನಡೆಸಲು ತೀರ್ಮಾನಿಸಿ ಅವರೇ ಆಂಧ್ರ ದೇವಾಂಗ ಛತ್ರವನ್ನು ಪಡೆದು ಸಭೆಗೆ ಎಲ್ಲರನ್ನು ಸೇರಿಸೋಣ ಹೋರಾಟ ಮಾಡಲೇಬೇಕೆಂದು ತಿಳಿಸಿದ್ದಾರೆ. ಫೆಬ್ರವರಿ 17 ರಂದು 4 ಗಂಟೆಗೆ ತಯಾರಿ ಸಭೆ ನಡೆಯುತ್ತಿದೆ ಹೆಚ್ಚು ಜನ ಭಾಗವಹಿಸಲಿದ್ದಾರೆ.

ರಾಮಚಂದ್ರಪುರ ಸಾಯಿಬಾಬಾ ನಗರದಲ್ಲಿ ಚಿಂದಿಬಟ್ಟೆ ವ್ಯಾಪಾರಿಗಳು ಉತ್ತಮ ಪ್ರತಿಕ್ರಿಯೆ ತೋರಿಸಿದ್ದಾರೆ. ಸ್ಥಳೀಯ ವ್ಯಾಪಾರಿಗಳೊಂದಿಗೆ ಮಾತನಾಡಿದಾಗ ನಾವೆಲ್ಲ ಬರುತ್ತೇವೆ. ಹೋರಾಟ ಆಗಲಿ ಎಂದರು. ಸಾಯಿಬಾಬಾ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷರನ್ನು ಸಂಪರ್ಕಿಸಿದಾಗ ಜಾಗವನ್ನು ಉಚಿತವಾಗಿ ನೀಡಿ ಸಹಕರಿಸಿದ್ದಾರೆ. ಫೆ-16 ರಂದು ಸಂಜೆ ಸಿದ್ಧತಾ ಸಭೆ ನಡೆಯುತ್ತಿದೆ. ಶ್ರೀರಾಮಪುರ - 5ನೇ ಅಡ್ಡರಸ್ತೆ, ಮಾ. ರಾಮಾಮೂರ್ತಿ ಕನ್ನಡ ಬಳಗ, ಲಕ್ಷ್ಮಿನಾರಾಯಣಪುರ, ಮಾರ್ಕೆಟ್, ದಯಾನಂದನಗರ, ಅಂಬೇಡ್ಕರ್ ನಗರ, ಪಾಪಣ್ಣ ಬ್ಲಾಕ್, ಜಕ್ಕರಾಯನ ಕೆರೆ, ಮಾಗಡಿ ರಸ್ತೆ (ಕೆ.ಪಿ.ಅಗ್ರಹಾರ)ಗಳಲ್ಲಿ ಸಭೆ ನಡೆಸಲು ಆಯೋಜಿಸಲಾಗಿದೆ. ಭಾಷ್ಯಂ ನಗರ, ರಾಮಚಂದ್ರಪುರ ವಾರ್ಡ್‌ಗಳಲ್ಲಿ ತೀವ್ರ ಪ್ರಯತ್ನ ಮಾಡಲು ಯೋಜನೆ ರೂಪಿಸಲಾಗಿದೆ.

ಇಷ್ಟೇ ಅಲ್ಲದೆ ರಾಜಾಜಿನಗರದ ಕುರುಬರಹಳ್ಳಿ, ಕಮಲನಗರಗಳಲ್ಲಿ, ದಸಂಸ ಮುಖಂಡರುಗಳ ಮುತುವರ್ಜಿಯಿಂದ ಸಭೆ ನಡೆಸುತ್ತಿದೆ. ಪ್ರಕಾಶನಗರದ ಮರಿಯಪ್ಪನ ಪಾಳ್ಯ, ಮಲ್ಲೇಶ್ವರದ ಕೆಲವು ಅಪಾರ್ಟ್‌ಮೆಂಟ್, ವಿಜಯನಗರದ ನಾಗರಬಾವಿ, ಪ್ರದೇಶದಲ್ಲಿ ಹೋರಾಟ ಸಮಿತಿ ರಚನೆಗೆ ಪ್ರಯತ್ನಿಸಲಾಗುತ್ತಿದೆ. ಈ ಹೋರಾಟದಲ್ಲಿ ಸಮಯ ಅಭಾವವಿದ್ದರೂ ಈ ಪ್ರದೇಶದ ಸಂಗಾತಿಗಳು ಉತ್ಸಾಹದಿಂದ ಕೆಲಸ ಮಾಡುತ್ತಿದ್ದು ಹೋರಾಟ ಅಲೆ ಚಿಮ್ಮುತ್ತಿದೆ. ಮಾರ್ಚ್ 3ರ ಬೆಸ್ಕಾಂ ಮುತ್ತಿಗೆಗೆ ಇದು ಸಿದ್ಧತೆ.

- ಜಯಲಕ್ಷ್ಮಿ

ವಿದ್ಯುತ್ ಖಾಸಗೀಕರಣದ ನೀತಿ ವಿರುದ್ಧ ಗುಲ್ಬರ್ಗಾದಲ್ಲಿ ಸಮಾವೇಶ

ಕರೆಂಟ್ ಖಾಸಗೀಕರಣ ತಡೆಗೆ ಮುನ್ನುಗ್ಗಿ

ವಿದ್ಯುತ್ ಜನತೆಯ ಬದುಕಿನ ಜೀವನಾಡಿ ನಾಡಿನ ಅಭಿವೃದ್ಧಿಯ ಮೂಲಸೆಲೆಯೂ ಹೌದು. ಕಲ್ಯಾಣ ರಾಜ್ಯದ ಪರಿಕಲ್ಪನೆಯನ್ನು ಒಪ್ಪಿಕೊಂಡ ಯಾವುದೇ ಸರಕಾರವೂ ವಿದ್ಯುತ್, ಶಿಕ್ಷಣ, ನೀರು, ಆರೋಗ್ಯ ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಲಾಭ ಹಾನಿಯ ವ್ಯವಹಾರಿಕ ಲೆಕ್ಕಾಚಾರ ಇಲ್ಲಿ ವರ್ಜ್ಯ. ಆದರೆ ಪ್ರಸ್ತುತ ಸರಕಾರ ತನ್ನ ದೃಷ್ಟಿಹೀನ, ಅತಾರ್ಕಿಕ ನಿಲುವಿನಿಂದಾಗಿ ಈ ಎಲ್ಲಾ ಸಮಾಜಕಲ್ಯಾಣ ಪರಿಕಲ್ಪನೆಯನ್ನು ಗಾಳಿಗೆ ತೂರಿ ಸಂಪೂರ್ಣ ಖಾಸಗೀಕರಣದತ್ತ ಧಾಪುಗಾಲು ಇಡುತ್ತಿದೆ. ವಿದ್ಯುತ್‌ನ ಖಾಸಗೀಕರಣ ದೇಶದ ಬಡ, ದಲಿತ, ದುರ್ಬಲರನ್ನು ಮತ್ತೆ ಶತಮಾನದಷ್ಟು ಹಿಂದಕ್ಕೆಳೆದು ಕತ್ತಲ ರಾಜ್ಯದಲ್ಲಿ ಕುರುಡರಂತೆ ಬದುಕುವುದನ್ನು ಅನಿವಾರ್ಯಗೊಳಿಸಲು ಮುಂದಾಗಿದೆ. ಆದ್ದರಿಂದ ವಿದ್ಯುತ್ ಖಾಸಗೀಕರಣ, ನೀತಿಯನ್ನು ವಿರೋಧಿಸಿ ದಿನಾಂಕ 7.2.2003 ರಂದು ಗುಲಬರ್ಗಾ ನಗರದಲ್ಲಿ ವಿಭಾಗಮಟ್ಟದ ಬೃಹತ್ ಸಮಾವೇಶವೊಂದನ್ನು ಸಂಘಟಿಸಲಾಯಿತು.

ಈ ಕಾರ್ಯಕ್ರಮವನ್ನು ಆಂಧ್ರ ಪ್ರದೇಶದ ಉಸ್ಮಾನಿಯಾ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಡಾ.ನಾಗೇಶ್ವರ ಇವರು ಉದ್ಘಾಟಿಸಿ ಮಾತನಾಡುತ್ತ "ಖಾಸಗೀಯವರಿಗೆ, ಉಳ್ಳವರಿಗೆ ಲಾಭ ಮಾಡಿಕೊಡಲಿಕ್ಕಾಗಿ, ಸುಧಾರಣೆಯ ಮುಖವಾಡ ಹೊತ್ತು ವಿದ್ಯುತ್‌ನ್ನು ಖಾಸಗೀಕರಿಸಲಾಗಿದೆ. ವಿದ್ಯುತ್‌ರಂಗವನ್ನು ಬಲಪಡಿಸಲಿಕ್ಕಾಗಿ ಖಾಸಗೀಕರಣವೆಂಬ ಯುಕ್ತತಂತ್ರ ತರುತ್ತಿರುವುದಾಗಿ ಸರಕಾರ ಹೇಳುವಲ್ಲಿ ದೊಡ್ಡ ಮೋಸವೇ ಅಡಗಿದೆ. ಈ ಮೋಸದಿಂದಾಗಿ ದೇಶದ ಬಡಜನತೆ ಮತ್ತು

ಆಂಧ್ರದಲ್ಲಿ ಹೆಣವೂ ಎದ್ದು ಪ್ರತಿಭಟಿಸಿತು

ರೈತಾಪಿ ಜನತೆ, ಸಣ್ಣ ಕೈಗಾರಿಕೆಗಳು ವಿದ್ಯುತ್ ಸೌಲಭ್ಯದಿಂದ ವಂಚಿತರಾಗಲಿದ್ದಾರೆ." ಎಂದು ಹೇಳಿದರು. ಮುಂದುವರೆದು ಅವರು "ಆಂಧ್ರ ಪ್ರದೇಶದಲ್ಲಿ ನಡೆಸುತ್ತಿರುವ ವಿದ್ಯುತ್ ಖಾಸಗೀಕರಣದ ವಿರೋಧಿ ಹೋರಾಟಕ್ಕೆ ಕಾಂಗ್ರೆಸವರು ಬೆಂಬಲಿಸಿದ್ದಾರೆ. ಅದೇ ಕಾಂಗ್ರೆಸ್ ಪಕ್ಷ ಕರ್ನಾಟಕದಲ್ಲಿ ವಿದ್ಯುತ್ ಖಾಸಗೀಕರಣಕ್ಕೆ ತರಾತುರಿಯಲ್ಲಿ ಇಳಿದಿದೆ. ಇದು ಕಾಂಗ್ರೆ ಪಕ್ಷದೊಳಗಿನ ದ್ವಂದ್ವ ನೀತಿಯನ್ನು ತೋರಿಸುತ್ತದೆ. ಕರ್ನಾಟಕದ ಜನತೆ ಸದರಿ ದ್ವಂದ್ವ ನೀತಿಯನ್ನು ಬಯಲಿಗೆಳೆಯಬೇಕೆಂದು ಕರೆಕೊಟ್ಟರು. ಆಂಧ್ರದ ವಿದ್ಯುತ್ ಹೋರಾಟದ ವೀರಗಾಥೆಯನ್ನು ಮನಮುಟ್ಟುವಂತೆ ವಿವರಿಸಿದ ಡಾ। ನಾಗೇಶ್ವರ "ಚಂದ್ರಬಾಬು ನಾಯ್ಡು ಕಾರ್ಯಕ್ರಮದಲ್ಲಿ ಜನರು ಪ್ರತಿಭಟಿಸಬಾರದೆನ್ನುವುದಕ್ಕಾಗಿ ಬಿಗಿ ಬಂದೋಬಸ್ತ್ ಮಾಡಿದ್ದರು. ಆಗ ಮುನ್ನೂರರಷ್ಟು ಜನರು ಬಾವುಟಗಳನ್ನು ಅಂಗಿಯೊಳಗಿಟ್ಟುಕೊಂಡು ಒಬ್ಬ ಸಂಗಾತಿಯನ್ನು ಚಟ್ಟದ ಮೇಲೆ ಹೆಣದಂತೆ ಮಲಗಿಸಿ, ಹೆಣ ಹೊತ್ತು ಶೋಕ ಮೆರವಣಿಗೆ ನಡೆದರು. ಪೋಲೀಸರು ನಿಜವಾಗಿಯೂ ಸ್ಮಶಾನಕ್ಕೆ ಹೋಗುತ್ತಿರಬಹುದೆಂದು ನಂಬಿ ದಾರಿ ಬಿಟ್ಟರು. ಚಂದ್ರಬಾಬು ನಾಯ್ಡು ಕಾರ್ಯಕ್ರಮದ ಸ್ಥಳದ ಹತ್ತಿರ ಬಂದಂತೆ, ಚಟ್ಟದ ಮೇಲಿನ ಸಂಗಾತಿ ಥಟ್ಟನೆ ಕೆಳಗೆ ಜಿಗಿದು ಬಾವುಟ ಎತ್ತಿ ಹಿಡಿದು "ಕರೆಂಟ್ ಖಾಸಗೀಕರಣ ಕೈಬಿಡಿ" ಘೋಷಣೆ ಕೂಗಿದರು. ಜೊತೆಗೆ ಮುನ್ನೂರು ಜನತೆ ಬಾವುಟ ಎತ್ತಿ ಹಿಡಿದು ಖಾಸಗೀಕರಣದ ವಿರುದ್ಧ ದನಿಗೂಡಿಸಿದರು. ಹೀಗೆ ನಡೆದ ಅನೇಕ ವೀರಧೀರ ಹೋರಾಟಗಳ ಕಾರಣದಿಂದ ಇನ್ನೂ ಹೆಚ್ಚಬಹುದಾದ ವಿದ್ಯುತ್‌ದರಗಳನ್ನು ತಡೆಯಲು ಸಾಧ್ಯವಾಯಿತು. ಈ ಹೋರಾಟದ ಕಾವು ವಾಷಿಂಗ್‌ಟನ್‌ಗೂ ಬಿಲ್‌ಗೇಟ್ಸ್‌ಗೂ ತಲುಪಿ ಭಾರತಕ್ಕೆ ಬಂದಾಗ ಹೋರಾಟದ ಕಾವಿನ ಬಗ್ಗೆ ವಿಚಾರಿಸಿದರು. ಜನರ ಒಗ್ಗಟ್ಟು ಇಂದು ಅನಿವಾರ್ಯ ಎಂಬುದನ್ನು ಆಂಧ್ರದ ಜನತೆ ಮನವರಿಕೆ ಮಾಡಿಕೊಟ್ಟಿರುವ ಹಿನ್ನೆಲೆಯಲ್ಲಿ ಒಟ್ಟು ಜನತೆ ಕರ್ನಾಟಕದಲ್ಲೂ ಒಂದಾಗಬೇಕಿದೆ ಚಳುವಳಿಗೆ ಮುಂದಾಗಬೇಕಿದೆ. ಎಂದು ವಿಶ್ಲೇಷಿಸಿದರು.

ಸಮಾವೇಶದಲ್ಲಿ ವಿದ್ಯುತ್ ಖಾಸಗೀಕರಣವನ್ನು ವಿರೋಧಿಸಿ ಸರ್ಕಾರದ ವ್ಯೂಹ ಚಕ್ರದ ಬಗ್ಗೆ ಪ್ರಬಂಧವನ್ನು ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ಮಂಡಿಸಿದರು. ಸಿ.ಐ.ಟಿ.ಯು. ಮುಖಂಡರಾದ ಪ್ರಸನ್ನ ಅವರು ಅತಿಥಿಗಳಾಗಿ ಮಾತನಾಡಿದರು. ಯು.ಬಸವರಾಜ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಚಿನ್ನಪ್ಪ ಆನೆಗುಂದಿ ಸ್ವಾಗತಿಸಿದರೆ, ವಿರೂಪಾಕ್ಷಪ್ಪ ತಡಕಲ್ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಗುಲ್ಬರ್ಗಾ, ಕೊಪ್ಪಳ, ರಾಯಚೂರು, ಬಳ್ಳಾರಿ, ಬೀದರ, ಜಿಲ್ಲೆಗಳಿಂದ ನೂರಾರು ಪ್ರತಿನಿಧಿಗಳು ಭಾಗವಹಿಸಿದರು. ಪ್ರತಿನಿಧಿಗಳ ಪರವಾಗಿ ಮಲ್ಲಯ್ಯ ಜಾಲಹಳ್ಳಿ, ಆರ್.ಕೆ.ದೇಸಾಯಿ, ಜಗನ್ನಾಥ, ಸಂಗ್ರಾಮ ವಕೀಲ, ವೀರಣ್ಣ ನಾವದಗಿ ಮುಂತಾದವರು ಮಾತನಾಡಿ ದಿನಾಂಕ 24.2.03 ರಂದು ನಡೆಯುವ ಗೆಸ್‌ಕಾಮ್ (gescom) ಮುಂದುಗಡೆ ನಡೆಯುವ ಹೋರಾಟಕ್ಕೆ ಸಾವಿರಾರು ಜನರನ್ನು ಅಣಿನೆರೆಸುವುದಾಗಿ ಹೇಳಿದರು.

ವರದಿ : ನೀಲಾ ಕೆ, ಮೀನಾಕ್ಷಿ

....ವಿಷಾವೇಶ ಮತ್ತು ಕೃಷ್ಣರ ನೋಟೀಸ್?

ಪುಟ 3 ರಿಂದ

ಪ್ರಚಾರದಲ್ಲಿ ತೊಡಗಿದೆ.

ಬಾಬಾ ಬುಡನ್‌ಗಿರಿಯನ್ನು ಇನ್ನೊಂದು ಅಯೋಧ್ಯೆಯನ್ನಾಗಿ ಮಾಡುವ ಬೆದರಿಕೆ ಒಡ್ಡಿದ ಮೇಲೆ, ಸಾರ್ವಜನಿಕ ಒತ್ತಡ ಹೆಚ್ಚಿ ತೊಗಾಡಿಯಾ ಕರ್ನಾಟಕಕ್ಕೆ ಪ್ರವೇಶಿಸದಂತೆ ನಿರ್ಬಂಧ ವಿಧಿಸುವ ಬಗ್ಗೆ ಸರ್ಕಾರದ ಸಚಿವರು ಮಾತನಾಡಿದ್ದರು. ಮಂಗಳೂರು-ಬೆಳಗಾವಿಗೆ ಬರುವ ಬಗ್ಗೆ ಪ್ರಕಟಣೆ ಹೊರಬಿದ್ದಾಗ ಆತನ ಪ್ರವೇಶಕ್ಕೆ ಸರ್ಕಾರವು 15 ದಿನಗಳ ನಿರ್ಬಂಧ ಹೇರಿ ಅಧಿಕಾರಿಗಳ ಮೂಲಕ ನೋಟೀಸ್ ನೀಡಿತ್ತು. ಇದು ಹೈಕೋರ್ಟ್ ಮೆಟ್ಟಿಲು ಹತ್ತಿದ ನಂತರ ಪ್ರವೇಶ ನಿರ್ಬಂಧದ ಆಜ್ಞೆ ಹಲವು ದೋಷಗಳಿಂದ ಕೂಡಿದೆಯೆಂದು ರದ್ದು ಪಡಿಸಿತಲ್ಲದೇ, ಮತ್ತೊಂದು ಆದೇಶದಲ್ಲಿ ಕೋಮು ಉದ್ರೇಕದ, ಅನ್ಯ ಧರ್ಮಿಯರನ್ನು ಅವಹೇಳನ ಮಾಡುವಂತಹ ಪ್ರಚೋದನಕಾರಿ ಮಾತುಗಳಿಗೆ ಕಡಿವಾಣ ಹಾಕಿ, ಹಾಗೇನಾದರೂ ಆದಲ್ಲಿ ಕ್ರಿಮಿನಲ್ ಪ್ರಕ್ರಿಯೆ ಆರಂಭಿಸುವ ಎಚ್ಚರಿಕೆ ನೀಡಿತು.

ನೋಟೀಸ್ ಪ್ರಹಸನವಲ್ಲ, ಜನರ ಪ್ರತಿರೋಧ

ವಿಶ್ವ ಹಿಂದೂ ಪರಿಷತ್, ಭಜರಂಗದಳದಂತಹ ಸಂಘ ಪರಿವಾರದ ವಿಷ ಪ್ರಚಾರ ಮತ್ತು ಕೃತ್ಯಗಳನ್ನು ತಡಯಲೇಬೇಕು ನಿಜ, ಆದರೆ ಇದು ಕೇವಲ 'ನಿರ್ಬಂಧ'ದ ಆಜ್ಞೆಗಳ ಕಾಗದ ಕೊಟ್ಟು, ಪತ್ರಿಕೆಯಲ್ಲಿ ಹೇಳಿಕೆ ನೀಡಿ ಶೂರತ್ವ ಮೆರೆದರೆ ಸಾಕಾಗುತ್ತದೆಯೆಂದೇ ಸರ್ಕಾರ, ಹಾಗೆಯೇ ಆಳುವ ಕಾಂಗ್ರೆಸ್ ಭಾವಿಸಿದೆ. ಇಂತಹ ಕ್ರಮಗಳು ಹಾನಿಯನ್ನು ತಡೆಯುವ ಬದಲು ಚಿಡ್ಡಿಗಳ ವೀರಾವೇಶದ ಘೋಷಣೆಗಳಿಗೂ, ತಮ್ಮ ಧರ್ಮದ ಉದ್ಧಾರದ ಇಂತಹ ಮಹತ್ಕಾರ್ಯಗಳಿಗೆ ಸೆಕ್ಯುಲರ್ ಅಧರ್ಮಿಗಳು, ಅಡ್ಡಿ ಪಡಿಸುತ್ತಿದ್ದಾರೆಂದು ಪ್ರಚಾರಿಸಿಕೊಂಡು, ಅಂತಿಮ ವಿಜಯ ತಮ್ಮದೇ ಎಂದು ಮೆರೆಯಲು, ಬೆನ್ನು ತಟ್ಟಿಕೊಳ್ಳಲು ಒಂದು ವಿಫುಲ ಅವಕಾಶ ಕಲ್ಪಿಸಿದಂತೆ ಆಗಿದೆ.

ಕೋಮುವಾದಿಗಳ ಈ ಭೀಕರ ಧಾಳಿಯನ್ನು ನಿಜವಾಗಿಯೂ ತಡೆಯುವ ಪ್ರಯತ್ನ ಪ್ರಾಮಾಣಿಕವಾಗಿ ಇದ್ದಲ್ಲಿ ಕೇವಲ ಆಡಳಿತಾತ್ಮಕವಾಗಿ ಮಾತ್ರ ಕ್ರಮವಹಿಸದೇ ಜನತೆಯನ್ನು ಎಚ್ಚರಿಸಿ, ಇಂತಹ ಶಕ್ತಿಗಳನ್ನು ತಿರಸ್ಕರಿಸುವ, ಎದುರಿಸುವಂತಹ ಸೈದ್ಧಾಂತಿಕ - ಸಂಘಟನಾ ರಾಜಕೀಯ ಸಮರ ಸಾರಬೇಕು. ಅಂತಹ ಶಕ್ತಿಗಳ ನಿಜ ಬಣ್ಣ ಬಯಲುಗೊಳಿಸಬೇಕು. ಅಂದರೆ ಮಾತ್ರ ಈ ಡೋಂಗಿ ರಾಷ್ಟ್ರಭಕ್ತರ ಹಾವಳಿಯನ್ನು ಕಿಂಚಿತ್ತಾದರೂ ತಡೆಯಲು ಸಾಧ್ಯ. ಇಲ್ಲವಾದರೆ 'ನೋಟಿಸ್' ನ ಹಾಸ್ಯಾಸ್ಪದ ಪ್ರದರ್ಶನವಾಗಿಬಿಟ್ಟು ಅದು ತಿರುಗುಬಾಣವಾಗುತ್ತದೆ. ಆದರೆ ಕಾಂಗ್ರೆಸ್‌ಗೆ ಇಂತಹ ಜನತೆಯು ರಾಜಕೀಯ ಎಚ್ಚರ ಮೂಡಿಸಲು, ಜನಸಮೂಹದ ಕ್ರಿಯಾಶೀಲ ಕಾರ್ಯಾಚರಣೆಗೆ ಇಳಿಯಲು ಸುತಾರಾಂ ಸಿದ್ಧವಿಲ್ಲ.

ಪೂರ್ವಸಿದ್ಧತೆ

ಮಂಗಳೂರಿನಲ್ಲಿ ಜರುಗಿದ 'ಹಿಂದೂ ಸಮಾಜೋತ್ಸವ' ಆ ಭಾಗದಲ್ಲಿ ನಡೆದ ಅತ್ಯಂತ ಗಮನಾರ್ಹ ಚಟುವಟಿಕೆಯಾಗಿದೆ. ಮತ್ತು ಮುಂದಿನ ಹಲವಾರು ಘಟನೆಗಳಿಗೆ ಪೂರ್ವ ಸಿದ್ಧತೆಯೂ ಆಗಿದೆ. ಒಂದೆಡೆ ಬಿಜೆಪಿ ರಾಜಕೀಯವಾಗಿ ತನ್ನ ಕುಸಿಯುತ್ತಿರುವ ವರ್ಚಸ್ಸನ್ನು ಕನಿಷ್ಟವಾದರೂ ಉಳಿಸಿಕೊಳ್ಳಲು ಈ ಮೂಲಕ ಹೆಣಗುತ್ತಿದೆ. ಇನ್ನೊಂದೆಡೆ ಆರ್.ಎಸ್.ಎಸ್. ಕೋಮುವಾದಿ ಅಜೆಂಡಾದ ಜಾರಿಗೆ ಜನರನ್ನು ಸೆಳೆಯುವ, ನಿಜ ಸಮಸ್ಯೆಗಳಿಂದ ದೂರ ಒಯ್ಯುವ ದೊಡ್ಡ ಕುತಂತ್ರ. ಇದರ ಪ್ರಚಾರದ ಅಬ್ಬರ, ಜನರನ್ನು ತರಲು ಖರ್ಚು ಮಾಡಿದ ಹಣಕ್ಕೆ ಲೆಕ್ಕವೇ ಇಲ್ಲ. ಅಂತೆಯೇ ನೀರಿನಂತೆ ಹಣ ಸುರಿಯಲಾಗಿದೆ. ಇದರ ಲಾಭ ಹೊಡೆಯಲು ಈ ಶಕ್ತಿಗಳು ಸಂಘಟಿತರಾಗಿ ಯತ್ನಿಸುತ್ತಿವೆ.

ಪ್ರಗತಿಪರ ಕ್ರಿಯಾಶೀಲತೆ ಅಗತ್ಯ

ಅಡಿಕೆ, ತೆಂಗು ಮುಂತಾದ ಬೆಳೆಗಳಿಗೆ ಬೆಲೆಯಿಲ್ಲವಾಗಿ, ಬೀಡಿ, ಹೆಂಚು ಕೈಗಾರಿಕೆ ನಾಶದಂಚಿಗೆ ತಲುಪಿ - ಕಾರ್ಮಿಕರು ಬೀದಿ ಪಾಲಾಗುತ್ತಾ, ಯುವಜನ ನಿರುದ್ಯೋಗಿಗಳಾಗಿ ಕ್ರಿಮಿನಲ್‌ಗಳಾಗುತ್ತಿದ್ದಾರೆ. ವಿದ್ಯುತ್ ದರಗಳ ಏರಿಕೆಯ ಬರೆ ಮುಂತಾದ ದುರ್ಭರ ಸ್ಥಿತಿ ಇದೆ. ಇಂತಹ ಗಂಭೀರ ಸನ್ನಿವೇಶದಲ್ಲಿ ಖಾವಿಪಡೆಗಳ ಈ ಧಾಳಿಗಳನ್ನು ಹಿಮ್ಮೆಟ್ಟಿಸಲು ತತ್‌ಕ್ಷಣದಲ್ಲಿ ಎಲ್ಲಾ ಪ್ರಗತಿಪರ, ಧರ್ಮನಿರಪೇಕ್ಷ ಜನರನ್ನು ಜಾಗೃತಿಗೊಳಿಸುವ, ಈ ಮೂಲಕ ಪ್ರತಿರೋಧ ಒಡ್ಡುವ ಕಾರ್ಯಾಚರಣೆಗೆ ಇಳಿಯಬೇಕು. ಇಲ್ಲವಾದರೆ ದುಷ್ಟರ ಅಟ್ಟಹಾಸಕ್ಕೆ ಶಿಷ್ಟರ ಮೌನವೇ ಸಾಕು ಎಂದಂತಾದೀತು.

ಗಡಿ ವಿವಾದ : ಶಿಂಧೆ-ಕೃಷ್ಣರ ಮನದಲ್ಲೇನಿದೆ?

ಕರ್ನಾಟಕ-ಮಹಾರಾಷ್ಟ್ರದ ಗಡಿ ವಿವಾದವನ್ನು ಮತ್ತೆ ಕೆದಕಲಾಗುತ್ತಿದೆ. ಇಂತಹ ಪ್ರಚೋದನಾತ್ಮಕ ಕೆಲಸಗಳಲ್ಲಿ ತೊಡಗಿರುವವರು ಯಾರೋ ಅಲ್ಲ. ಸಮಸ್ಯೆಯನ್ನು ಸೌಹಾರ್ದಯುತವಾಗಿ, ಸಮಚಿತ್ತದಿಂದ ಬಗೆಹರಿಸಿಕೊಳ್ಳುವ ಹೊಣೆ ಹೊರಬೇಕಾದ ಎರಡು ಸರ್ಕಾರಗಳೇ.

ಕಾವೇರಿ ನದಿ ನೀರಿನ ವಿವಾದ ಹಂತಹಂತವಾಗಿ ತಣ್ಣಗಾಗುತ್ತಾ ಬರುತ್ತಿರುವಂತೆಯೇ ಮಹಾರಾಷ್ಟ್ರದ ಮುಖ್ಯಮಂತ್ರಿ ಗಡಿವಿವಾದದ ಪ್ರಶ್ನೆಯನ್ನೆತ್ತಿ ಸುಪ್ರೀಂಕೋರ್ಟ್‌ಗೆ ಹೋದರು. ಈಗ ಮತ್ತೆ ಅದನ್ನೇ ಕೆಣಕಲಾಗುತ್ತಿದೆ. ಇದಕ್ಕೆ ಕರ್ನಾಟಕದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ತಿರುಗೇಟು ನೀಡಲಿರುವರಂತೆ! ವಿಪರ್ಯಾಸವೆಂದರೆ ಈ ಇಬ್ಬರೂ ಮುಖ್ಯಮಂತ್ರಿಗಳೂ ಒಂದೇ ಪಕ್ಷದವರು. ಅದೂ ರಾಷ್ಟ್ರೀಯ ಪಕ್ಷ ಕಾಂಗ್ರೆಸ್‌ನವರು!!

ಹೀಗೆ ಒಂದೇ ಪಕ್ಷದ ಮುಖ್ಯಮಂತ್ರಿಗಳಾಗಿದ್ದರೂ ವಿವಾದವನ್ನು ಯಾಕೆ ಎಬ್ಬಿಸಲಾಗುತ್ತದೆ ಎಂಬುದು ಕುತೂಹಲದ ಪ್ರಶ್ನೆ. ಈ ಮೂಲಕ ಇಬ್ಬರೂ ದಿಢೀರನೆ ಪ್ರಕರಣ ಕೆಣಕಿ ಅವರವರ ರಾಜ್ಯಗಳ ಪರ ಎಂದು ಸಮರ್ಥಿಸಿಕೊಳ್ಳುವ ಒಂದು ನಾಟಕವಷ್ಟೇ. ಆಳುವವರಿಗೆ ಬಿಕ್ಕಟ್ಟು ಬಂದಾಗ, ಜನರ ಸಂಕಟ ಹೆಚ್ಚಿ ಪ್ರತಿಭಟನೆ ಬೆಳೆದಾಗ- ಬೆಳೆಯುವುದು ಎಂದು ಕೊಂಡಾಗ ಹೀಗೆ ಗಮನ ಬೇರೆಡೆಗೆ ತಿರುಗಿಸಲು 'ಸಂಕುಚಿತವಾದ' ಭಾಷಾಂದತೆ ಉದ್ರೇಕಿಸಿ ಲಾಭ ಹೊಡೆಯಲು ಆಳುವವರು ತಂತ್ರ ಹೂಡುವುದು ತಿಳಿದಿರುವಂತಹದು. ವೀರಪ್ಪನ್, ಕಾವೇರಿಗಳ ಸಮಸ್ಯೆ ಆಯಿತು. ಈಗ ಗಡಿವಿವಾದಕ್ಕೆ ಕೈ ಚಾಚಿದ್ದಾರೆ ಕೃಷ್ಣರವರು. ಅದಕ್ಕೆ ಸೋ ಎಂದು ಬೆಂಗಾವಲು ಸಾರಿದ್ದಾರೆ ಮಹಾರಾಷ್ಟ್ರದ ಮುಖ್ಯಮಂತ್ರಿಯವರು!

ಇಂತಹ ಯತ್ನಗಳಿಗೆ ಕೈ ಜೋಡಿಸುವ, - ತಮ್ಮದೂ ಒಂದು ಆಟ ಆಡುವವರ ಸಂಖ್ಯೆ ಕಡಿಮೆಯೇನಿಲ್ಲ. ಬೆಳಗಾವಿಯಲ್ಲೇ ಈ ಬಾರಿ ಸಾಹಿತ್ಯ ಸಮ್ಮೇಳನ! ಪಾಟೀಲ ಪುಟ್ಟಪ್ಪನವರು ಅಧ್ಯಕ್ಷರು. ಆಗಲೇ ಕನ್ನಡ-ಮರಾಠಿ ಎಂಬ ಮಾತುಗಳು ಮೆಲ್ಲಮೆಲ್ಲನೇ ಕಾಯುತ್ತಿವೆ. ಜನರ ಐಕ್ಯತೆ ಬೆಸೆದು, ಬದುಕಿನ ಬವಣೆಗಳನ್ನು ನೀಗಿಸಿಕೊಳ್ಳಲು ಜಾಗೃತಿ ಉಂಟುಮಾಡುವಲ್ಲಿ ಈ ಸಮ್ಮೇಳನ ಸಹಾಯಕವಾಗುವುದೋ ಅಥವಾ ಗಡಿ ವಿವಾದದ ಭಾವೋದ್ರೇಕ ಎತ್ತರಿಸುವುದೋ ಎಂಬುದನ್ನು ಕಾದು ನೋಡಬೇಕು. ಆಳುವವರ ಆಟಗಳಿಗೆ ಜನ ತಲೆಕೊಡಬಾರದು. ವಿವಾದ ನಿಜ ಪರಿಹಾರದ ಪ್ರಯತ್ನ ನಡೆವವರೆಗೂ ಈಗಿನ ಯಥಾಸ್ಥಿತಿ ಕಾಪಾಡಬೇಕು.

ಒಂದು ವೇಳೆ ನಿಜವಾಗಿಯೂ ಗಡಿ ಪ್ರಶ್ನೆ ಇತ್ಯರ್ಥಗೊಳಿಸುವಂತಿದ್ದರೆ ಗಂಭೀರವಾಗಿ ಪರಸ್ಪರ ಚರ್ಚಿಸಿ ಕ್ರಮವಹಿಸಬೇಕು. ಗ್ರಾಮ ಘಟಕವೇ ಮೂಲ ಅಂಶವೆಂದು (ಬಹುಸಂಖ್ಯಾತ ಭಾಷಿಕರ ಆಧಾರದಲ್ಲಿ) ಮತ್ತು ಪ್ರಾದೇಶಿಕ ನಿರಂತರತೆಯನ್ನು ಮಾನದಂಡವಾಗಿ ಪರಿಗಣಿಸಿ ಇತ್ಯರ್ಥಗೊಳಿಸಬೇಕು.

ನಿರ್ಮಾಣ ಕಾರ್ಮಿಕರ ಅಖಿಲ ಭಾರತ ಸಮ್ಮೇಳನ

ಬಲಿಷ್ಠ ಚಳುವಳಿಗೆ ನಿರ್ಧಾರ

ಕಟ್ಟಡ, ರಸ್ತೆ, ಸೇತುವೆ ಮುಂತಾದವುಗಳನ್ನು ಕಟ್ಟುವ ಕಾರ್ಮಿಕರ ಅಖಿಲ ಭಾರತ ಸಮ್ಮೇಳನವು ಅಸಂಘಟಿತರನ್ನು ಸಂಘಟಿಸುವಲ್ಲಿ ಯಶಸ್ವಿಯಾದ ಹೆಜ್ಜೆ ಇರಿಸಿದೆ. ಈ ಸಮ್ಮೇಳನದಲ್ಲಿ ಪ್ರತಿನಿದಿಯಾಗಿ ಭಾಗವಹಿಸಿದ ದ. ಕನ್ನಡದ ಸಿಐಟಿಯು ನಾಯಕ ವಸಂತ ಆಚಾರಿಯವರು ವರದಿ ಮಾಡಿದ್ದಾರೆ.

ದೇಶವನ್ನು ಕೋಮುವಾದಿ ಶಕ್ತಿಗಳು ಆಳುತ್ತಿವೆ. ಗೋದ್ರಾ ಘಟನೆಯನ್ನು ನೆವನವಾಗಿ ಇಟ್ಟುಕೊಂಡು ಸಂಘ ಪರಿವಾರ ಗುಜರಾತ್‌ನಲ್ಲಿ ಅಲ್ಪಸಂಖ್ಯಾತರ ಸಾಮೂಹಿಕ ಹತ್ಯೆ, ಗರ್ಭಿಣಿ ಮಹಿಳೆಯರ ಬರ್ಬರ ಹತ್ಯೆ, ಹೆತ್ತ ತಾಯಿಯ ಎದುರಿನಲ್ಲಿಯೇ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆಸಲಾಯಿತು. ಮುಖ್ಯಮಂತ್ರಿ ನರೇಂದ್ರ ಮೋದಿ ಪ್ರಾಯೋಜಕತ್ವದಲ್ಲಿಯೇ ಗಲಭೆಗಳು ನಡೆದವು, ಪೋಲೀಸರು ಕೂಡಾ ಶಾಮೀಲಾದರು. ಗುಜರಾತ್ ಘಟನೆ ಇಡೀ ದೇಶವೇ ತಲೆತಗ್ಗಿಸುವಂತಾಯಿತು. ಹಿಂದುತ್ವ ಹೆಸರಿನಲ್ಲಿ ಜನತೆಯಲ್ಲಿ ಭಯ ಹುಟ್ಟಿಸಿ ಬಿಜೆಪಿ ಚುನಾವಣೆಯನ್ನು ಗೆದ್ದಿತು. ಇದೇ ಪ್ರಯತ್ನವನ್ನು ಮುಂದಿನ ಚುನಾವಣೆಯಲ್ಲಿ ಕೋಮುವಾದಿ ಶಕ್ತಿಗಳು ನಡೆಸಲು ಹೊರಟಿವೆ. ದೇಶದ ಜನತೆ ಈ ಅಪಾಯವನ್ನು ಸೋಲಿಸಬೇಕಾಗಿದೆ ಎಂದು CITU ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾಂ.ಡಾ.ಎಂ.ಕೆ ಪಂಧೆಯವರು 5ನೇ ಕನ್‌ಸ್ಟ್ರಕ್ಸನ್ ವರ್ಕರ್ಸ್ ಫೆಡರೇಶನ್ ಆಫ್ ಇಂಡಿಯದ ಅಖಿಲ ಭಾರತ ಸಮ್ಮೇಳನ ಉದ್ಘಾಟಿಸುತ್ತಾ ಮಾತನಾಡಿದರು.

ಈ ಸಮ್ಮೇಳನವು 2003 ಜನವರಿ 30 ತಮಿಳುನಾಡು ರಾಜ್ಯದ ಕನ್ಯಾಕುಮಾರಿ ಜಿಲ್ಲೆಯ ನಾಗರಕೋಲ್‌ನಲ್ಲಿ ಕಾಂ. ಎಸ್.ಸೂರ್ಯನಾರಾಯಣ ರಾವ್ ವೇದಿಕೆ (ಮಂಚ್)ಯಲ್ಲಿ ಜರುಗಿತು.

ಸಾಮ್ರಾಜ್ಯಶಾಹಿ ಅಮೇರಿಕಾ ಇರಾಕ್‌ನ ಮೇಲೆ ಯುದ್ಧ ಮಾಡಲು ಹೊರಟಿದೆ. ಈ ಯುದ್ಧವನ್ನು ವಿಶ್ವದ ಜನತೆ ವಿರೋಧಿಸುತ್ತಿದೆ. ಅಮೇರಿಕಾ ನೀಡುತ್ತಿರುವ ಕಾರಣ ಜಾಗತೀಕವಾಗಿ ಸುಳ್ಳು ಎಂದು ಸಾಬೀತಾದರೂ ಯಾರ ಬೆಂಬಲವಿಲ್ಲದಿದ್ದರೂ ಇರಾಕ್‌ನೊಂದಿಗೆ ಯುದ್ಧ ಮಾಡಿಯೇ ಸಿದ್ದ ಎಂದು ಬುಷ್ ಉದ್ಘರಿಸುತ್ತಿರುವುದು ಖಂಡನೀಯ. ಅಪಾಯಕಾರಿ ಅಸ್ತ್ರಗಳು ಅಮೇರಿಕಾದಲ್ಲಿ ಇದೆ. ಅದನ್ನು ಅಮೇರಿಕ ನಾಶ ಮಾಡಲು ಸಿದ್ಧವಿದೆಯೇ? ಎಂದ ಅವರು ಜಾಗತಿಕ ವಿದ್ಯಾಮಾನಗಳ ರಾಜಕೀಯವನ್ನು ವಿಶ್ಲೇಷಿಸಿದರು.

ಫೆಬ್ರವರಿ 26, ಪಾರ್ಲಿಮೆಂಟ್ ಚಲೋ

ವಿಶ್ವಬ್ಯಾಂಕ್, ಇಎಂಎಫ್, ವಿಶ್ವ ವಾಣಿಜ್ಯ ಸಂಸ್ಥೆ ವಿಶ್ವದ ಆರ್ಥಿಕತೆಯನ್ನು ನಾಶ ಮಾಡುತ್ತಿದೆ. ಸಾಮ್ರಾಜ್ಯಶಾಹಿ ಪ್ರಚೋದಿತ ಆರ್ಥಿಕ ನೀತಿಯನ್ನು ಬಡದೇಶದ ಜನತೆಯ ಮೇಲೆ ಹೇರಿದುದರಿಂದ ಬಡತನ, ನಿರುದ್ಯೋಗ, ಕೈಗಾರಿಕೆ ಮುಚ್ಚುವಿಕೆ, ಕಾರ್ಮಿಕರ ಹಕ್ಕುಗಳ ಮೇಲೆ ದಾಳಿ, ಸಾಮಾಜಿಕ ಸೌಲಭ್ಯಗಳು ನಾಶವಾಗುತ್ತಿವೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಪ್ರಭಾವದಿಂದ ಸಾರ್ವಜನಿಕ ಕೆಲಸಗಳಿಗೆ ವೆಚ್ಚ ಕಡಿತ ಮಾಡಿರುವುದರಿಂದ ನಿರ್ಮಾಣ ಕಾರ್ಮಿಕರು ನಿರುದ್ಯೋಗದತ್ತ ತಳ್ಳಲ್ಪಟ್ಟಿದ್ದಾರೆ. ಸೇತುವೆ, ಅಣೆಕಟ್ಟು, ಕಟ್ಟಡ ಮನೆ, ನೀರಾವರಿ ಯೋಜನೆಗಳು ನಡೆಯದಿರುವುದರಿಂದ ಪ್ರಗತಿ ಇಲ್ಲ. ಅದರೊಂದಿಗೆ ಕಾರ್ಮಿಕರಿಗೆ ಉದ್ಯೋಗ ಕಡಿತವಾಗಿದೆ ಎಂದ ಅವರು ***ಫೆಬ್ರವರಿ 26 ರಂದು ದೇಶದ ಮೂಲೆ ಮೂಲೆಯಿಂದ ಬರುವ ಕಾರ್ಮಿಕ ವರ್ಗ ಪಾರ್ಲಿಮೆಂಟಿನ ಎದುರು ಬೃಹತ್ ಪ್ರದರ್ಶನ ಮಾಡಿ ಬಿಜೆಪಿ, ಎಸ್‌ಡಿಎ ಸರಕಾರಕ್ಕೆ ನೋಟೀಸ್ ನೀಡಲಿದೆ,*** ಕಾರ್ಮಿಕ ವಿರೋಧಿ ಸುಧಾರಣೆಗಳ ಕೈಬಿಡಬೇಕೆಂದು ಒತ್ತಾಯಿಸಲಿದೆ. ತದನಂತರ ಮುಂದಿನ ಪಾರ್ಲಿಮೆಂಟ್ ಅಧಿವೇಶನದ ಮುಂಚೆ ಸರಕಾರದ ನೀತಿಗಳ ವಿರುದ್ಧ **ಒಂದು ದಿನದ ಅಖಿಲ ಭಾರತ ಮುಷ್ಕರ ನಡೆಸುವ ಪ್ರಸ್ತಾಪವನ್ನು ಇತರ ಕಾರ್ಮಿಕ ಸಂಘಗಳ ಮುಂದೆ ಸಿಐಟಿಯು ಇಡಲಿದೆ ಎಂದರು.**

ಕೇರಳ, ತಮಿಳುನಾಡು ಕಟ್ಟಡ ಕಾರ್ಮಿಕರ ಹೋರಾಟದಿಂದ ಕಾರ್ಮಿಕರಿಗೆ ಕ್ಷೇಮನಿಧಿ ಸೌಲಭ್ಯಗಳು ಸಿಗಲಿವೆ. ಅದೇ ರೀತಿ ಬೇರೆ ರಾಜ್ಯಗಳಲ್ಲೂ ಹೋರಾಟವನ್ನು ನಡೆಸುವ ಮಖಾಂತರ ಬಲಿಷ್ಠ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘಟನೆಯನ್ನು ಕಟ್ಟಬೇಕಾಗಿದೆ ಎಂದು ಅವರು ಹೇಳಿದರು.

ಉದ್ಘಾಟನಾ ಸಮಾರಂಭದಲ್ಲಿ ಆಷ್ಟ್ರೇಲಿಯಾ, ಇಂಗ್ಲೆಂಡ್, ಇರಾಕ್, ಬಾಂಗ್ಲಾದೇಶ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘಗಳ ಮುಖಂಡರು ಸೌಹಾರ್ಧ ವಿದೇಶಿ ಪ್ರತಿನಿಧಿಗಳಾಗಿ ಉಪಸ್ಥಿತರಿದ್ದರು.

ಸಿಡಬ್ಲ್ಯುಎಫ್‌ಐನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ದೆಭಂಜನ ಚಕ್ರಭರ್ತಿಯವರು ಪ್ರಸ್ತಾವಿಕ ಮಾತನಾಡಿದರು. ಸಿಂಗಾರವೇಲ್, ಟಿ.ಕೆ.ರಂಗರಾಜನ್ ಹಾಗೂ ಫೆಡರೇಶನ್ನಿನ ಪದಾಧಿಕಾರಿಗಳು ವೇದಿಕೆಯಲ್ಲಿದ್ದರು.

ತಮಿಳುನಾಡಿನ ಶಾಸಕ, ಸಿಐಟಿಯು ರಾಜ್ಯ ಅಧ್ಯಕ್ಷ ಹೇಮಚಂದ್ರರವರು ಸ್ವಾಗತ ಸಮಿತಿ ಪರವಾಗಿ ಸ್ವಾಗತ ಭಾಷಣ ಮಾಡಿದರು.

ಸೆಮಿನಾರ್: ಜಾಗತೀಕರಣ ಮತ್ತು (ಕಟ್ಟಡ) ನಿರ್ಮಾಣ ಕಾರ್ಮಿಕರು ಎಂಬ ವಿಷಯದ ಮೇಲೆ ವಿಚಾರ ಸಂಕಿರಣ ಜನವರಿ 30 ರಂದು ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಡಾ.ಎಂ.ಕೆ.ಪಂಧೆ ವಹಿಸಿದ್ದರು.

ಸಿಡಬ್ಲ್ಯುಎಫ್ಐ ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ದೆಬಾಂಜನ್ ಚಕ್ರಭರ್ತಿ, (Prospects of Construction Industry and Globalisation) ಎಂಬ ವಿಷಯದಲ್ಲಿ ಯುಸಿಐಟಿಟಿ ಪ್ರಧಾನ ಕಾರ್ಯದರ್ಶಿ ಆಷ್ಟ್ರೇಲಿಯಾದ ಜಾರ್ಜ್ ಬ್ರೂಸ್‌ವೆಲ್ 'ಜಾಗತೀಕರಣ ಮತ್ತು ಬಡತನ, nuilder association of india ಇದರ ತಮಿಳುನಾಡು ಘಟಕದ ಅಧ್ಯಕ್ಷರು, construction workers and globalisation ಎಂಬ ವಿಷಯದ ಮೇಲೆ ತಮ್ಮ ಪ್ರಭಂಧ ಮಂಡಿಸಿದರು. ಪ್ರತಿನಿಧಿಗಳು ಪ್ರಶ್ನೋತ್ತರದಲ್ಲಿ ಪಾಲ್ಗೊಂಡರು.

ಪ್ರಧಾನ ಕಾರ್ಯದರ್ಶಿ ವರದಿ ಮೇಲೆ 37 ಮಂದಿ ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡರು.

ಕೋಮುವಾದ ಅಪಾಯಕರ, ಇರಾಕ್ ಮೇಲಿನ ಯುದ್ಧ ವಿರೋಧಿಸಿ, ಎರಡನೇ ಕಾರ್ಮಿಕ ಆಯೋಗದ ಶಿಫಾರಸು ವಿರೋಧವಾಗಿ, ಕಾರ್ಮಿಕ ಹಕ್ಕು- ಇತ್ಯಾದಿಗಳ ಬಗ್ಗೆ ನಿರ್ಣಯ ಅಂಗೀಕರಿಸಲಾಯಿತು.

ನೂತನ ಪದಾಧಿಕಾರಿಗಳು

ಅಧ್ಯಕ್ಷರು - ಆರ್.ಸಿಂಗಾರವೇಲು
ಪ್ರಧಾನ ಕಾರ್ಯದರ್ಶಿ - ದೆಬಾಂಜನ್ ಚಕ್ರಬರ್ತಿ
ಖಜಾಂಚಿ - ಎಸ್.ಬಿ.ಕರ್ ಮಾಕರ್
ಒಳಗೊಂಡು

ಕಾರ್ಯಕಾರಿ ಸಮಿತಿ ಸದಸ್ಯರು

ಒಟ್ಟು 76 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರು (ಕರ್ನಾಟಕದಿಂದ ವಸಂತ ಆಚಾರಿ) ಆಯ್ಕೆಗೊಂಡರು.

ಫೆಬ್ರವರಿ 2, ರಂದು ಕನ್ಯಾಕುಮಾರಿ ಜಿಲ್ಲೆಯ ಕಾರ್ಮಿಕರ ಬೃಹತ್ ಮೆರವಣಿಗೆ, ಬಹಿರಂಗ ಸಭೆ ನಡೆಯಿತು.

ಜಮಖಂಡಿ ಕೊಳಚೆ ಪ್ರದೇಶ ನಿವಾಸಿಗಳ ಪ್ರತಿಭಟನೆ



ಸಭೆ ಉದ್ದೇಶಿಸಿ ಕಾಂ. ನಿತ್ಯಾನಂದಸ್ವಾಮಿ ಮಾತನಾಡುತ್ತಿರುವುದು.

ಜಮಖಂಡಿ ಪಟ್ಟಣದ ರಾಮ ರಹೀಂ ನಗರದ ಕೊಳಚಿ ಪ್ರದೇಶದ ನಿವಾಸಿಗಳು ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ನೇತೃತ್ವದಲ್ಲಿ ಮೆರವಣಿಗೆ ನಡೆಸಿ ತಹಶೀಲ್ದಾರ್‌ರಿಗೆ ಮನವಿ ಸಲ್ಲಿಸಿದರು.

ಈ ಪ್ರದೇಶದ ನಿವಾಸಿಗಳಿಗೆ ಮನೆ ಹಕ್ಕು ಪತ್ರ ವಿತರಿಸಲಾಯಿತು. ಸ್ವಂತ ಮನೆ ಇಲ್ಲದವರಿಗೆ ಆಶ್ರಯ ಮನೆಗಳನ್ನು ನಿರ್ಮಿಸಿಕೊಡಬೇಕು. ರಸ್ತೆ, ಒಳಚರಂಡಿ, ಬೀದಿದೀಪ, ಕುಡಿಯುವ ನೀರು ಹಾಗೂ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಬೇಕೆಂಬು ಪ್ರತಿಭಟನಾಕಾರರು ಒತ್ತಾಯಿಸಿದರು. ಈ ಬೇಡಿಕೆಗಳನ್ನು ತಕ್ಷಣ ಈಡೇರಿಸದಿದ್ದರೆ, ತಹಶೀಲ್ದಾರ್ ಕಛೇರಿ ಎದುರು ಅನಿರ್ದಿಷ್ಟ ಕಾಲದ ಧರಣಿ ನಡೆಸುವುದಾಗಿ ಅವರು ಎಚ್ಚರಿಕೆ ನೀಡಿದರು.

ಬಾಗ್ಯಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲಾದವರಿಗೆ ಮೀಟರ್ ಅಳವಡಿಸುವ ಸರ್ಕಾರದ ನಿರ್ಧಾರವನ್ನು ಮುಖಂಡರು ಖಂಡಿಸಿದರು.

ಜನವರಿ 28 ರಂದು ನಡೆದ ಈ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ನ 200 ಕ್ಕೂ ಅಧಿಕ ಕಾರ್ಯಕರ್ತರು ಕೆಂಬಾವುಟ ಹಿಡಿದು ಜಿಲ್ಲಾ ಆಡಳಿತದ ನಿರ್ಲಕ್ಷ ಧೋರಣೆ ಖಂಡಿಸಿ ಘೋಷಣೆ ಕೂಗಿದರು. ತಹಶೀಲ್ದಾರ್‌ರವರ ಕಛೇರಿಯೆದುರು ಮೂರು ತಾಸುಗಳವರೆಗೆ ಧರಣಿ ನಡೆಸಿದರು/ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿ, ಜಮಖಂಡಿ ನಗರ ಶಾಖೆ ಕಾರ್ಯದರ್ಶಿ ಎಸ್.ಬಿ.ದೇಸಾಯಿ, ಮುಖಂಡರಾದ ಸುರೇಖಾ ರಜಪೂತ ಬುಡ್ಡೇಸಾಬ ನದಾಫಿ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.


ತೈಲ ಕಂಪನಿಗಳನ್ನು ಖಾಸಗೀಯವರಿಗೆ ಮಾರುವ ಕೇಂದ್ರ ಸರ್ಕಾರದ ಕ್ರಮದ ವಿರುದ್ಧ ದೇಶದಾದ್ಯಂತ ಪ್ರತಿಭಟಿಸಲು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿತು. ಅದರಂತೆ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ಹೆಚ್‌ಪಿಸಿಎಲ್ ಕಛೇರಿ ಎದುರು ನೂರಾರು ಜನರ ಪ್ರತಿಭಟನಾ ಪ್ರದರ್ಶನ ನಡೆಯಿತು. ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಕಾರ್ಯದರ್ಶಿ ಮಂಡಳಿ ಸದಸ್ಯರ ವಿ.ಜೆ.ಕೆ.ನಾಯರ್, ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಮಾತನಾಡಿದರು.



ಅಮೇರಿಕಾ ಇರಾಕ್ ಮೇಲೆ ದಾಳಿ ತರುವ ಹಾನಿ..?

ಅಮೇರಿಕಾದ ಅಧ್ಯಕ್ಷ ಬುಶ್ ಮತ್ತು ಆತನ ಗ್ಯಾಂಗ್ ಬಿಟ್ಟರೆ, ಇನ್ನೆಲ್ಲರೂ ಇರಾಕ್ ಮೇಲೆ ಯುದ್ಧ ಆಗದಿರುವಂತೆ ತಮ್ಮೆಲ್ಲಾ ಶಕ್ತಿ ಹಾಕಿ ಪ್ರಯತ್ನಿಸುತ್ತಿದ್ದಾರೆ. ಆದರೂ ಯುದ್ಧ ಆದರೆ....? ಏನಾಯಿತು? ಅದರ ವೆಚ್ಚ ಏನು? ಪರಿಣಾಮವೇನು? ಎಂಬ ಬಗ್ಗೆ ಊಹಾಪೋಹ ನಡೆಯುತ್ತಿದೆ.

ಮೊದಲನೆಯದಾಗಿ ಯುದ್ಧದ ವೆಚ್ಚ ಏನಾಗಬಹುದು? ಅಮೇರಿಕಾದ ಯುದ್ಧಕೋರ ಅಧಿಕಾರಿಗಳು ಈ ವೆಚ್ಚ 'ಒಂದು' 50-60 ಶತಕೋಟಿ ಡಾಲರು 'ಅಷ್ಟೆ' ಅಂತಾರೆ! ಇದನ್ನು ಇರಾಕ್‌ನಲ್ಲಿ ಸಿಗುವ ತೈಲ ಮಾರಿ ಭರಿಸಬಹುದು. ಅಂದರೆ ಅಮೇರಿಕದ ಜನತೆ ಇರಾಕಿ ಯುದ್ಧದ ಯಾವುದೇ ಭಾರ ಹೊರಬೇಕಾಗಿಲ್ಲ ಎಂದು ನಂಬಿಸಲು ಪ್ರಯತ್ನಿಸುತ್ತಿದ್ದಾರೆ. ಇವರು ಯುದ್ಧದ



ವೆಚ್ಚ ಅಮೇರಿಕಾ ಸರ್ಕಾರಕ್ಕೆ ತಗಲುವ ನೇರ ವೆಚ್ಚಗಳ ಬಗ್ಗೆ ಮಾತ್ರ ಹೇಳುತ್ತಿದ್ದಾರೆ. ಅಮೇರಿಕದ ಈ ವರ್ಷದ ರಕ್ಷಣಾ ವೆಚ್ಚವೇ ಸುಮಾರು 400 ಶತಕೋಟಿ ಡಾಲರು ಆಗಿದ್ದು, ಅದು ಈ ವರ್ಷದ ಬಜೆಟ್ ಕಾಲುಭಾಗ ಇಂತಹ ರಕ್ಷಣಾ ವೆಚ್ಚ ಯುದ್ಧಕ್ಕಾಗಿಯೇ, ಇದರರ್ಥ ಇತರ ಹಲವು ಸಾಮಾಜಿಕ ವೆಚ್ಚಗಳ ಮೇಲೆ ತೀವ್ರ ಕಡಿತ ಯುದ್ಧದಿಂದ ಅಮೇರಿಕದ ಆರ್ಥಿಕತೆ ಮೇಲೆ ಆಗುವ ಒಟ್ಟು ವೆಚ್ಚವನ್ನು, ಸ್ವತಂತ್ರ ವೀಕ್ಷಕರು 1210ರಿಂದ 1600 ಶತಕೋಟಿ ಡಾಲರುಗಳಷ್ಟು ಎಂದು ಅಂದಾಜು ಮಾಡುತ್ತಾರೆ. ಇರಾಕ್‌ನ ಮೇಲೆ, ಅಲ್ಲಿನ ಜನತೆಗೆ ಆಗುವ ನಷ್ಟವನ್ನು ಅವರು ಯಾಕೆ ಲೆಕ್ಕ ಹಾಕಿಯಾರು? ಇರಾಕ್ ಮೇಲೆ ಬುಶ್‌ಗ್ಯಾಂಗ್ ದಾಳಿ ಮಾಡಿದರೆ, ಆಳುವವರು ಮತ್ತು ಮಿಲಿಟರಿ -ಕೈಗಾರಿಕಾ ಸಂಕೀರ್ಣದವರಿಗೆ ಬಿಟ್ಟರೆ, ಬೇರೆ ಎಲ್ಲರಿಗೂ ನಷ್ಟವೇ. ಅಮೇರಿಕಾದ ಜನತೆ ಇರಾಕಿನ ಸರ್ಕಾರ ಮತ್ತು ಜನತೆ, ಎಲ್ಲಾ ದೇಶಗಳ ಸಾಮಾನ್ಯ ಜನರ ಮೇಲೆ ಯುದ್ಧ ತೀವ್ರ ಪರಿಣಾಮ ಬೀರಲಿದೆ.

ತೈಲದ ಬೆಲೆಯಲ್ಲಿ ಆಗಬಹುದಾದ ಏರುಪೇರು ಒಂದೇ ಸಾಕು, ಇಡೀ ಜಗತ್ತಿನ ಜನತೆಯ ಬದುಕನ್ನು ಇನ್ನಷ್ಟು ಧುರ್ಬರಗೊಳಿಸಲಿಕ್ಕೆ. ಕಳೆದ ಜನವರಿಯಲ್ಲಿ ಒಂದು ಬ್ಯಾರಲ್‌ಗೆ 20 ಡಾಲರು ಇದ್ದ ತೈಲ ಬೆಲೆ ಈ ಜನವರಿಯಲ್ಲಿ ಈಗಾಗಲೇ 30 ಡಾಲರಿಗೆ ಏರಿದೆ. ಈ ಬೆಲೆ ಏರಿಕೆಯನ್ನೇ ಬಡವರನ್ನು ಬಿಡಿ, ಇಂಡಿಯಾದ ಮಧ್ಯಮವರ್ಗದವರೂ ತಡಕೊಳ್ಳಲಿಕ್ಕೆ ಸಾಧ್ಯವಾಗುತ್ತಿಲ್ಲ. ಇರಾಕ್ ಮೇಲೆ ಯುದ್ಧವಾದರೆ ಬ್ಯಾರೆಲ್‌ಗೆ ತೈಲದ ದರ 40ರಿಂದ 80 ಡಾಲರಿಗೇರಿತು ಎಂಬ ಅಂದಾಜಿದೆ.

ಜಗತ್ತಿನಾದ್ಯಂತ ಅಮೇರಿಕ-ವಿರೋಧಿ ಭಾವನೆ ತಾರಕಕ್ಕೆ

ಕಳೆದ ಎರಡು ವರ್ಷಗಳಲ್ಲಿ ಹೆಚ್ಚು ಕಡಿಮೆ ಎಲ್ಲಾ ದೇಶಗಳಲ್ಲಿ ಅಮೇರಿಕಾ ವಿರೋಧಿ ಭಾವನೆ ವಿಪರೀತ ಹೆಚ್ಚಿದೆ. 44 ದೇಶಗಳಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಇದು ಕಂಡು ಬಂದಿದೆ. ಪಶ್ಚಿಮ-ಕೇಂದ್ರ ಏಷ್ಯಾ ಉತ್ತರ ಆಫ್ರಿಕಾದ ಮುಸ್ಲಿಮ್ ಮತ್ತು ಅರಬ್ ದೇಶಗಳಲ್ಲಿಯೂ ಇದು ವಿಪರೀತವಾಗಿ ಹೆಚ್ಚಿದೆ. ಈ ದೇಶಗಳಲ್ಲಿ ಅಮೇರಿಕ- ಪರ ಇರುವ ಜನ ತೀರಾ ಕಡಿಮೆ. (ಪಾಕಿಸ್ತಾನದಲ್ಲಿ ಕೇವಲ ಶೇಕಡಾ 10, ಈಜಿಪ್ತ್‌ನಲ್ಲಿ ಕೇವಲ ಶೇಕಡಾ 6) ಈ ದೇಶಗಳಲ್ಲಿ ಅಮೇರಿಕದ ಯುದ್ಧ ಭಯೋತ್ಪಾದಕರ ವಿರುದ್ಧ ಅಲ್ಲ. ಮುಸ್ಲಿಮರನ್ನು ನಾಶ ಮಾಡಲು ಎಂದು ನಂಬಿದ್ದಾರೆ, ಫ್ರಾನ್ಸ್, ಜರ್ಮನಿ, ರಷ್ಯಾ ಹಾಗೂ ಯುರೋಪಿನ ಹೆಚ್ಚಿನ ದೇಶಗಳಲ್ಲಿ ಅಮೇರಿಕದ ನೀತಿಗಳಿಗೆ ತೀವ್ರ ವಿರೋಧವಿದೆ. ಇರಾಕಿನ ಮೇಲೆ ಯುದ್ಧ ಇರಾಕಿ ತೈಲ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಅಲ್ಲದೆ ಬೇರೆನಲ್ಲ ಎಂದು ಬಹುಸಂಖ್ಯಾತರು ಅಭಿಪ್ರಾಯಪಟ್ಟಿದ್ದಾರೆ. ಸೋವಿಯೆಟ್ ಒಕ್ಕೂಟಕ್ಕೆ ವಾಪಸಾಗಬಯಸುವ ರಷ್ಯನ್ನರು. ಹತ್ತು ರಷ್ಯನ್ನರಲ್ಲಿ ಏಳು ಜನ ಸೋವಿಯೆಟ್ ಒಕ್ಕೂಟದ ಪತನ ಆಗಲೇಬಾರದಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ. ಮುಕ್ಕಾಲು ಭಾಗ ರಷ್ಯನ್ನರು, ಸೋವಿಯೆಟ್ ಒಕ್ಕೂಟ ಜನರ ಹಿತಾಸಕ್ತಿಗೆ ಈಗಿನ ವ್ಯವಸ್ಥೆಗಿಂತ ಹೆಚ್ಚು ಅನುಗುಣವಾಗಿತ್ತು ಎಂದಿದ್ದಾರೆ. ಹತ್ತರಲ್ಲಿ ಆರು ಜನ ಸೋವಿಯೆಟ್ ಒಕ್ಕೂಟದ ಪತನ ಅನಿವಾರ್ಯವೇನು ಆಗಿರಲಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯಗಳ ಸೋವಿಯೆಟ್ ಒಕ್ಕೂಟ 80ನೇ ವಾರ್ಷಿಕ ದಂದು ನಡೆದ ಸಮೀಕ್ಷೆಯಲ್ಲಿ ವ್ಯಕ್ತವಾಗಿದೆ.



ಅಧ್ಯಕ್ಷ ಲುಲಾ ಅಧಿಕಾರ ಸ್ವೀಕಾರ- ಬ್ರೆಜಿಲ್‌ನಲ್ಲಿ ಸಂಭ್ರಮ

ಜನವರಿ 4 ರಂದು ಬ್ರೆಜಿಲ್‌ನ ಅಧ್ಯಕ್ಷರಾಗಿ ಲುಲಾ ಅಧಿಕಾರ ಸ್ವೀಕಾರ ಮಾಡಿದರು. ಅಧ್ಯಕ್ಷರ ಲುಲಾರ ಅಧಿಕಾರ ಸ್ವೀಕಾರ ಬ್ರೆಜಿಲ್‌ನ ತುಂಬೆಲ್ಲಾ ಹಬ್ಬದಂತೆ ಆಚರಿಸಲ್ಪಟ್ಟಿತ್ತು. ಎಡಪಂಥೀಯ ಅಭ್ಯರ್ಥಿಯೊಬ್ಬ ದೇಶದ ಮುಖ್ಯಸ್ಥರಾಗಿ ಆಯ್ಕೆಯಾಗುತ್ತಿರುವುದು (ಅದೂ ಶೇಕಡಾ 50 ಕ್ಕಿಂತ ಹೆಚ್ಚಿನ ಮಾತುಗಳಿಸಿ) ಚಿಲಿಯ ಅಧ್ಯಕ್ಷ ಅಂತಿಂಡೆಯವರ (70 ರ ದಶಕದ ನಂತರ) ಇದೇ ಮೊದಲು. ಬ್ರೆಜಿಲ್‌ನ ಬಹುಸಂಖ್ಯಾತ ಜನತೆ ತಮ್ಮ ಜೀವನ ತುಸುವಾದರೂ ಉತ್ತಮಗೊಳ್ಳಬಹುದು. ಬೇರೆ ರೀತಿಯ ರಾಜಕೀಯ ಬರಬಹುದು ಎಂದು ನಿರೀಕ್ಷಿಸುತ್ತಿದ್ದಾರೆ. ಇಡೀ ಜಗತ್ತಿನ ಜನತೆ ಅಧ್ಯಕ್ಷ ಲುಲಾರ ಆಡಳಿತ ಐಎಂಎಫ್, ವಿಶ್ವಬ್ಯಾಂಕ್, ಡಬ್ಲ್ಯುಟಿಓ ತ್ರಿಮೂರ್ತಿಗಳ ದಿವಾಳಿಕೋರ ದಾರಿಯಲ್ಲದೆ, ಬೇರೊಂದು ಬೆಳವಣಿಗೆ-ಆರ್ಥಿಕ ನಿರ್ವಹಣೆ ಇದೆ ಎಂದೂ ತೋರಿತು ಎಂಬ ಆಶಾಭಾವನೆಯೊಂದಿಗೆ ಬ್ರೆಜಿಲ್‌ನತ್ತ ನೋಡುತ್ತಿದ್ದಾರೆ.

ಆದ್ದರಿಂದಲೇ ಏನೋ ಲುಲಾರವರ ಅಧಿಕಾರ ಸ್ವೀಕಾರಕ್ಕೆ ಹಲವಾರು ಅಂತರಾಷ್ಟ್ರೀಯ ಗಣ್ಯ ವ್ಯಕ್ತಿಗಳು, ದೇಶಗಳ ಮುಖ್ಯಸ್ಥರು ಬಂದಿದ್ದರು. ದಕ್ಷಿಣ ಆಫ್ರಿಕಾದ ಅದ್ಯಕ್ಷ, ಕ್ಯೂಬಾದ ಅಧ್ಯಕ್ಷ, ಫಿಡೆಲ್‌ಕ್ಯಾಸ್ಟ್ರೋ, ವೆನೆಜುಲೊ ಅಧ್ಯಕ್ಷ ಚವೆಝು, ಸ್ಪೈನ್‌ನ ರಾಜಕುಮಾರ ಅವರಲ್ಲಿ ಪ್ರಮುಖರು. ಆದರೆ ಬ್ರೆಜಿಲ್ ಅಧ್ಯಕ್ಷ ಲುಲಾರ ಅಧಿಕಾರ ಸ್ವೀಕಾರದ ಸಮಾರಂಭ ಗಣ್ಯರಿಗೆ ಸೀಮಿತವಾಗಿರಲಿಲ್ಲ. ಲುಲಾ ಇಡೀ ಬ್ರೆಜಿಲ್‌ನ ಜನತೆಗೆ 'ಪಾರ್ಟಿ' ಗೆ ಆಹ್ವಾನ ನೀಡಿದ್ದರು. ಬ್ರೆಜಿಲ್‌ನ ರಾಜಧಾನಿಯ ಕೇಂದ್ರ ಭಾಗದಲ್ಲಿ ಈ 'ಪಾರ್ಟಿ'ಗೆ ಒಂದುವರೆ ಲಕ್ಷ ನೆರೆದಿದ್ದರಂತೆ. ಇಡೀ ದೇಶದಲ್ಲಿ ಫುಟ್‌ಬಾಲ್ ವಿಜಯ'ವನ್ನು ಆಚರಿಸುವ ರೀತಿಯಲ್ಲಿ ಲಕ್ಷಾಂತರ ಜನ ಸೇರಿ ಹಬ್ಬ ಮಾಡಿದರು. ರಾಜಧಾನಿಯ 'ಪಾರ್ಟಿ'ಗೆ ಬ್ರೆಜಿಲ್ ದೂರದೂರದ ಜನ ಬಂದಿದ್ದರಂತೆ. "ಬದಲಾವಣೆ ಇಂದಿನ ತುರ್ತು ಅಗತ್ಯ ಬ್ರೆಜಿಲ್‌ನ 5 ಕೋಟಿ ಬಡವರು ತನ್ನ ಅಧ್ಯಕ್ಷತೆ ಕೊನೆ ಹೊತ್ತಿಗೆ "ಮೂರು ಹೊತ್ತಿನ ಊಟ ನೆಮ್ಮದಿಯಿಂದ ಮಾಡಲು ಸಾಧ್ಯವಾದರೆ" ತನ್ನ ಬಾಳು ಸಾರ್ಥಕ ಎಂದುಕೊಳ್ಳುತ್ತೇನೆ. "ಭಯದ ಜಾಗದಲ್ಲಿ ಇಂದು ಆಶಾಭಾವನೆ ಇದೆ" ಎಂಬ ಲುಲಾ ಮಾತುಗಳು ಇಡೀ ದೇಶದಲ್ಲಿ ಯಾಕೆ ದಕ್ಷಿಣ ಅಮೇರಿಕಾ ಖಂಡದಲ್ಲೇ, ಜನಸಾಮಾನ್ಯರಲ್ಲ ಮತ್ತು ಅವರಿಗಾಗಿ ದುಡಿಯುವವರ / ಆತಂಕಗೊಳ್ಳುವವರಲ್ಲಿ ವಿದ್ಯುತ್ ಸಂಚಾರ ಮಾಡಿದೆ. ಗಣ್ಯರು ಮಾತ್ರವಲ್ಲ ವಿದೇಶಗಳ ಹಲವಾರು ಎಡಪಂಥೀಯ ಸಂಘಟನೆಗಳು/ ಪಕ್ಷಗಳು, ಟ್ರೇಡ್ ಯೂನಿಯನ್‌ಗಳ ಪ್ರತಿನಿಧಿಗಳು ಲುಲಾರವರ ಪಾರ್ಟಿಗೆ ಬಂದಿದ್ದರು ಬ್ರೆಜಿಲ್ ಜನತೆ ಹಬ್ಬ ಮಾಡಿದರು.

ಶರತ್‌ಚಂದ್ರ

ವೆನಿಜುವೆಲಾದಲ್ಲಿ ಅಮೇರಿಕ ಕುಮ್ಮಕ್ಕಿನ ಚವೇಝ್ ವಿರೋಧಿ ಮುಷ್ಕರ ಕುಸಿದು ಬೀಳುತ್ತಿದೆ

ಎಂಟು ವಾರಗಳಿಂದ ವೆಸಿಜುವೆಲಾದಲ್ಲಿ ನಡೆಯುತ್ತಿದ್ದ ಅಧ್ಯಕ್ಷ- ಚವೇಝ್ ವಿರೋಧಿ ಸಾರ್ವತ್ರಿಕ ಮುಷ್ಕರ ಪೂರ್ಣ ಕುಸಿದು ಬೀಳುವ ಹಂತದಲ್ಲಿದೆ. ಇತರ ಎಲ್ಲಾ ಕ್ಷೇತ್ರಗಳಲ್ಲಿ



ಅಮೇರಿಕನ್ ಪರೋಕ್ಷ- ಪ್ರತ್ಯಕ್ಷ ಬೆಂಬಲದ ಮುಷ್ಕರ ಈಗಾಗಲೇ ಕುಸಿದು ಬಿದ್ದಿದೆ. ತೈಲಕ್ಷೇತ್ರದಲ್ಲಿ ಮಾತ್ರ ಮುಷ್ಕರಕ್ಕೆ ಕುಟುಕು ಜೀವ ಹೊಂದಿದೆ. ಅದೂ ಇನ್ನೂ ಕೆಲವೇ ದಿನಗಳಲ್ಲಿ ಕುಸಿದು ಬೀಳಲಿದೆ. ಅಧ್ಯಕ್ಷ ಚವೇಜ್ ಈ ಪ್ರಜಾತಂತ್ರ- ವಿರೋಧಿ ಮುಷ್ಕರವನ್ನು ಮುರಿಯಲು ಬಲಪ್ರಯೋಗ ಮಾಡಲು ನಿರ್ಧರಿಸಿದ್ದರಿಂದ ಇಷ್ಟು ಕಾಲ ಮುಂದುವರೆದಿದೆ. ತೈಲ ಕ್ಷೇತ್ರದಲ್ಲಿ ತೈಲ ಉತ್ಪಾದನೆ ಮುಷ್ಕರ ಆರಂಭದ ದಿನಗಳಲ್ಲಿ ನಿಂತುಹೋಗಿದ್ದು, ಈಗ ಮುಷ್ಕರದ ಹಿಂದಿನ ಉತ್ಪಾದನೆಯ ಮೂರನೇ ಒಂದು ಭಾಗದಷ್ಟು ತಲುಪಿದೆ.

ವಿಶ್ವ ಸೋಶಿಯಲ್ ಫೋರಂಗೆ ತೆರಳಿದ ಅಧ್ಯಕ್ಷ ಚವೇಝು ಮತ್ತು ಬ್ರೆಜಿಲ್ ಅಧ್ಯಕ್ಷ ಲುಲಾ ಅವರು ಮಾತುಕತೆ ನಡೆಸಿದರು. ಅಧ್ಯಕ್ಷ ಲುಲಾ ವೆನೆಜುಲೊರ ತೈಲ ಉತ್ಪಾದನೆ ಪುನಃ ಹಿಂದಿನ ಮಟ್ಟಕ್ಕೆ ತಲುಪಿಸಲು, ಬ್ರೆಜಿಲ್‌ತೈಲ ತಂತ್ರಜ್ಞರು ಹಾಗೂ ಪರಿಣತರನ್ನು ವೆನೆಜುವೇಲಾಗೆ ಕಳಿಸುವುದಾಗಿ ಅಲ್ಲೇ ಘೋಷಿಸಿದರು. ಮೂರನೇ ಜಗತ್ತಿನ ದೇಶಗಳು ನಡುವೆ ಸಾಮ್ರಾಜ್ಯಶಾಹಿ ಹಾಗೂ ಆತಂಕ ಬಲಪಂಥೀಯರ ಪಿತೂರಿ ಮುರಿಯಲು, ಪರಸ್ಪರ ಸಹಕಾರದ ಒಂದು ಹೊಸ ಅಧ್ಯಾಯ ಪ್ರಾರಂಭವಾಗಿದೆ.

ಚಿಲಿಯಲ್ಲಿ ಇದೇ ರೀತಿ ಆಗಿನ ಚುನಾಯಿತ ಹಾಗೂ ಜನಪ್ರಿಯ ಅಧ್ಯಕ್ಷ ಅಲೆಂಡೆಯವರನ್ನು ಮಿಲಿಟರಿ ಕ್ಷಿಪ್ರ ಕ್ರಾಂತಿ ಮೂಲಕ ಉರುಳಿಸಿದ ಸಿಐಎ (CIA) 'ತಂತ್ರಗಳ ಚಿತ್ರಕಥೆ' ವೆನೆಜುವೆಲಾದಲ್ಲಿ ಕೆಲಸ ಮಾಡದೇ ಅದು ವಿಫಲವಾಗುತ್ತಿದೆ ಎನ್ನುವುದು ಅಲ್ಲಿನ ಘಟನೆಗಳಿಂದ ಸ್ಪಷ್ಟವಾಗಿದೆ. ಇದು ದಕ್ಷಿಣ ಅಮೇರಿಕಾದಿಂದ ಇನ್ನೊಂದು ಒಳ್ಳೆ ಸುದ್ದಿ. ○

'ಮಧುಶಾಲಾ'ದ ಮಾಂತ್ರಿಕ

ಹರಿವಂಶರಾಯ ಬಚ್ಚನ್ - ಹಿಂದೀ ಸಾಹಿತ್ಯದ ದಿಗ್ಗಜನ ಅಂತ್ಯ

ಶರತ್‌ಚಂದ್ರ

ಹರಿವಂಶರಾಯ್ ಬಚ್ಚನ್ ಹಿಂದೀ ಸಾಹಿತ್ಯದ ಕಾವ್ಯಕ್ಷೇತ್ರದ ದಿಗ್ಗಜರಲ್ಲೊಬ್ಬರು. ಆದರೆ ಅವರು ಇತ್ತೀಚೆಗೆ ತೀರಿಕೊಂಡಾಗ ಅವರನ್ನು ದೇಶದ ಬಹುಪಾಲು ಜನ 'ಸೀನಿಯರ್ ಬಚ್ಚನ್'(ಅಮಿತಾಬ್ ಬಚ್ಚನ್‌ರ ತಂದೆ) ಆಗಿ ಹೆಚ್ಚು ಗುರುತಿಸುತ್ತಿದ್ದರು. 96ನೇ ಇಳಿವಯಸ್ಸಿನಲ್ಲಿ ತೀರಿಕೊಂಡ ಅವರಿಗೆ, ಅವರ ಯೌವ್ವನದಲ್ಲಿ ಅಮಿತಾಬ್‌ಗೆ ಇದ್ದಷ್ಟೇ ಸ್ಟಾರ್ ವ್ಯಾಲ್ಯೂ ಇತ್ತು ಎಂದು ಬಹಳ ಜನರಿಗೆ ಗೊತ್ತಿರಲಿಕ್ಕಿಲ್ಲ. ಕವನ ಸಂಕಲನ 'ಮಧು ಶಾಲಾ' ಅವರಿಗೆ ಆ ಕೀರ್ತಿ ತಂದುಕೊಟ್ಟಿತು. ಒಬ್ಬ ಕವಿಗೆ ಇಂತಹ 'ಸ್ಟಾರ್ ವ್ಯಾಲ್ಯೂ' ಬರುವುದು ಅಪರೂಪ. ಅವರ 'ಮಧುಶಾಲಾ' ಎಷ್ಟು ಜನಪ್ರಿಯವಾಗಿತ್ತೆಂದರೆ, ಬಚ್ಚನ್ ಅವರಿಗೆ ಅದನ್ನು ಕವಿ ಸಮ್ಮೇಳನಗಳಲ್ಲಿ ಹಾಡಲು ನೂರಾರು ಕರೆಗಳು ಬರುತ್ತಿದ್ದವು. ಅದನ್ನು ಇಂಗ್ಲೀಷ್ ಮತ್ತು ಭಾರತದ ಹಲವು ಭಾಷೆಗಳಿಗೆ ಅನುವಾದ ಮಾಡಲಾಯಿತು. 'ಮಧು ಶಾಲಾ'ದ ಹಾಡುಗಳು ಕ್ಯಾಸೆಟ್‌ಗಳು, ಸೀಡಿಗಳ, ರೇಡಿಯೋ ಮೂಲಕ ಲಕ್ಷಾಂತರ ಜನರನ್ನು ತಲುಪಿದೆ. ನೃತ್ಯನಾಟಕವಾಗಿ, ಅದು ತೆರೆ ಕಂಡಿದೆ. 1935 ರಲ್ಲಿ ಮೊದಲ ಬಾರಿಗೆ ಪ್ರಕಾಶಿತವಾದ 'ಮಧುಶಾಲಾ' ದ ಸಾಲುಗಳು ಇಂದಿಗೂ ಲಕ್ಷಾಂತರ ಜನರ ನಾಲಗೆ ತುದಿಯಲ್ಲಿವೆ. ಇಷ್ಟು ಪ್ರಸಿದ್ಧಿ, ಜನಪ್ರಿಯತೆ ಪಡೆದ ಸಾಹಿತ್ಯ ಕೃತಿ (ಅದರಲ್ಲೂ ಕವನಗಳಲ್ಲಿ) ಬಹುಶಃ ಭಾರತೀಯ ಭಾಷೆಗಳ ಸಾಹಿತ್ಯದಲ್ಲಿ ಇನ್ನೊಂದಿಲ್ಲ.

ಮದಿರೆಯ ಪ್ರತಿಮೆ

ಬಚ್ಚನ್ 30ಕ್ಕೂ ಹೆಚ್ಚು ಕವನಸಂಕಲನಗಳನ್ನು ಪ್ರಕಟಿಸಿದ್ದರೂ, ಅವರ ಕಾವ್ಯತ್ರಿವಳಿಗಳಾದ - 'ಮಧುಶಾಲಾ', 'ಮಧುಬಾಲಾ' ಮತ್ತು 'ಮಧು ಕಲಶ' ಅತ್ಯಂತ ಜನಪ್ರಿಯತೆ, ಪ್ರಸಿದ್ಧಿಗಳಿಸಿದವು.


ಬಚ್ಚನ್ ಎಂದೂ ಒಂದು ತೊಟ್ಟು ಮಧ್ಯ ಸವಿಯದಿದ್ದರೂ, ಮದಿರೆ (ಮದ್ಯ) ಮತ್ತು ಮದಿರಾಗ್ರಹ (ಮಧುಶಾಲಾ) ಅವರ ಕಾವ್ಯವನ್ನು ಆವರಿಸಿದ ಪ್ರತಿಮೆಗಳಾದವು. ಬಚ್ಚನ್‌ರ ಮದಿರೆ ಮತ್ತು ಮದಿರಾಗೃಹ ಸಾಮಾಜಿಕ, ಧಾರ್ಮಿಕ ಮತ್ತು ನೈತಿಕ ಕಟ್ಟುಪಾಡುಗಳನ್ನು ಮುರಿದ ವೈಯಕ್ತಿಕ ಸ್ವಾತಂತ್ರ್ಯದ ಪ್ರತಿಮೆಯಾಗಿತ್ತು. ಒಮರ್ ಖಯ್ಯಾಮನ 'ರುಬಾಯತ್'ನ್ನು ಹಿಂದಿಗೆ ಭಾಷಾಂತರಿಸಿದ ಬಚ್ಚನ್‌ರಿಗೆ ಮದಿರೆ ಒಂದು ಪ್ರತಿಮೆಯಾಗಿ ಅತ್ಯಂತ ಪ್ರಿಯವಾಗಿತ್ತು. ಅದರ ಅಗಾಧ ಸಾಧನೆಗಳ ಬಗೆಗೆ ಅವರಿಗೆ ಅರಿವೂ ಇತ್ತು.

30 ರ ದಶಕದ ಆರಂಭದಲ್ಲಿ ಸ್ವಾತಂತ್ರ್ಯ ಚಳುವಳಿಯ ದೊಡ್ಡ ಅಲೆಯಿಂದ ಬಚ್ಚನ್ ಪ್ರಭಾವಿತರಾಗಿದ್ದವರು. ತಮ್ಮ ವಿಶ್ವವಿದ್ಯಾಲಯ ಶಿಕ್ಷಣಕ್ಕೆ ಶರಣು ಹೊಡೆದು, ಚಳುವಳಿಗೆ ದುಮುಕಿದ್ದವರು. ಕೆಲವು ವರ್ಷಗಳ ನಂತರ ವಿಶ್ವವಿದ್ಯಾಲಯಕ್ಕೆ ಮರಳಿದರೂ, ಸ್ವಾತಂತ್ರ್ಯ ಚಳುವಳಿ ಬಚ್ಚನ್‌ರ ಮೇಲೆ ಅಳಿಯದ ಛಾಪು ಮೂಡಿಸಿತ್ತು. ವಿದೇಶಿಯರ ಆಡಳಿತದಿಂದ ಮಾತ್ರವಲ್ಲ, ಇನ್ನೂ ಹಲವಾರು ಕಟ್ಟುಪಾಡುಗಳಿಂದ, ಒಬ್ಬ ವ್ಯಕ್ತಿ 'ಸ್ವಾತಂತ್ರ್ಯ' ಪಡೆಯಬೇಕು. ಈ ಸ್ವಾತಂತ್ರ್ಯ ಸಂಭ್ರಮವಾಗಬೇಕು. ಉತ್ತಮವಾಗಬೇಕು. 'ಮಧುಶಾಲಾ' ಬಚ್ಚನ್‌ರ ಇಂತಹ ಸ್ವಾತಂತ್ರ್ಯದ ತುಡಿತದ ಅಭಿವ್ಯಕ್ತಿಯಾಗಿತ್ತು.

'ಮಧುಶಾಲಾ' ಕ್ಕೆ ಏಕೀ ಅದ್ಭುತ ಸ್ವಾಗತ?

ಬಚ್ಚನ್‌ರ 'ಮದುಶಾಲಾ' ಕ್ಕೆ ಸಿಕ್ಕಿದ ಅದ್ಭುತ ಸ್ವಾಗತವನ್ನು ಅರ್ಥಮಾಡಿಕೊಳ್ಳಬೇಕಾದರೆ, ಆಗಿನ ಹಿಂದಿ ಭಾಷಿಕ ಪ್ರದೇಶಗಳ ಮತ್ತು ಇಡೀ ದೇಶದ ರಾಜಕೀಯ ಸಾಮಾಜಿಕ ಸಾಂಸ್ಕೃತಿಕ ಸಂದರ್ಭ ನೋಡಬೇಕು. ವಿದೇಶಿ ಆಡಳಿತದ ದಾಸ್ಯದಿಂದ, ವಿಮೋಚನೆಯಾಗಿ ಆಧುನಿಕ ಭಾರತ ಕಟ್ಟುವ ಸಾಮಾಜಿಕ-ರಾಜಕೀಯ ಆಶಯಗಳನ್ನು ಸ್ವಾತಂತ್ರ್ಯ ಚಳುವಳಿ ಆಗಲೇ ಜನಜನಿತವಾಗಿಸಿತ್ತು. ಸ್ವಾತಂತ್ರ್ಯದ ಸಾಂಸ್ಕೃತಿಕ ಆಯಾಮಗಳ್ಳ ಹುಡುಕಾಟಕ್ಕೆ ರಂಗ ಸಿದ್ಧವಾಗಿತ್ತು. ಆದರೆ ಇನ್ನೂ ಆರಂಭವಾಗಿರಲಿಲ್ಲ. ಆಗ ಹಿಂದೀ ಸಾಹಿತ್ಯದಲ್ಲಿ ರಮ್ಯವಾದಿ (ರೋಮ್ಯಾಂಟಿಕ್) ಚಳುವಳಿ ಮುಖ್ಯ ಧಾರೆಯಾಗಿತ್ತು. ಇದನ್ನು ಹಿಂದಿ ಸಾಹಿತ್ಯದಲ್ಲಿ 'ಛಾಯಾವಾದ್' ಎಂದು ಕರೆಯುತ್ತಿದ್ದರು. ಧಾರ್ಮಿಕ-ಪೌರಾಣಿಕ ಸಂಕೇತಗಳ ಪರಿಕಲ್ಪನೆಗಳನ್ನು ತೊರೆದು, ಸಾಮಾನ್ಯ ಮನುಜರನ್ನು ಸಾಂಸ್ಕೃತಿಕ ಜಗತ್ತಿನ ಕೇಂದ್ರಬಿಂದುವಾಗಿಸಿ ರಮ್ಯವಾದಿ, ಚಳುವಳಿ, ಹಿಂದಿ ಸಾಹಿತ್ಯವನ್ನು ಮುನ್ನಡೆಸಿತ್ತು.

ಆದರೆ ರಮ್ಯವಾದಿ ಸಾಹಿತ್ಯದ ಪ್ರತಿಮೆಗಳು ಮತ್ತು ಭಾಷೆ ಇನ್ನೂ ಧಾರ್ಮಿಕ ಪೌರಾಣಿಕ ಯುಗ ದಾಟಿ ಬಂದಿರಲಿಲ್ಲ. ಸಾಮಾನ್ಯ ಜನರಿಗೆ, ಸಾಹಿತ್ಯಾಸಕ್ತರಿಗೆ ನಿಲುಕದ್ದು, ದೂರದ್ದು ಎನಿಸುತ್ತಿತ್ತು. ಕೃತಕವೂ ಎನ್ನಿಸುತ್ತಿತ್ತು. ಬಚ್ಚನ್‌ರ 'ಮದಿರೆ' ಮತ್ತು 'ಮದಿರಾಗೃಹ' ದ ಪ್ರತಿಮೆ 'ಛಾಯಾವಾದ'ದ ಈ ಕೊರತೆಯನ್ನು ತುಂಬಿಸಿ ಅದನ್ನು ಅತ್ಯಂತ ಜನಪ್ರಿಯವಾಗಿಸಿತು. ಅಷ್ಟರಮಟ್ಟಿಗೆ ಬಚ್ಚನ್ 'ಛಾಯಾವಾದಿ' ಪಂಥದ ಕವಿಯಾಗಿದ್ದರೂ, ಅದರಲ್ಲೇ ಹೊಸ ಉತ್ತರ ಸಾಧಿಸಿದ, ಹೊಸ ಭಾಷೆ ಮೂಡಿಸಿದ ಬಂಡುಕೋರರೂ ಆಗಿದ್ದರು. ಸಾಮಾನ್ಯ ಜನರ ದೈನಂದಿನ ಬದುಕಿನ ಸೊಬಗು, ಆಶೋತ್ತರಗಳು, ದೈನಂದಿನ ಬದುಕಿನ ಪ್ರತಿಮೆಗಳಲ್ಲೇ ಮೂಡಿ ಬಂದವು. 'ಮಧುಶಾಲಾ' ದೈನಂದಿನ ಓರ್ವ-ಜೀವನದ ಉತ್ಸವ, ಸಂಭ್ರಮ, ಎಲ್ಲಾ ಕಟ್ಟುಪಾಡುಗಳನ್ನು ಕಡಿದುಹಾಕುವ 'ಸ್ವಾತಂತ್ರ್ಯ'ದ ತುಡಿತಕ್ಕೆ ದನಿಯಾಯಿತು.



ಪುತ್ರ ಅಮಿತಾಬ್ ಬಚನ್‌ರೊಂದಿಗೆ ಹರಿವಂಶರಾಯ್

ಮಧುಶಾಲಾ' ಸ್ವಾತಂತ್ರ್ಯದ ಆನಂದದ ಪ್ರತಿಮೆ ಮಾತ್ರ ಧರ್ಮಗ್ರಂಥ, ಧರ್ಮಗುರು, ಧರ್ಮಸ್ಥಳಗಳ 'ಸ್ವಾಗತ' 'ಪ್ರವೇಶ' ಎನ್ನುತ್ತಾರೆ ಬಚ್ಚನ್. ಸತ್ತಮೇಲೂ 'ರಾಮನಾಮ ಮಾತ್ರ ಸತ್ಯ' ಎನ್ನುವವನಲ್ಲ ನಾನು. ಮಧುಶಾಲಾವೇ ನಿಜವಾದ ಸತ್ಯ(ಬಾಕ್ಸ್‌ನಲ್ಲಿರುವ 'ಮಧುಶಾಲಾ'ದ ಎರಡು ಕವನಗಳ ಸಾಲುಗಳನ್ನು ನೋಡಿ) ಮಂದಿರ, ಮಸೀದಿ ಜನರನ್ನು ಒಡೆಯುತ್ತದೆ. 'ಮದುಶಾಲಾ'ದಲ್ಲಿ ಜನ ಒಂದಾಗಿ, ಒಂದೇ ಗ್ಲಾಸಿನಲ್ಲಿ, ಒಂದೇ ಮದಿರೆಯನ್ನು, ಆನಂದಿಸುತ್ತಾರೆ ಎನ್ನುತ್ತಾರೆ ಬಚ್ಚನ್. ಇಲ್ಲಿ 'ಮಧುಶಾಲಾ' ಜೀವನದಿಂದ ಓಡಿಹೋಗುವ ದೈನಂದಿನ ಕಷ್ಟಕೋಟಲೆಗಳಿಂದ ಪಾರಾಗುವ ಮದಿರೆಗೆ ಶರಣು ಹೋಗುವ ಸ್ಥಳವಾಗುವುದಿಲ್ಲ. ಜೀವನ-ವಿಮುಖ ಧೋರಣೆಯ ಪ್ರತಿಮೆ ಆಗುವುದಿಲ್ಲ ಎಂದು ಗಮನಿಸಬೇಕು. ಬದಲಾಗಿ ಆಗಿನ ಸಂದರ್ಭದ ರಾಜಕೀಯ ಸಾಮಾಜಿಕ-ಸಾಂಸ್ಕೃತಿಕ, ಕಟ್ಟುಪಾಡು, ಬೇಡಿಗಳನ್ನು ಮುರಿದು ಜೀವನದ 'ಸಂಭ್ರಮ' 'ಉತ್ಸವ' ಆನಂದಿಸುವ ಅಂತಿಮ ವಿಮೋಚನೆಯ ಪ್ರತಿಮೆಯಾಗುತ್ತದೆ. ಇದರಿಂದಾಗಿಯೇ 'ಮಧುಶಾಲಾ'ಕ್ಕೆ ಅಂತಹ ಅದ್ಭುತ ಸ್ವಾಗತ ಸಿಕ್ಕಿತು.

ಬಚ್ಚನ್‌ರ 'ಮಧುಶಾಲಾ' ಹಿಂದೀ ಸಾಹಿತ್ಯದಲ್ಲೂ, ಕಾವ್ಯಕ್ಷೇತ್ರದಲ್ಲಿ, ಕಾವ್ಯಕ್ಷೇತ್ರ
ದಲ್ಲೂ, 'ಛಾಯಾವಾದಿ' ಸಾಹಿತ್ಯ ಚಳುವ
ಯಲ್ಲೂ ಕ್ರಾಂತಿ ಮಾಡಿತು. ಅದೇಶ ಸಮಯದ
'ಛಾಯಾವಾದಿ' ಚಳುವಳಿಯ ಮಿತಿ
ಕಟ್ಟೊಡೆದು ಹೆಚ್ಚು 'ರ್ಯಾಡಿಕಲ್' ಆದ 'ನ
ಕವಿತಾ' ಹಿಂದೀ ಕಾವ್ಯದ ಮುಖ್ಯಧಾರೆಯಾಗಿ
ತಮ್ಮದೇ 'ಛಾಯಾವಾದಿ' ಶೈಲಿಯಲ್ಲಿ ಕಾವ್ಯ
ಮುಂದುವರೆಸಿದ ಬಚ್ಚನ್ ಕೊನೆಕೊನೆಗೆ 'ನ
ಕವಿತಾ'ದ ಸಾಗರದಲ್ಲಿ ಒಂದು 'ಛಾಯಾವಾ
ದ್ವೀಪವಾಗಿದ್ದರು. ಮಧುಶಾಲಾ -ತ್ರಿವಳಿ
ನಂತರ ಅವರ ಕಾವ್ಯ ಅಷ್ಟೇನೂ ಗಮ
ಸೆಳೆಯಲಿಲ್ಲ. ಮತ್ತೊಮ್ಮೆ ಬಚ್ಚನ
ಲೇಖನಿಯಿಂದ ಗಮನಾರ್ಹ ಸಾಹಿತ್ಯ ಬಂದ
ಅವರ ಇಳಿವಯಸ್ಸಿನಲ್ಲಿ ಅವರ ನಾ
ಸಂಪುಟಗಳ ಆತ್ಮಕಥೆ 'ನೀದ್ ಕೆ ನಿರ್ಮಾ
ಫಿರ್' (ಹೊಸ ಗೂಡು ಕಟ್ಟಲು) ಅತ್ಯ
ಮಹತ್ವದ ಕೃತಿ ಎಂದು ಪರಿಗಣಿತವಾಗಿ
ಅದರಲ್ಲಿ ಬಚ್ಚನ್‌ರ ತುಂಬು ಸಾರ್ಥಕ ಜೀವ
ಚಿತ್ರ ಮಾತ್ರವಲ್ಲ, ಜೀವನದ ಬಗ್ಗೆ ಆಳವಾ
ನೋಟವೂ ಇದೆ.

ತುಂಬು ಸಾರ್ಥಕ ಜೀವನ

ಅಲಹಾಬಾದಿನ ಹತ್ತಿರ ಸಣ್ಣ ಪಟ್ಟ
ವೊಂದರಲ್ಲಿ ಸಾಮಾನ್ಯ ಕಾಯಸ್ಥ ಕುಟು
ವೊಂದರಲ್ಲಿ ಜನಿಸಿದ್ದ ಹರಿವಂಶರಾಯ
ಬಚ್ಚನ್‌ರದ್ದು ನಿಜವಾಗಿಯೂ ತುಂಬು ಜೀವ
ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿ ದೆಸೆಯ
ಧುಮುಕಿ ಪುನಃ ಮರಳಿ ವಿದ್ಯಾಭ್ಯಾ
ಮುಗಿಸಿದರು. 1941ರಿಂದ 1952 ರವ
ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿ
ವಿಭಾಗದಲ್ಲಿ ಅಧ್ಯಾಪಕರಾಗಿದ್ದರು. ಆ ಮೇ
ಎರಡು ವರ್ಷಗಳನ್ನು ಕೆಂಬ್ರಿ
ವಿಶ್ವವಿದ್ಯಾಲಯದಲ್ಲಿ ಯೇಟ್ಸ್‌ನ ಮ
ಡಾಕ್ಟರೇಟ್ ಪ್ರಭಂಧ ತಯಾರಿಸಿದರು. ಆಮ
ವಾಪಸಾಗಿ ಅಲಹಾಬಾದ್ ವಿಶ್ವವಿದ್ಯಾಲಯ
ಅಧ್ಯಾಪಕ ವೃತ್ತಿ ಮುಂದುವರೆಸಿದ್ದಲ್ಲದೆ, ಮು
ಆಲ್ ಇಂಡಿಯಾ ರೇಡಿಯೋದಲ್ಲೂ ದುಡಿದ
ಆಮೇಲೆ ದೆಹಲಿಯಲ್ಲಿ ವಿದೇಶ ಸಚಿವಾಲಯ
ವಿಶೇಷ ಹಿಂದಿ ಆಫೀಸರ್ ಆಗಿ ಕೆ
ಮಾಡಿದರು. 'ರುಬಾಯತ್' ಅಲ್ಲ
ಶೇಕ್ಸ್‌ಪಿಯರ್‌ನ 'ಮ್ಯಾಕ್‌ಬೇತ್', 'ಒಥೆಲ
ಮತ್ತು 'ಭಗವದ್ ಗೀತಾ' ವನ್ನು ಹಿಂ
ಭಾಷಾಂತರ ಮಾಡಿ ಹಿಂದಿ ಸಾಹಿತ್ಯವ
ಶ್ರೀಮಂತಗೊಳಿಸಿದ್ದಾರೆ.

1969 ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1
ರಲ್ಲಿ ಪದ್ಮಭೂಷಣ ವಲ್ಲದೆ, ಸೋವಿಯ
ಲ್ಯಾಂಡ್ ನೆಹ
ಪ್ರಶಸ್ತಿ, ಆಫ್ರೋ
ಏಶಿಯನ್ ಬರ
ಗಾರರ ಸಮ್ಮೇಳ
ಕಮಲ 'ಪ್ರಶಸ್ತಿ' ಸರ
ಸಮ್ಮಾನ್ - ಹಿ
ಪ್ರಶಸ್ತಿಗಳೂ ಬಚ್ಚನ
ಬೆನ್ನು ಬಿಡಲಿಲ್ಲ.
ಅಮಿತಾಬ್ ಸೂಪ
ಸ್ಟಾರ್
ಮುಂಬಯಿಯಲ್ಲಿ ನೆಲೆಸಿದ ಮೇಲೆ, ಇಳಿವಯ
ಜೀವನವನ್ನು ಬಚ್ಚನ್ ಮುಂಬಯಿಯ
ಕಳೆದರು. ಇನ್ನೊಂದು ಬೌಂಡರಿ ಬಾರಿಸಿ
ಸೆಂಚುರಿ ಮುಗಿಸುತ್ತಿದ್ದ ಬಚ್ಚನ್ ಹಿಂದಿ ಸಾಹಿ
20ನೇ ಶತಮಾನದ ದಿಗ್ಗಜಗಳಲ್ಲಿ ಒಬ್ಬರಾಗಿದ್ದ
ಅವರ ನಿಧನ ಒಂದು ಯುಗದ ಅಂತ್ಯ. ಆ
ಅವರ 'ಮಧುಶಾಲಾ' ದ ಸಾಲುಗಳು ಹಿ
ಬಲ್ಲವರ ನಾಲಗೆಯಲ್ಲಿ ಎಂದೆಂದಿ
ಕುಣಿದಾಡುತ್ತಿರುತ್ತದೆ.

ನನ್ನ 'ಮಧುಶಾಲಾ'ಗೆ ಇವರಿಗೆ ಮಾತ್ರ ಪ್ರವೇಶ

ಧರ್ಮ್ ಗ್ರಂಥ ಸಬ್ ಜಲಾ ಚುಕಿ ಹೈ
ಜಿಸ್ ಕೆ ಭೀತರ್ ಕಿ ಜ್ವಾಲಾ ಮಂದಿರ್,
ಮಸ್‌ಜಿದ್, ಗಿರಜೆ ಸಬ್‌ಕುಛ್
ತೋಡ್ ಚುಕಾ ಜೋ ಮತ್‌ವಾಲಾ
ಪಂಡಿತ್, ಮೊಮಿನ್, ಪಾದರಿಯೊಂಕೆ
ಫಂದೋಂಕೊ ಜೋ ಕಾಟ್ ಚುಕಾ
ಕಹ್ ಸಕ್‌ತಿ ಹೈ ಆಜ್ ಉಸೀ ಕಾ
ಸ್ವಾಗತ್ ಮೇರೀ ಮಧುಶಾಲಾ

ಎಲ್ಲಾ ಧರ್ಮಗ್ರಂಥಗಳನ್ನೂ
ಅವರ ಆಂತರಿಕ ಜ್ವಾಲೆ ಸುಟ್ಟಿರಬೇಕು
ಮಂದಿರ, ಮಸೀದಿ, ಇಗರ್ಜಿಗಳನ್ನು
ಒಡೆದಿರಬೇಕು
ಎಲ್ಲಾ ಧರ್ಮಗುರುಗಳ ಕಬಂಧ
ಬಾಹುಗಳನ್ನು ಕಡೆದಿರಬೇಕು
ನನ್ನ ಮಧುಶಾಲಾಗೆ ಇವರಿಗೆ ಮಾತ್ರ ಪ್ರವೇಶ

'ರಾಮನಾಮವಲ್ಲ - ಮಧುಶಾಲಾವೇ ಸತ್ಯ'

ಮೆರೇ ಅಧಜಗರೋಂ ಪರ್ ಹೋ ಅಂತಿಮ್
ವಸ್ತು ನ ತುಲಸೀದಲ್ ಪ್ಯಾಲಾ
ಮೆರಿ ಜಿಹ್ವಾ ಪರ್ ಹೋ ಅಂತಿಮ್
ವಸ್ತು ನ ಗಂಗಾಜಲ ಹಾಲಾ
ಮೆರೆ ಶವ್ ಕೆ ಪೀಛೆ ಚಲನೇ ವಾಲೋ
ಯಾದ್ ಇಸೇ ರಕ್ ನಾ
ರಾಮ್ ನಾಮ್ ಹೈ ಸತ್ಯ ನ ಕೆಹನಾ
ಕೆಹನಾ ಸಚ್ಚಿ ಮಧುಶಾಲಾ

ನನ್ನ ತುಟಿಯಲ್ಲಿರುವ ಕೊನೆಯ ವಸ್ತು
ತುಳಸಿ ದಳವಲ್ಲ ಮದಿರೆಯ ಗ್ಲಾಸು
ನನ್ನ ನಾಲಗೆಯಲ್ಲಿರುವ ಕೊನೆಯ ವಸ್ತು
ಗಂಗಾಜಲವಲ್ಲ ಮದಿರೆ
ನನ್ನ ಶವದ ಹಿಂದೆ ನಡೆಯುವರೆಲ್ಲಾ
ನೆನಪಿಡಿ ನೀವು ಹೇಳಬೇಕಾದ ಸತ್ಯ
ರಾಮನಾಮವಲ್ಲ, ಮಧುಶಾಲಾ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH